ವಾರ್ಷಿಕ ಚಂದಾ ರೂ.25/-

# ಜನಪದ

ಸಂಪುಟ-05 • ಸಂಚಿಕೆ-09 • ಜೂನ್ 2022



## ಪರಿಸರ ಸಂರಕ್ಷಣೆ; ನಮ್ಮೆಲ್ಲರ ಹೊಣೆ

Downloaded From:www.kpscvaani.com





ಮೇ 19 ಮತ್ತು 20 ರಂದು ಮುಖ್ಯಮಂತ್ರಿ ಬಸವರಾಜ ಎಸ್ ಬೊಮ್ಮಾಯಿ ಅವರು ಬೆಂಗಳೂರಿನ ವಿವಿಧ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮಳೆ ಹಾನಿ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ಸಂದರ್ಭದಲ್ಲಿ ನಗರಾಭಿವೃದ್ಧಿ ಸಚಿವರಾದ ಬೈರತಿ ಬಸವರಾಜ್, ಶಾಸಕರಾದ ಕೆ.ಜೆ.ಜಾರ್ಜ್, ನಗರಾಭಿವೃದ್ಧಿ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ ಮತ್ತಿತರ ಗಣ್ಯರು ಉಪಸ್ಥಿತರಿದ್ದರು.

Downloaded From:www.kpscvaani.com

ವಾರ್ಷಿಕ ಚಂದಾ ರೂ.25/-

# ವಾರ್ತಾ ಜನಪದ

ಸಂಪುಟ-05 • ಸಂಚಿಕೆ-09 • ಜೂನ್ 2022




**06** ಬೆಂಗಳೂರು ತಂತ್ರಜ್ಞಾನ ಶೃಂಗ ಸಮಾವೇಶಕ್ಕೆ ಸರ್ಕಾರದಿಂದ ಸಕಲ ಸಿದ್ಧತೆ
• ಬಿ.ಎಸ್.ವೆಂಕಟೇಶ ಪ್ರಸಾದ್

**10** ಯುವ ಕ್ರೀಡಾ ಮನಸುಗಳ ಬಲ ಹೆಚ್ಚಿಸಿದ ಖೇಲೋ ಇಂಡಿಯಾ
• ರಂಜನ್ ಗೌಡ

**14** ಕುಂದು-ಕೊರತೆಗಳ ಪರಿಹಾರಕ್ಕಾಗಿ ಕಲ್ಯಾಣಮಿತ್ರ ಸಹಾಯವಾಣಿ
• ಎನ್.ನಾಗರತ್ನಮ್ಮ






2017ನೇ ಸಾಲಿನ ರಾಜ್ಯ ಚಲನಚಿತ್ರ ಪ್ರಶಸ್ತಿ ಪ್ರದಾನ

**20** ಬರದ ನಾಡು ವಿಜಯಪುರ ಜಿಲ್ಲೆಯಲ್ಲಿ ಹರಿಯಲಿದೆ ನೀರು
• ಗವಿಸಿದ್ದಪ್ಪ ಹೊಸಮನಿ

**22** ಕಾರ್ಮಿಕರಿಗೆ ವಿವಿಧ ಸೌಲಭ್ಯಗಳನ್ನು ಒದಗಿಸುತ್ತಿರುವ ಹಟ್ಟಿ ಚಿನ್ನದ ಗಣಿ
• ರಮೇಶ ಗೌಡೂರು

**24** ಜನರ ಸುರಕ್ಷತೆಗಾಗಿ ಎಮರ್ಜೆನ್ಸಿ ಕಾಲ್ ಬಾಕ್ಸ್
• ಆರ್.ರೂಪಕಲಾ






ಸೇಬು ಬೆಳೆ : ಶಿರಾ ಆಗಲಿದೆಯೇ ಕಾಶ್ಮೀರ ?
• ಡಿ.ಪಿ.ಮುರಳೀಧರ್

**30** ಹಸಿರು ಯೋಗಿ: ಈರಣ್ಣ ಕೋಸಗಿ
• ಈರಣ್ಣ ಬೆಂಗಾಳಿ

**35** ಕರ್ನಾಟಕದ ಹೆಮ್ಮೆಯ ತಳಿ: ದೇವಣಿ ಗೋತಳಿ
• ಡಾ॥ ಪ್ರಕಾಶ್ ಕುಮಾರ್ ರಾಥೋಡ್
ಡಾ॥ ಎನ್. ವಿಜಯಕುಮಾರ್

**38** ಪರಿಸರ ಸ್ನೇಹಿ ಉದ್ಯಮದಲ್ಲಿ ಸ್ವಾವಲಂಬಿ ಜೀವನ ಕಂಡುಕೊಂಡ ಪದವೀಧರೆ
• ಗಣಪತಿ ಹಾಸ್ಪುರ

**40** ಸ್ವತಂತ್ರ ರಾಜ್ಯದ ಕನಸು ಕಂಡ ಬಿದನೂರಿನ ದೊಂಡಿಯಾ ವಾಘ್
• ಎನ್. ಜಗನ್ನಾಥ ಪ್ರಕಾಶ್

**42** ಪ್ರವಾಸೋದ್ಯಮ ಇಲಾಖೆಯಿಂದ ರೇಷ್ಮೆ ಪ್ರವಾಸ ಯೋಜನೆ
• ಪಿ. ವಿ. ರಿಷಿಕೇಶ್






ಸ್ವಸ್ಥ ವಿಶ್ವಕ್ಕೆ ಯೋಗದ ಕೊಡುಗೆ
• ಡಾ. ಗುರುರಾಜ ಜೋ ಶೆಟ್ಟಿಹಳ್ಳಿ

**47** ಅಂಧರು ಕೆತ್ತಿದ ಸುಂದರ ರಥ
• ಕಿಶನ್‌ರಾವ್ ಕುಲಕರ್ಣಿ

**50** ಪದಬಂಧ-31



ಪ್ರಧಾನ ಸಂಪಾದಕರು
**ಡಾ॥ ಪಿ. ಎಸ್. ಹರ್ಷ, ಐಪಿಎಸ್**
ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಸಂಪಾದಕೀಯ ಸಲಹೆ
**ಡಿ.ಪಿ. ಮುರಳೀಧರ್**
ಜಂಟಿ ನಿರ್ದೇಶಕರು

**ಸಹನಾ ಎಂ.**
ಉಪ ನಿರ್ದೇಶಕರು

ಉಪ ಸಂಪಾದಕರು
**ಬಿ. ಜಿ. ಪೂರ್ಣಿಮ**

ಪ್ರಕಾಶಕರು
ಆಯುಕ್ತರು
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು - 560 001
Ph : 080-22028103 / 22028023
email : varthajanapada@yahoo.co.in
https://dipr.karnataka.gov.in

ಮುದ್ರಕರು
ಲಾವಣ್ಯ ಮುದ್ರಣ
# 19, ವಿದ್ಯಾಪೀಠ ವೃತ್ತ, ಬನಶಂಕರಿ 1ನೇ ಹಂತ, ಬೆಂಗಳೂರು-50


ಲೇಖಕರ ಅಭಿಪ್ರಾಯಗಳು ಸರ್ಕಾರದ ಅಭಿಪ್ರಾಯಗಳಲ್ಲ

Downloaded From:www.kpscvaani.com

# ನಿಮ್ಮ ಅನಿಸಿಕೆ

ಜನಪದ ಮೇ ಸಂಚಿಕೆಯಲ್ಲಿ ಎನ್. ಜಗನ್ನಾಥ್ ಪ್ರಕಾಶ್ ಅವರು ನಿಶಸ್ತ್ರೀಕರಣ ಕಾಯ್ದೆ ತಂದ ಬ್ರಿಟಿಷರ ವಿರುದ್ಧ ತಿರುಗಿ ಬಿದ್ದ ಹಲಗಲಿ ಬೇಡರ ಸ್ವಾಭಿಮಾನದ ಪ್ರತೀಕಾರವನ್ನು ಮನ ಮುಟ್ಟುವಂತೆ ವಿವರಿಸಿದ್ದಾರೆ. ಆಗಿನ ಮುಧೋಳ್, ಸಂಸ್ಥಾನದ ಚಿಕ್ಕ ಹಳ್ಳಿಯಾದರೂ ಆತ್ಮ ರಕ್ಷಣೆ ಮತ್ತು ಭೇಟೆಗಾಗಿ ಬಳಸುತ್ತಿದ್ದ ಆಯುಧವನ್ನು ಒಪ್ಪಿಸದೇ ಬ್ರಿಟಿಷ್ ಸೇನೆಯ ವಿರುದ್ಧ ತಿರುಗಿಬಿದ್ದು ಹೋರಾಡಿದ ರೋಚಕ ಕಥೆ ಆ ಭಾಗದಲ್ಲಿ ಲಾವಣಿಯಾಗಿ ಪ್ರಚಲಿತದಲ್ಲಿದೆ. ಇಂಥಾ ಲೇಖನಗಳು ಹೆಚ್ಚು ಹೆಚ್ಚು ಮೂಡಿ ಬಂದರೆ ಜನಪದ ಪತ್ರಿಕೆ ಶ್ರೀಮಂತವಾಗುವುದಲ್ಲದೆ ಓದುಗರಲ್ಲಿ ದೇಶ ಪ್ರೇಮ ಹೆಚ್ಚಲಿದೆ.

**–ಸುಮಂತ ರಾತುಪ್ಪದ, ಹಾನಗಲ್ಲ**

* * *

ಬಸವರಾಜ್ ಎಸ್ ಬೊಮ್ಮಾಯಿ ಅವರ ನೇತೃತ್ವದ ಸರ್ಕಾರ ರೈತ ವರ್ಗದವರ ಅಭಿವೃದ್ಧಿಗಾಗಿ ಹಲವಾರು ಯೋಜನೆಗಳನ್ನು ಹಮ್ಮಿಕೊಳ್ಳುತ್ತಿರುವುದು ತುಂಬಾ ಸಂತಸದ ಸಂಗತಿ. ಈಗ ನಂದಿನಿ ಕ್ಷೀರ ಸಮೃದ್ಧಿ ಸಹಕಾರ ಬ್ಯಾಂಕ್ ಸ್ಥಾಪನೆ ಮಾಡುತ್ತಿರುವುದರಿಂದ ರೈತರ ಆದಾಯ ಮತ್ತಷ್ಟು ಹೆಚ್ಚಾಗಲಿದೆ.


ಬಹುಪಾಲು ರೈತರು ಕೃಷಿಯ ಜೊತೆಗೆ ಹೈನುಗಾರಿಕೆಯನ್ನು ನಡೆಸುವುದರಿಂದ ಅವರಿಗೆ ನಂದಿನಿ ಕ್ಷೀರ ಸಮೃದ್ಧಿ ಸಹಕಾರ ಬ್ಯಾಂಕ್ ಸ್ಥಾಪನೆಯಿಂದ ಆರ್ಥಿಕ ಚಟುವಟಿಕೆಗೆ ಮತ್ತಷ್ಟು ಬಲ ಬರಲಿದೆ. ಇನ್ನು ಇಂತಹ ಉಪಯುಕ್ತ ಸಹಕಾರ ಬ್ಯಾಂಕ್ ಅನ್ನು ದೇಶದಲ್ಲೇ ಪ್ರಥಮವಾಗಿ ನಮ್ಮ ರಾಜ್ಯದಲ್ಲಿ ಸ್ಥಾಪನೆ ಮಾಡುತ್ತಿರುವುದು ಹೆಮ್ಮೆಯ ಸಂಗತಿ.

**–ನರಸಿಂಹ, ಪಡಿಗೆರೆ**

* * *

ಮೇ ಮಾಹೆಯ ವಾರ್ತಾ ಜನಪದ ಪತ್ರಿಕೆಯಲ್ಲಿ ಪ್ರಕಟವಾಗಿರುವ 'ಬೆಳೆ ರಕ್ಷಣೆಗೆ ಸಂಜೀವಿನಿಯಾದ ಕೃಷಿ ಸಂಜೀವಿನಿ' ಓದಿ ನನಗಂತೂ ಅತ್ಯಂತ ಸಂತೋಷವಾಯಿತು. ಕೃಷಿಯನ್ನೇ ಕಸುಬಾಗಿಸಿಕೊಂಡಿರುವ ನಮಗೆ ಬೆಳೆಯನ್ನು ರೋಗ ಮತ್ತು ಕೀಟ ಬಾಧೆಗಳಿಂದ ಉಳಿಸಿಕೊಂಡು ಆದಾಯ ಪಡೆಯುವುದು ತುಂಬಾನೇ ಪ್ರಮುಖವಾಗಿರುತ್ತದೆ. ಹಾಗಾಗಿ ನಮ್ಮ ಬೆಳೆ ರಕ್ಷಣೆಗಾಗಿ ಸರ್ಕಾರವು ಆಂಬುಲೆನ್ಸ್ ಮಾದರಿಯಲ್ಲಿ ರೈತನ ಜಮೀನಿಗೆ ತೆರಳಿ ಬೆಳೆಗೆ ತಗುಲಿರುವ ಸಮಸ್ಯೆಯನ್ನು ಪರಿಹರಿಸಲು ಕೃಷಿ ಸಂಜೀವಿನಿ ಎಂಬ ಸಂಚಾರಿ ಸಸ್ಯ ಆರೋಗ್ಯ ಚಿಕಿತ್ಸಾಲಯ ಸೇವೆಯನ್ನು ಒದಗಿಸಲು ಮುಂದಾಗಿರುವುದು ಶ್ಲಾಘನೀಯವಾದುದು. ಇಂತಹ ಲೇಖನಗಳಿಂದ ನಮಗೆ ಸರ್ಕಾರದಿಂದ ಇರುವ ಸೇವಾಸೌಲಭ್ಯಗಳನ್ನು ಅರಿಯಲು ಸಾಧ್ಯವಾಗುತ್ತದೆ.

**–ನಂಜಯ್ಯ, ಕೆಬ್ಬಳ್ಳಿ**




ನಮ್ಮ ರಾಜ್ಯವು ದೇಶದಲ್ಲೇ ಮುಂದುವರೆದ ರಾಜ್ಯವಾಗಿ ಬೆಳೆಯುತ್ತಿದೆ. ಈ ಬೆಳವಣಿಗೆಗೆ ಈಗ ಭಾರತದ ಮೊದಲ ಹವಾನಿಯಂತ್ರಿತ ರೈಲು ನಿಲ್ದಾಣ ಕೂಡ ಸೇರಿಕೊಳ್ಳುತ್ತಿರುವುದು ಹೆಮ್ಮೆಯ ವಿಚಾರವಾಗಿದೆ. ಸರ್ ಎಂ ವಿಶ್ವೇಶ್ವರಯ್ಯ ಅವರ ಹೆಸರಿನಲ್ಲಿ ಬೆಂಗಳೂರಿನ ಬಾಣಸವಾಡಿ ಮತ್ತು ಬೈಯಪ್ಪನ ಹಳ್ಳಿ ನಡುವೆ ನಿರ್ಮಾಣವಾಗಿರುವ ಹವಾನಿಯಂತ್ರಿತ ನೈರುತ್ಯ ರೈಲ್ವೆ ನಿಲ್ದಾಣವು ಉದ್ಘಾಟನೆಗೆ ಸಿದ್ಧವಾಗಿರುವುದು ರಾಜ್ಯದ ಹಿರಿಮೆ ಮತ್ತು ಗರಿಮೆಯನ್ನು ಹೆಚ್ಚಿಸಲಿದೆ.

**–ರಾಧಾ ಕೃಷ್ಣಕುಮಾರ್, ಬೆಂಗಳೂರು**

* * *

ಮೇ 2022 ರ ವಾರ್ತಾ ಜನಪದದಲ್ಲಿ ಪ್ರಕಟವಾಗಿರುವ 'ರಾಯಚೂರಿನ ಆರೋಗ್ಯ ಕೇಂದ್ರಗಳಲ್ಲಿ ಮೂಡಿದ ಹೊಸ ಬೆಳಕು' ಲೇಖನ ಉಳಿದ ಜಿಲ್ಲೆಗಳಿಗೆ ಮಾದರಿಯಾಗಿದೆ. ರಾಜ್ಯದ ಶೇಕಡಾ 45 ರಷ್ಟು ಭಾಗಕ್ಕೆ ಬೆಳಕು ನೀಡುವ ರಾಯಚೂರು ಜಿಲ್ಲೆಯಲ್ಲೇ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲೂ ಸೋಲಾರ್ ವ್ಯವಸ್ಥೆಯನ್ನು ಅಳವಡಿಸಿರುವುದು ನಿಜಕ್ಕೂ ಅಭಿನಂದನಾರ್ಹವಾದುದು.

ಸೋಲಾರ್ ವ್ಯವಸ್ಥೆಯನ್ನು ಮಾಡಿಕೊಂಡಿರುವುದರಿಂದ ವಿದ್ಯುತ್ ಇಲ್ಲದ ಸಂದರ್ಭದಲ್ಲಿ ತುರ್ತು ನಿಗಾ ಘಟಕದ ಎಲ್ಲಾ ಯಂತ್ರಗಳು ಚಾಲೂ ಇರುತ್ತವೆ. ಹಾಗಾಗಿ ರೋಗಿಗಳಿಗೆ ಯಾವುದೇ ಕಾರಣಕ್ಕೂ ತೊಂದರೆಯಾಗುವುದಿಲ್ಲ. ಇದೇ ವ್ಯವಸ್ಥೆಯನ್ನು ಎಲ್ಲಾ ಜಿಲ್ಲೆಯ ಸರ್ಕಾರಿ ಆಸ್ಪತ್ರೆಗಳೂ ಅಳವಡಿಸಿಕೊಂಡರೆ ವಿದ್ಯುತ್ ಕೈಕೊಟ್ಟಾಗ ಪರದಾಡುವ ಅವಶ್ಯಕತೆ ಬರುವುದಿಲ್ಲ.

**–ಬಿ.ಎಸ್. ಸಿದ್ದೇಶ್ವರ ಸ್ವಾಮಿ, ಬೀದರ್**

ಮಹಾಲಿಂಗಪುರದ ಸಹೋದರರು ದೇಸಿ ಕೈಮಗ್ಗದಲ್ಲಿ ವೈವಿಧ್ಯತೆಯ ಜೊತೆಗೆ ತಂತ್ರಜ್ಞಾನವನ್ನು ಬಳಸಿಕೊಂಡು ಕೈಮಗ್ಗದ ಸಿದ್ಧ ಉಡುಪು ತಯಾರಿಕೆಯಲ್ಲಿ ಯಶಸ್ವಿಯಾಗಿರುವ ಯಶೋಗಾಥೆ ಇತರ ಕೈಮಗ್ಗ ನಿರತರಿಗೆ ಪ್ರೇರಣೆಯಾಗಿದೆ. ಸರ್ಕಾರಿ ಕೆಲಸವೇ ಬೇಕು ಎಂದು ಕೂರುವ ಬದಲು ತಮಗೆ ತಿಳಿದಿರುವ ಕಸುಬಿನಲ್ಲೇ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವ ಮೂಲಕ ನಾವಿನ್ಯತೆಯನ್ನು ಬೆಳೆಸಿಕೊಂಡು ಆದಾಯವನ್ನು ಹೊಂದುವುದು ಒಳಿತು. ಅಲ್ಲದೆ ಇವರು ಸುಮಾರು 75 ಜನರಿಗೆ ತಮ್ಮ ಕಿರು ಉದ್ದಿಮೆಯಲ್ಲಿ ಉದ್ಯೋಗ ನೀಡುವ ಮೂಲಕ ಆತ್ಮನಿರ್ಭರ ಭಾರತದ ಕನಸನ್ನು ಸಾಕಾರಗೊಳಿಸುತ್ತಿದ್ದಾರೆ.

**–ಜೆ.ಹೆಚ್. ರಮೇಶ, ಜಗಳೂರು**


'ವಾರ್ತಾ ಜನಪದ' ಮಾಸಿಕ ಈಗ **www.kanaja.in**ನಲ್ಲಿ ಲಭ್ಯ

ವಾರ್ತಾ ಜನಪದ ಮಾಸಿಕಕ್ಕೆ ಚಂದಾದಾರರಾಗಲು ಬಯಸುವವರು ರೂ 25/– ಅನ್ನು ಪಾವತಿಸಲು ಕಡ್ಡಾಯವಾಗಿ ಸೇವಾಸಿಂಧುವಿನ **https://sevasindhu.karnataka.gov.in** ಮೂಲಕ ಆನ್ ಲೈನ್ ಅರ್ಜಿಯನ್ನು ಸಲ್ಲಿಸಬೇಕು.

ವಾರ್ತಾ ಜನಪದ ಪತ್ರಿಕೆಯ ಸಾಫ್ಟ್ ಕಾಪಿಯನ್ನು ಇ–ಮೇಲ್ ಮೂಲಕ ಉಚಿತವಾಗಿ ಚಂದಾದಾರರಾಗಲು ಇಚ್ಛಿಸುವವರು ತಮ್ಮ ಇ–ಮೇಲ್ ವಿಳಾಸವನ್ನು 9480841210 ಗೆ ಕಳುಹಿಸಿ ನೋಂದಾಯಿಸಿ ಕೊಳ್ಳಬಹುದು.

Downloaded From:www.kpscvaani.com



# ಸಂಪಾದಕೀಯ...

ಪ್ರಿಯ ಓದುಗ ಮಿತ್ರರೇ,

ರಾಜ್ಯ ಸರ್ಕಾರ ಬಜೆಟ್‌ನಲ್ಲಿ ಘೋಷಿಸಿರುವ ಯೋಜನೆಗಳನ್ನು ಜಾರಿಗೆ ತರಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸೂಕ್ತ ಕ್ರಮಕೈಗೊಳ್ಳುತ್ತಿದ್ದು, ಕಳೆದ ಮಾಹೆಯಿಂದ ವಿವಿಧ ಇಲಾಖೆಗಳ ಮುಖ್ಯಸ್ಥರೊಂದಿಗೆ ಸಾಲು ಸಾಲು ಸಭೆಗಳನ್ನು ನಡೆಸುವ ಮೂಲಕ ಸಲಹೆ ಸೂಚನೆಗಳನ್ನು ನೀಡುತ್ತಿದ್ದಾರೆ.

ಈ ನಿಟ್ಟಿನಲ್ಲಿ ವಿವಿಧ ಇಲಾಖೆಗಳ ನಡುವಿನ ಸಮನ್ವಯದ ಬಗ್ಗೆ ಚರ್ಚಿಸಲು ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು ಹಾಗೂ ಕಾರ್ಯದರ್ಶಿಗಳ ಸಭೆಯನ್ನು ನಡೆಸಿರುವ ಮುಖ್ಯಮಂತ್ರಿಗಳು, ಆರ್ಥಿಕ ಅಭಿವೃದ್ಧಿಗೆ ಇಂಬು ನೀಡುವ ಯೋಜನೆಗಳಿಗೆ ಭೂ ಸ್ವಾಧೀನ, ಟೆಂಡರ್ ಪ್ರಕ್ರಿಯೆಗಳನ್ನು ಶೀಘ್ರದಲ್ಲಿ ಮುಗಿಸಿ, ಆಡಳಿತಕ್ಕೆ ವೇಗ ತಂದು, ದಕ್ಷತೆಯಿಂದ ಕೆಲಸ ಮಾಡುವಂತೆ ಸೂಚಿಸಿದ್ದಾರೆ. ಮುಖ್ಯವಾಗಿ ಬಡವರಿಗೆಂದು ರೂಪಿಸಿರುವ ಕಾರ್ಯಕ್ರಮಗಳು ಸಕಾಲಿಕವಾಗಿ ಅನುಷ್ಠಾನಗೊಳಿಸುವಂತೆ ಹಾಗೂ ಸಮಾಜದ ಕಟ್ಟಕಡೆಯ ವ್ಯಕ್ತಿಗೆ ಸರ್ಕಾರದ ಕಾರ್ಯಕ್ರಮಗಳು ಆದಷ್ಟು ಬೇಗ ಮುಟ್ಟುವಂತೆ ಮಾಡಲು ಸೂಚನೆ ನೀಡಿದ್ದಾರೆ.

ಗ್ರಾಮೀಣ ಪ್ರದೇಶದ ಅಭಿವೃದ್ಧಿ ಮುಖ್ಯಮಂತ್ರಿ ಅವರ ಕನಸು. ಹಾಗಾಗಿ ಜಿಲ್ಲಾ ಪಂಚಾಯತಿಯ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳ ಸಭೆ ನಡೆಸಿರುವ ಮುಖ್ಯಮಂತ್ರಿಗಳು ಎಲ್ಲರೂ ಸೂಕ್ಷ್ಮತೆ, ಸಂವೇದನಾಶೀಲತೆ ಮತ್ತು ಕ್ರಿಯಾಶೀಲತೆಯಿಂದ ಕೆಲಸ ಮಾಡಬೇಕು. ಬಡವರ ಪರವಾಗಿ ಕೆಲಸ ಮಾಡಲು ಧೈರ್ಯ ಮತ್ತು ದಿಟ್ಟತನದಿಂದ ಕ್ರಮಕೈಗೊಳ್ಳಬೇಕು. ಕೆಳಹಂತದ ಅಧಿಕಾರಿಗಳ ಮೇಲೆ ನಿಯಂತ್ರಣ ಇಟ್ಟುಕೊಂಡು ಗ್ರಾಮೀಣ ಪ್ರದೇಶದ ಅಭಿವೃದ್ಧಿಗೆ ಆಧಾರವಾಗಿರುವ ಕೃಷಿ, ತೋಟಗಾರಿಕೆ, ರೇಷ್ಮೆ, ಪಶುಸಂಗೋಪನಾ ಇಲಾಖೆ ಯೋಜನೆಗಳನ್ನು ಶೀಘ್ರದಲ್ಲಿ ಜಾರಿಗೊಳಿಸುವಂತೆ ಸೂಚನೆ ನೀಡಿದ್ದಾರೆ. ಅಲ್ಲದೆ ಸಿಇಓಗಳು ಗ್ರಾಮ ಪಂಚಾಯಿತಿ ಕಚೇರಿಗಳಿಗೆ ಭೇಟಿ ನೀಡಿ ಪ್ರಗತಿ ಪರಿಶೀಲನೆ ನಡೆಸುವುದನ್ನು ಕಡ್ಡಾಯಗೊಳಿಸಿದ್ದಾರೆ.

ರಾಜ್ಯದ ಎಲ್ಲಾ ಜನರು ಸ್ವಾಭಿಮಾನ ಮತ್ತು ಸ್ವಾವಲಂಬಿ ಜೀವನವನ್ನು ನಡೆಸಬೇಕೆಂಬುದು ಸರ್ಕಾರದ ಆಶಯವಾಗಿದೆ. ಹಾಗಾಗಿ ಉದ್ಯೋಗಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡಿರುವ ಸರ್ಕಾರವು ಕಳೆದ ತಿಂಗಳು ಶಿಗ್ಗಾವಿಯಲ್ಲಿ ಟೆಕ್ಸ್‌ಟೈಲ್ ಪಾರ್ಕ್ ಸ್ಥಾಪನೆಗೆ ಶಂಕುಸ್ಥಾಪನೆ ಮಾಡಿದೆ. ಇದರಿಂದ ಮುಂದಿನ ವರ್ಷದಲ್ಲಿ ಈ ಭಾಗದ ಸಾವಿರಾರು ಜನರಿಗೆ ಉದ್ಯೋಗ ದೊರಕಲಿದೆ.

ನಮ್ಮ ರಾಜ್ಯದಲ್ಲಿ ಜರುಗಿದ ಖೇಲೋ ಇಂಡಿಯಾ ಯೂನಿವರ್ಸಿಟಿ ಗೇಮ್ಸ್–2021 ಭಾರತದ ಕ್ರೀಡಾ ಜಗತ್ತನ್ನು ತನ್ನತ್ತ ಆಕರ್ಷಿಸಿತ್ತು. ಕ್ರೀಡಾ ಕೂಟದಲ್ಲಿ ಕ್ರೀಡಾಪಟುಗಳು 2 ರಾಷ್ಟ್ರೀಯ ದಾಖಲೆ ಮತ್ತು 76 ಕೂಟ ದಾಖಲೆಗಳನ್ನು ನಿರ್ಮಿಸಿದರು. ಕೋವಿಡ್ ಆತಂಕದ ನಡುವೆಯೂ ಖೇಲೋ ಇಂಡಿಯಾ ಯೂನಿವರ್ಸಿಟಿ ಗೇಮ್ಸ್ ಅದ್ಭುತ ಯಶಸ್ಸು ಕಂಡಿತು.

ಕ್ರೀಡೆಗೆ ಹೆಚ್ಚಿನ ಪ್ರಾಶಸ್ತ್ಯ ನೀಡುತ್ತಿರುವ ಸರ್ಕಾರವು ಕಬ್ಬಡ್ಡಿ ಮತ್ತು ಬ್ಯಾಸ್ಕೆಟ್ ಬಾಲ್ ಕ್ರೀಡೆಗಳನ್ನು ಪ್ರೋತ್ಸಾಹಿಸಲು ತೀರ್ಮಾನಿಸಿದ್ದು, 75 ನೇ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವ ಸಂದರ್ಭದಲ್ಲಿ 75 ಕ್ರೀಡಾಪಟುಗಳನ್ನು ದತ್ತು ಪಡೆದು 4 ವರ್ಷಗಳ ಕಾಲ ಗುಣಮಟ್ಟದ ತರಬೇತಿ, ಕ್ರೀಡಾ ಸೌಲಭ್ಯಗಳನ್ನು ನೀಡುವ ಮೂಲಕ ರಾಜ್ಯದ ಕನಿಷ್ಟ 10 ಕ್ರೀಡಾಪಟುಗಳು ಮುಂದಿನ ಒಲಂಪಿಕ್ಸ್‌ನಲ್ಲಿ ಭಾಗವಹಿಸುವಂತೆ ಮಾಡುವ ಗುರಿಯನ್ನು ಹೊಂದಲಾಗಿದೆ ಎಂದು ಮುಖ್ಯಮಂತ್ರಿಗಳು ತಿಳಿಸಿದ್ದಾರೆ.

ರಾಜ್ಯಕ್ಕೆ ಹೆಚ್ಚಿನ ವಿದೇಶಿ ಹೂಡಿಕೆಯನ್ನು ಸೆಳೆಯುವ ನಿಟ್ಟಿನಲ್ಲಿ ನವೆಂಬರ್ 16 ರಿಂದ ಮೂರು ದಿನಗಳ ಕಾಲ ಜರುಗಲಿರುವ ಬೆಂಗಳೂರು ತಂತ್ರಜ್ಞಾನ ಶೃಂಗ–2022 ಕ್ಕೆ ಸರ್ಕಾರವು ಈಗಿನಿಂದಲೇ ಸಕಲ ಸಿದ್ಧತೆಯಲ್ಲಿ ತೊಡಗಿದೆ. ಕಳೆದ ತ್ರೈಮಾಸಿಕ ಅವಧಿಯಲ್ಲಿ ದೇಶದ ಇತರೆ ರಾಜ್ಯಗಳಿಗಿಂತ ನಮ್ಮ ರಾಜ್ಯಕ್ಕೆ ಅತಿ ಹೆಚ್ಚಿನ ವಿದೇಶಿ ನೇರ ಬಂಡವಾಳ ಹರಿದು ಬಂದಿದೆ. ಮೇ 23 ರಿಂದ ದಾವೋಸ್‌ನಲ್ಲಿ ಜರುಗಲಿರುವ ವಿಶ್ವ ಆರ್ಥಿಕ ಶೃಂಗ ಸಭೆಯಲ್ಲಿ ಪಾಲ್ಗೊಳ್ಳಲು ಹೊರಡುವ ಮುನ್ನ ಮುಖ್ಯಮಂತ್ರಿಗಳು ಈ ಬಾರಿ ಕೇವಲ ಒಪ್ಪಂದಗಳನ್ನು ಮಾತ್ರ ಮಾಡಿಕೊಳ್ಳುವುದಿಲ್ಲ, ಕೈಗಾರಿಕೆಗಳನ್ನು ಸ್ಥಾಪನೆ ಮಾಡಲು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲಾಗುವುದೆಂದು ತಿಳಿಸಿದ್ದಾರೆ.

ದೇಶದ ಆರ್ಥಿಕತೆಯನ್ನು ಬಂಡವಾಳಶಾಹಿಗಳು ಮುನ್ನಡೆಸುತ್ತಿಲ್ಲ. ತಳಹಂತದಲ್ಲಿರುವ ದುಡಿಯುವ ವರ್ಗ ದೇಶದ ಆರ್ಥಿಕತೆಯನ್ನು ಮುನ್ನಡೆಸುತ್ತಿದ್ದಾರೆ. ಹಾಗಾಗಿ ದುಡಿಯುವ ವರ್ಗಕ್ಕೆ ಹೆಚ್ಚಿನ ಕಾರ್ಯಕ್ರಮ ಹಾಗೂ ಅನುದಾನವನ್ನು ಸರ್ಕಾರವು ಒದಗಿಸುತ್ತಿದ್ದು, ದಕ್ಷ, ಜನಪರ ಆಡಳಿತಕ್ಕೆ ಹೆಚ್ಚು ಒತ್ತು ನೀಡುತ್ತಿದೆ.

ಡಾ॥ ಪಿ. ಎಸ್. ಹರ್ಷ, ಐಪಿಎಸ್
ಪ್ರಧಾನ ಸಂಪಾದಕರು


**ಪ್ರಧಾನ ಸಂಪಾದಕರು,** ವಾರ್ತಾ ಜನಪದ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ,
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001. email : feedbackjanapada@gmail.com





Downloaded From:www.kpscvaani.com




## ಬೆಂಗಳೂರು ತಂತ್ರಜ್ಞಾನ

# ಶೃಂಗ ಸಮಾವೇಶಕ್ಕೆ ಸರ್ಕಾರದಿಂದ ಸಕಲ ಸಿದ್ಧತೆ

**ರಜತೋತ್ಸವ ವರ್ಷದಲ್ಲಿ ನವೆಂಬರ್ 16 ರಿಂದ ಮೂರು ದಿನಗಳವರೆಗೆ ಜರುಗಲಿರುವ ದೇಶದ ಹಾಗೂ ಏಷ್ಯಾದ ಮಹತ್ವದ ಬೆಂಗಳೂರು ತಂತ್ರಜ್ಞಾನ ಶೃಂಗ ಸಮಾವೇಶಕ್ಕೆ ಸರ್ಕಾರವು ಈಗಿನಿಂದಲೇ ಸಕಲ ಸಿದ್ಧತೆಯಲ್ಲಿ ತೊಡಗಿದೆ.**

ಬಿ.ಎಸ್.ವೆಂಕಟೇಶ ಪ್ರಸಾದ್

ಕರ್ನಾಟಕದ ರಾಜಧಾನಿ ಬೆಂಗಳೂರು ನಗರವು 'ಉದ್ಯಾನ ನಗರಿ' ಎಂದು ಹೆಸರಾದಂತೆಯೇ 'ತಂತ್ರಜ್ಞಾನ ನಗರಿ' ಎಂದೂ ಹೆಸರಾಗಿದೆ. ಸ್ವಾತಂತ್ರ್ಯ ಪೂರ್ವದಲ್ಲಿಯೇ, ಅಂದರೆ, ಮೈಸೂರು ಸಂಸ್ಥಾನದ ಕಾಲದಲ್ಲಿಯೇ ಇಲ್ಲಿ ವಿಜ್ಞಾನ ಹಾಗೂ ತಂತ್ರಜ್ಞಾನ ಬೆಳವಣಿಗೆಗೆ ಅಸ್ತಿವಾರ ಬಿದ್ದಿರುವುದು ಚಾರಿತ್ರಿಕ ದಾಖಲೆಯಾಗಿದೆ.

ತಮ್ಮ ದೂರದೃಷ್ಟಿ ಹಾಗೂ ಒಳನೋಟದಿಂದ ಕೂಡಿದ ಆಡಳಿತಕ್ಕೆ ಹೆಸರಾಗಿದ್ದ ಮೈಸೂರು ಅರಸರು ಬೆಂಗಳೂರಿನಲ್ಲಿ ಭಾರತೀಯ ವಿಜ್ಞಾನ ಸಂಸ್ಥೆ ಸ್ಥಾಪನೆಗೆ ಮುನ್ನುಡಿ ಬರೆದರು. ಮೈಸೂರು ಗಂಧದೆಣ್ಣೆ ಸೇರಿದಂತೆ ಹಲವಾರು ಕಾರ್ಖಾನೆಗಳ ಸ್ಥಾಪನೆಗೆ ಅವರು ಕಾರಣರಾದರು. ರೈಲ್ವೆ ಮಾರ್ಗಗಳನ್ನು ಕೂಡ ಸ್ಥಾಪಿಸಿದ ಅವರು ಎಂಜಿನಿಯರಿಂಗ್ ಶೈಕ್ಷಣಿಕ ಸಂಸ್ಥೆಗಳ ಅಗತ್ಯವನ್ನು ಕೂಡ ಆಗಲೇ ಸ್ಪಷ್ಟವಾಗಿ ಮನಗಂಡಿದ್ದರು. ಒಂದು ಕಾಲದಲ್ಲಿ ಪ್ರಮುಖ ಸರ್ಕಾರಿ ಸ್ವಾಮ್ಯದ ಕಾರ್ಖಾನೆಗಳಿಂದ ಗಮನಸೆಳೆದ ಬೆಂಗಳೂರು ನಗರ, ನಂತರ ಮಾಹಿತಿ ತಂತ್ರಜ್ಞಾನ ಕಾಲಘಟ್ಟದಲ್ಲಿ 'ಸಿಲಿಕಾನ್ ವ್ಯಾಲಿ' ಎಂದೇ ಪ್ರಸಿದ್ಧಿಗೆ ಬಂದಿತು. ಇದೀಗ, ಈ ನಗರ ನವೋದ್ಯಮಗಳ ತವರಾಗಿಯೂ (ಸ್ಟಾರ್ಟ್ ಅಪ್ ಕ್ಯಾಪಿಟಲ್) ಹೊರಹೊಮ್ಮಿ ಉದ್ಯಮಶೀಲರನ್ನು ಹಾಗೂ ತಂತ್ರಜ್ಞರನ್ನು ಕೈಬೀಸಿ ಕರೆಯುವ ನೆಚ್ಚಿನ ತಾಣವಾಗಿದೆ.

ದೇಶದಲ್ಲಿ ಮೊಟ್ಟಮೊದಲ ಬಾರಿಗೆ ಮಾಹಿತಿ ತಂತ್ರಜ್ಞಾನ ಕಾರ್ಯನೀತಿ, ಜೈವಿಕ ತಂತ್ರಜ್ಞಾನ ಕಾರ್ಯನೀತಿ, ಎಂಜಿನಿಯರಿಂಗ್ ಸಂಶೋಧನೆ & ಅಭಿವೃದ್ಧಿ ಕಾರ್ಯನೀತಿಗಳನ್ನು ಜಾರಿಗೆ ತಂದ ರಾಜ್ಯ ಎಂಬ ಹಿರಿಮೆಗೆ ಪಾತ್ರವಾಗಿದೆ.





Downloaded From:www.kpscvaani.com

ಇತ್ತೀಚೆಗೆ, ಬೆಂಗಳೂರು ಭಾರತೀಯ ವಿಜ್ಞಾನ ಸಂಸ್ಥೆಯ ಆವರಣದಲ್ಲಿ ಆರ್ಟ್ ಪಾರ್ಕ್ ಅನ್ನು (ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಅಂಡ್ ರೋಬೋಟಿಕ್ ಟೆಕ್ನಾಲಜಿ ಪಾರ್ಕ್) ಸ್ಥಾಪಿಸಿರುವುದು ಮತ್ತೊಂದು ಪ್ರಮುಖ ಉಪಕ್ರಮವಾಗಿದೆ.

ಅದೇ ರೀತಿ, ಮಾಹಿತಿ ತಂತ್ರಜ್ಞಾನದ ಮಹತ್ವವನ್ನು ಮನಗಂಡು 1998ರಲ್ಲಿ ದೇಶದಲ್ಲೇ ಮೊದಲ ಬಾರಿಗೆ 1998ರಲ್ಲಿ Bangalore IT.com ಕಾರ್ಯಕ್ರಮವನ್ನು ಆಯೋಜಿಸಿದ ಶ್ರೇಯಸ್ಸು ಬೆಂಗಳೂರಿಗೆ ಸಲ್ಲುತ್ತದೆ. ಆಗಿನ ಪ್ರಧಾನಿ ಎ.ಬಿ.ವಾಜಪೇಯಿ ಅವರು 1998ರಲ್ಲಿ ಮೊದಲ ಬಾರಿಗೆ ನಡೆದ ಈ ಕಾರ್ಯಕ್ರಮವನ್ನು ಉದ್ಘಾಟಿಸಿದ್ದರು. ಆಗಿನಿಂದಲೂ ಇದು ಪ್ರತಿವರ್ಷವೂ ನಡೆದುಕೊಂಡು ಬರುತ್ತಿದೆ. ಹಾಗೆಯೇ ಜೈವಿಕ ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ದೇಶದಲ್ಲೇ ಮೊದಲ ಬಾರಿಗೆ 2001ರಲ್ಲಿ ಕಾರ್ಯಕ್ರಮವನ್ನು ನಡೆಸಿದ ಕೀರ್ತಿಯೂ ನಗರದ್ದೇ ಆಗಿದೆ. ನಂತರ, 2017ರಲ್ಲಿ ಇವೆರಡನ್ನೂ ಒಂದೇ ಕಾರ್ಯಕ್ರಮದಡಿ ಸೇರಿಸಿ 'ಬೆಂಗಳೂರು ತಂತ್ರಜ್ಞಾನ ಶೃಂಗ' (ಬಿಟಿಎಸ್) ಎಂದು ಕರೆಯಲಾಯಿತು. ಇದೀಗ ರಜತೋತ್ಸವ ಸಂಭ್ರಮದಲ್ಲಿರುವ ಈ ಕಾರ್ಯಕ್ರಮವು ಪ್ರಪಂಚದ ಇತರ ದೇಶಗಳಿಗೆ ಭಾರತದೊಂದಿಗೆ ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ಸಂಪರ್ಕ ಕಲ್ಪಿಸಿಕೊಳ್ಳಲು ಪ್ರಮುಖ ವೇದಿಕೆಯಾಗಿದೆ.

ದೇಶ ಹಾಗೂ ವಿದೇಶಗಳು ಕಾತರದಿಂದ ಕಾಯುವ ಈ ವಾರ್ಷಿಕ ಶೃಂಗವನ್ನು ರಾಜ್ಯ ಸರ್ಕಾರದ ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ/ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯು ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್ಸ್ ಆಫ್ ಇಂಡಿಯಾ (STPI) ಜೊತೆ ಸೇರಿ ಏರ್ಪಡಿಸಿಕೊಂಡು ಬರುತ್ತಿದೆ. ಉದ್ಯಮಿಗಳು, ಸರ್ಕಾರಗಳು, ತಂತಜ್ಞರು, ಸ್ಟಾರ್ಟ್‌ಅಪ್‌ಗಳು, ಶೈಕ್ಷಣಿಕ ಸಂಸ್ಥೆಗಳನ್ನು ಒಂದೆಡೆ ಸೇರಿಸುವ ಮಹತ್ವದ ಕಾರ್ಯಕ್ರಮ ಇದಾಗಿದೆ. ಜೊತೆಗೆ, ಇದು ತಾಂತ್ರಿಕತೆಗೆ ಸಂಬಂಧಿಸಿದಂತೆ ಗಹನ ಚರ್ಚೆಗಳು, ಸಮಾಲೋಚನೆಗಳು ಹಾಗೂ ಸಹಭಾಗಿತ್ವಕ್ಕೆ ಅನುವು ಮಾಡಿಕೊಡುತ್ತಾ ಬಂದಿದೆ.

ಕೊರೊನಾ ಸೋಂಕಿನ ಕಾರಣದಿಂದಾಗಿ ಕಳೆದ ಎರಡು ಶೃಂಗಗಳು ಹೈಬ್ರಿಡ್ ಮಾದರಿಯಲ್ಲಿ ನಡೆದವು. 2020ರ ಬಿಟಿಎಸ್ ಅನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಮತ್ತು 2021ರಲ್ಲಿ ಉಪರಾಷ್ಟ್ರಪತಿ ವೆಂಕಯ್ಯ ನಾಯ್ಡು ಅವರು ಉದ್ಘಾಟನೆ ನೆರವೇರಿಸಿದ್ದರು. ಕಳೆದ ವರ್ಷ ಆಸ್ಟ್ರೇಲಿಯಾ ಪ್ರಧಾನಿ ಸ್ಕಾಟ್ ಮಾರಿಸನ್, ಇಸ್ರೇಲ್ ಪ್ರಧಾನಿ ನಫ್ತಾಲಿ ಬೆನೆಟ್ ಸೇರಿದಂತೆ ಹಲವು ಗಣ್ಯರು ಪಾಲ್ಗೊಂಡಿದ್ದುದು ಈ ತಾಂತ್ರಿಕ ಕಾರ್ಯಕ್ರಮಕ್ಕೆ ಎಷ್ಟು ಪ್ರಾಮುಖ್ಯವಿದೆ ಎಂಬುದಕ್ಕೆ ಕನ್ನಡಿ ಹಿಡಿಯುತ್ತದೆ. ಹಾಗೆಯೇ ವರ್ಷದಿಂದ ವರ್ಷಕ್ಕೆ ಈ ಶೃಂಗವು ತನ್ನ ಮಹತ್ವವನ್ನು ಹೆಚ್ಚಿಸಿಕೊಳ್ಳುತ್ತಾ ಸಾಗಿದೆ. ಬೆಂಗಳೂರು ತಂತ್ರಜ್ಞಾನ ಶೃಂಗ–2021ರಲ್ಲಿ 30ಕ್ಕೂ ಹೆಚ್ಚು ದೇಶಗಳು, 300ಕ್ಕೂ ಹೆಚ್ಚು ಪ್ರದರ್ಶಕರು ಹಾಗೂ 20,000ಕ್ಕೂ ಹೆಚ್ಚು ವ್ಯಾಪಾರ ಪ್ರತಿನಿಧಿಗಳು ಪಾಲ್ಗೊಂಡಿದ್ದರು. ಹಾಗೆಯೇ, ಶೃಂಗದಲ್ಲಿ ನಡೆದ 75ಕ್ಕೂ ಹೆಚ್ಚು ಗೋಷ್ಠಿಗಳಲ್ಲಿ 300ಕ್ಕೂ ಹೆಚ್ಚು ಪರಿಣತರು ವಿಷಯಗಳನ್ನು ಮಂಡಿಸಿದ್ದರು.

ಇದೀಗ, ಬೆಳ್ಳಿಹಬ್ಬದ ವರ್ಷಾಚರಣೆಯ ಸಂದರ್ಭದಲ್ಲಿ 'ಬೆಂಗಳೂರು ತಂತ್ರಜ್ಞಾನ ಶೃಂಗ'ವನ್ನು ಮತ್ತೊಂದು ಮಜಲಿಗೆ ಕೊಂಡೊಯ್ಯಲು ಸರ್ಕಾರ ನಿರ್ಧರಿಸಿದೆ. ಮುಂಬರುವ ಶೃಂಗವನ್ನು ನವೆಂಬರ್ 16 ರಿಂದ ಮೂರು ದಿನಗಳ ಕಾಲ ಬೆಂಗಳೂರು ಅರಮನೆ ಮೈದಾನದಲ್ಲಿ ಭೌತಿಕ ರೂಪದಲ್ಲಿ ದೊಡ್ಡ ಮಟ್ಟದಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಅದಕ್ಕಾಗಿ ಸ್ವತಃ ಮುಖ್ಯಮಂತ್ರಿ ಬಸವರಾಜ ಎಸ್



## ಇರುವ ಜಾಗದಿಂದಲೇ ಕೆಲಸಕ್ಕೆ ಆದ್ಯತೆ

ಇರುವ ಜಾಗದಿಂದಲೇ ಕೆಲಸವನ್ನು ಉತ್ತೇಜಿಸಲಾಗುವುದು. ಪ್ರತಿಭಾವಂತರು ಹಾಗೂ ಕ್ರಿಯಾಶೀಲರು ಎಲ್ಲೇ ಇದ್ದರೂ ಅವರ ಸೇವೆ ಉದ್ದಿಮೆಗಳಿಗೆ ಲಭ್ಯವಾಗುವಂತೆ ಮಾಡಲಾಗುವುದು. ರಾಜ್ಯ ಹಾಗೂ ದೇಶ ಮಾತ್ರವಲ್ಲದೆ ವಿದೇಶದ ಕಂಪನಿಗಳಿಗೂ ಇರುವಲ್ಲಿಂದಲೇ ಕೆಲಸ ಮಾಡಲು ಸಾಧ್ಯವಾಗುವಂತೆ ಸಂವಹನ ತಾಂತ್ರಿಕತೆಯನ್ನು ಉನ್ನತ ದರ್ಜೆಗೇರಿಸಲಾಗುತ್ತದೆ.

**ಬಸವರಾಜ ಎಸ್ ಬೊಮ್ಮಾಯಿ**
ಮುಖ್ಯಮಂತ್ರಿಗಳು


Downloaded From:www.kpscvaani.com




> **ವೃತ್ತಿಪರ ಕೋರ್ಸ್ ವಿದ್ಯಾರ್ಥಿಗಳಿಗೆ ಕೇವಲ 6 ವಾರಗಳಷ್ಟಿದ್ದ ಇಂಟರ್ನ್‌ಷಿಪ್ ಅನ್ನು 36 ವಾರಗಳಿಗೆ ಹೆಚ್ಚಿಸಿ ಕಡ್ಡಾಯಗೊಳಿಸಲಾಗಿದೆ. ಜೊತೆಗೆ ಇದನ್ನು ವೇತನಸಹಿತ ಇಂಟರ್ನ್‌ಷಿಪ್ ಮಾಡಲಾಗಿದೆ. ಇದನ್ನು ಕಾರ್ಯಾನುಷ್ಠಾನಕ್ಕೆ ತರಲು ಉದ್ದಿಮೆಗಳ ಪೂರ್ಣ ಸಹಕಾರ ಕೋರಲಾಗಿದೆ.**
>
> – **ಡಾ.ಸಿ.ಎನ್.ಅಶ್ವತ್ಥನಾರಾಯಣ**
> ವಿದ್ಯುನ್ಮಾನ, ಐಟಿ/ಬಿಟಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು

ಬೊಮ್ಮಾಯಿ ಅವರು ಐಟಿ/ಬಿಟಿ ಸಚಿವರಾದ ಡಾ.ಸಿ.ಎನ್.ಅಶ್ವತ್ಥನಾರಾಯಣ ಅವರೊಂದಿಗೆ ಮುತುವರ್ಜಿ ವಹಿಸಿದ್ದಾರೆ. ಇದಕ್ಕಾಗಿ 7 ತಿಂಗಳು ಮೊದಲೇ ತಯಾರಿ ಆರಂಭವಾಗಿದ್ದು, ಇದಕ್ಕೆ ಪೂರಕವಾಗಿ ಮುಖ್ಯಮಂತ್ರಿಯವರು ಈಗಾಗಲೇ ಉದ್ಯಮಗಳ ಪ್ರಮುಖರೊಂದಿಗೆ ಸಭೆ ಕೂಡ ನಡೆಸಿದ್ದಾರೆ.

ಈ ಸಭೆಯಲ್ಲಿ ಮಾತನಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು, ತಂತ್ರಜ್ಞಾನ ಅಳವಡಿಕೆಯಲ್ಲಿ, ಮಾಹಿತಿ-ತಂತ್ರಜ್ಞಾನ ಜೈವಿಕ-ತಂತ್ರಜ್ಞಾನ ಸ್ಟಾರ್ಟ್‌ಅಪ್ ವಲಯಗಳಲ್ಲಿ ಮುಂಚೂಣಿಯಲ್ಲಿರುವ ರಾಜ್ಯದ ಹೆಸರನ್ನು ಅದೇ ರೀತಿ ಮುಂದುವರಿಸಿಕೊಂಡು ಹೋಗಬೇಕೆಂಬುದು ಸರ್ಕಾರದ ಸಂಕಲ್ಪವಾಗಿದೆ. ಅದಕ್ಕಾಗಿ ಸಮರ್ಥ ಕಾರ್ಯನೀತಿಗಳನ್ನು ರೂಪಿಸುವ ಜೊತೆಗೆ ಹಲವಾರು ಉಪ್ರಕಮಗಳನ್ನು ಸರ್ಕಾರ ಅನುಷ್ಠಾನಗೊಳಿಸಿದೆ. ಉದ್ಯಮ ವಲಯ, ಶೈಕ್ಷಣಿಕ ವಲಯ ಹಾಗೂ ಸಂಶೋಧಕರನ್ನು ಬೆಸೆಯುವ ಮೂಲಕ ರಾಜ್ಯದ ಹಿರಿಮೆಯನ್ನು ಉಳಿಸಿಕೊಂಡು ಮುನ್ನಡೆಯಲು ಸಿದ್ಧವಿದೆ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಅಲ್ಲದೇ ಮುಖ್ಯಮಂತ್ರಿಯವರು ಇದೇ ಸಂದರ್ಭದಲ್ಲಿ 'ಮುಂದಿನ ತಲೆಮಾರಿಗೆ ತಂತ್ರಜ್ಞಾನ' (ಟೆಕ್ ಫಾರ್ ನೆಕ್ಸ್ಟ್ ಜನರೇಷನ್) ಘೋಷವಾಕ್ಯದಡಿ ನಡೆಯಲಿರುವ ಮುಂಬರುವ ಬೆಂಗಳೂರು ತಂತ್ರಜ್ಞಾನ ಶೃಂಗದ ಲಾಂಛನವನ್ನು ಕೂಡ ಅನಾವರಣಗೊಳಿಸಿದ್ದಾರೆ.

ವೋಲ್ವೋ, ನೆಸ್ಲೆ ಸೇರಿದಂತೆ ಹಲವು ಬಹುರಾಷ್ಟ್ರೀಯ ಕಂಪನಿಗಳು ಕಳೆದ ವರ್ಷ ಬೆಂಗಳೂರಿನಲ್ಲಿ ತಮ್ಮ ಸಂಶೋಧನಾ ಮತ್ತು ಅಭಿವೃದ್ಧಿ ಕೇಂದ್ರಗಳನ್ನು ತೆರೆದಿವೆ. ಹಲವಾರು ಜಾಗತಿಕ ಸಮೀಕ್ಷೆಗಳ ಪ್ರಕಾರ, ಇನ್ನು ಎರಡು ದಶಕಗಳವರೆಗೆ ಬೆಂಗಳೂರು ಹಾಗೂ ಕರ್ನಾಟಕವು ಹೂಡಿಕೆಯ ನೆಚ್ಚಿನ ತಾಣವಾಗಿರಲಿದೆ. ಇದನ್ನು ಗಮನದಲ್ಲಿರಿಸಿಕೊಂಡು ಸರ್ಕಾರ ಸಮರ್ಥ ಕಾರ್ಯನೀತಿಗಳನ್ನು ರೂಪಿಸುವ ಜೊತೆಗೆ ಪೂರಕ ಉಪಕ್ರಮಗಳನ್ನು ಅನುಷ್ಠಾನಗೊಳಿಸಲಿದೆ.

ಸ್ಟಾರ್ಟ್ ಅಪ್, ಮಾಹಿತಿ ತಂತ್ರಜ್ಞಾನ, ಎವಿಜಿಸಿ (ಅನಿಮೇಷನ್, ವಿಷುಯಲ್ ಗ್ರಾಫಿಕ್ಸ್, ಗೇಮಿಂಗ್ ಅಂಡ್ ಕಾಮಿಕ್ಸ್), ಜೈವಿಕ ತಂತ್ರಜ್ಞಾನ ಹಾಗೂ ಎಲೆಕ್ಟ್ರಾನಿಕ್ಸ್ ಸಿಸ್ಟಮ್ ಡಿಜೈನ್ ಅಂಡ್ ಮ್ಯಾನ್‌ಫಾಕ್ಚರಿಂಗ್‌ಗೆ (ಇ.ಎಸ್.ಡಿ.ಎಂ.) ಸಂಬಂಧಿಸಿದಂತೆ ಮೊದಲ ಬಾರಿಗೆ ಪ್ರತ್ಯೇಕ ಕಾರ್ಯನೀತಿಗಳನ್ನು ರೂಪಿಸಿ ಜಾರಿಗೊಳಿಸಿದ ಹಿರಿಮೆ ರಾಜ್ಯದ್ದಾಗಿದೆ. ಬೆಂಗಳೂರನ್ನು ವಿಶ್ವದಲ್ಲಿಯೇ ನಂ 1 ಸಿಲಿಕಾನ್ ಸಿಟಿ ಮಾಡುವ ಚಿಂತನೆ ಸರ್ಕಾರಕ್ಕಿದ್ದು, ನವೆಂಬರ್ ಮಾಹೆಯಲ್ಲಿ ಆಯೋಜಿಸಲಿರುವ ಬೆಂಗಳೂರು ಟೆಕ್ ಸಮಿಟ್ ಆಯೋಜಿಸಿರುವ ಪ್ರಯುಕ್ತ ವಿವಿಧ ವಲಯದ ಕೈಗಾರಿಕೋದ್ಯಗಳೊಂದಿಗೆ ಚರ್ಚೆ ನಡೆಸಲಾಗಿದ್ದು, ಹಲವಾರು ಸಲಹೆಗಳನ್ನು ಈಗಾಗಲೇ ಪಡೆದುಕೊಳ್ಳಲಾಗಿದೆ.

ರಾಜ್ಯ ಮಾಹಿತಿ ತಂತ್ರಜ್ಞಾನ

**ಹೋದ ಹಣಕಾಸು ವರ್ಷದಲ್ಲಿ ದೇಶಕ್ಕೆ ಹರಿದು ಬಂದಿರುವ ಒಟ್ಟು ವಿದೇಶೀ ಹೂಡಿಕೆಯಲ್ಲಿ ಶೇ 40ರಷ್ಟು ಪಾಲು ರಾಜ್ಯದಲ್ಲೇ ಹೂಡಿಕೆಯಾಗಿದೆ. ಅಂದರೆ, ಇದರ ಮೊತ್ತವು 17.3 ಶತಕೋಟಿ ಡಾಲರುಗಳಷ್ಟಾಗಿದೆ. ಜತೆಗೆ, ರಾಜ್ಯವು ರಫ್ತು ವಹಿವಾಟಿನಲ್ಲೂ ದೇಶದಲ್ಲಿ ಅಗ್ರಸ್ಥಾನದಲ್ಲಿದ್ದು, 2021-22ರ ಮೊದಲ ಮೂರು ತ್ರೈಮಾಸಿಕ ಅವಧಿಗಳಲ್ಲಿ 91.4 ಶತಕೋಟಿ ಡಾಲರ್ ಮೊತ್ತದ ಸರಕು ಮತ್ತು ಸೇವೆಗಳನ್ನು ವಿದೇಶಗಳಿಗೆ ಪೂರೈಸಿದೆ.**


Downloaded From:www.kpscvaani.com




**'ಬಿಯಾಂಡ್ ಬೆಂಗಳೂರು' ಉಪಕ್ರಮದಡಿ ಮೈಸೂರಿನಲ್ಲಿ ಸೈಬರ್ ಸೆಕ್ಯುರಿಟಿಗೆ, ಹುಬ್ಬಳ್ಳಿಯಲ್ಲಿ ಇಎಸ್‌ಡಿಎಂ ಮತ್ತು ಕೃತಕ ಬುದ್ಧಿಮತ್ತೆ ಆಧರಿತ ಉದ್ದಿಮೆಗಳಿಗೆ, ಮಂಗಳೂರಿನಲ್ಲಿ ಫಿನ್-ಟೆಕ್ ವಲಯಕ್ಕೆ ಮತ್ತು ಬೆಳಗಾವಿಯಲ್ಲಿ ಏರೋಸ್ಪೇಸ್ ಕ್ಷೇತ್ರಕ್ಕೆ ಒತ್ತು ನೀಡಲಾಗಿದೆ. ಇವೆಲ್ಲವೂ ಸುಗಮವಾಗಿ ನಡೆಯಬೇಕೆಂಬ ಉದ್ದೇಶದಿಂದ 'ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್' ಸ್ಥಾಪಿಸಲಾಗಿದೆ.**

ದೂರದರ್ಶಿತ್ವ ಸಮಿತಿ ಅಧ್ಯಕ್ಷರಾದ ಕ್ರಿಸ್ ಗೋಪಾಲಕೃಷ್ಣನ್, ಸ್ಟಾರ್ಟ್ ಅಪ್ ದೂರದರ್ಶಿತ್ವ ಸಮಿತಿ ಅಧ್ಯಕ್ಷರಾದ ಪ್ರಶಾಂತ್ ಪ್ರಕಾಶ್, ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ ಅಧ್ಯಕ್ಷ ಬಿ.ವಿ.ನಾಯ್ಡು, 'ಏಬಲ್' (ಅಸೋಸಿಯೇಷನ್ ಆಫ್ ಬಯೋಟೆಕ್ನಾಲಜಿ ಲೆಡ್ ಎಂಟರ್‌ಪ್ರೈಸಸ್) ಅಧ್ಯಕ್ಷ ಜಿ.ಎಸ್.ಕೃಷ್ಣನ್, ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್ಸ್ ಆಫ್ ಇಂಡಿಯಾದ (ಎಸ್.ಟಿ.ಪಿ.ಐ.) ಅಧ್ಯಕ್ಷ ಶೈಲೇಂದ್ರಕುಮಾರ್ ತ್ಯಾಗಿ, ವಿದ್ಯುನ್ಮಾನ, ಐಟಿ/ಬಿಟಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಡಾ.ಇ.ವಿ.ರಮಣರೆಡ್ಡಿ ಮತ್ತಿತರರು ಈ ಸಭೆಯಲ್ಲಿ ಪಾಲ್ಗೊಂಡಿದ್ದರು. ಜೈವಿಕ ತಂತ್ರಜ್ಞಾನ ದೂರದರ್ಶಿತ್ವ ಸಮಿತಿ ಅಧ್ಯಕ್ಷರಾದ ಉದ್ಯಮಿ ಕಿರಣ್ ಮಜುಂದಾರ್ ಷಾ ಅವರು ವರ್ಚ್ಯುಯಲ್ ಆಗಿ ಉಪಸ್ಥಿತರಿದ್ದರು.

ರಾಜ್ಯದಲ್ಲಿರುವ ಬಹುರಾಷ್ಟ್ರೀಯ ತಂತ್ರಜ್ಞಾನ ಕಂಪನಿಗಳೊಂದಿಗೆ ಪಾಲ್ಗೊಳ್ಳುವಿಕೆಯನ್ನು ಇನ್ನಷ್ಟು ವಿಸ್ತಾರಗೊಳಿಸುವ ಸಲುವಾಗಿ ಸರ್ಕಾರದ ವಿದ್ಯುನ್ಮಾನ, ಐಟಿ/ಬಿಟಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯು 'ಎಂ.ಎನ್.ಸಿ. ಎಂಗೇಜ್‌ಮೆಂಟ್ ಸೆಲ್' ಅನ್ನು (ಎಂ.ಎನ್.ಸಿ. ಒಡನಾಟ ಕೋಶ)ವನ್ನು ಸ್ಥಾಪಿಸಿದೆ. ಈಗಾಗಲೇ ಸರ್ಕಾರವು ಸುಮಾರು 70 ಕಂಪನಿಗಳೊಂದಿಗೆ ನೇರ ಸಂಪರ್ಕದಲ್ಲಿದ್ದು, ಉದ್ಯಮಗಳ ಅಗತ್ಯಗಳಿಗೆ ಸ್ಪಂದಿಸಲು ಕ್ರಮ ವಹಿಸಲಾಗಿದೆ.

ರಾಜ್ಯದ ಐಟಿ ಉದ್ಯಮದಲ್ಲಿ ಸದ್ಯಕ್ಕೆ 25 ಲಕ್ಷ ಮಂದಿ ಉದ್ಯೋಗಿಗಳಿದ್ದಾರೆ. ಸಮೀಕ್ಷೆಗಳ ಪ್ರಕಾರ, ಮುಂದಿನ ಐದು ವರ್ಷಗಳಲ್ಲಿ ಈ ವಲಯಕ್ಕೆ 55 ಲಕ್ಷ ನುರಿತ ಮಾನವ ಸಂಪನ್ಮೂಲದ ಅಗತ್ಯವಿದೆ. ಇದನ್ನು ಪರಿಗಣಿಸಿ, ತಕ್ಕ ಯೋಜನೆಗಳನ್ನು ಸರ್ಕಾರವು ರೂಪಿಸುತ್ತಿದೆ. ಜೊತೆಗೆ ರಾಜ್ಯದ ಐ.ಟಿ. ಕ್ಷೇತ್ರದ ವಹಿವಾಟನ್ನು 2025ರ ವೇಳೆಗೆ 300 ಬಿಲಿಯನ್ ಡಾಲರ್ ಮಟ್ಟಕ್ಕೆ ಬೆಳೆಸುವ ಗುರಿಯೊಂದಿಗೆ ಸರ್ಕಾರ ಹೆಜ್ಜೆ ಇಡುತ್ತಿದೆ.

ಇತ್ತೀಚೆಗೆ 'ಕರ್ನಾಟಕ ಡೇಟಾ ಸೆಂಟರ್ ನೀತಿ-2022'ನ್ನು ಕೂಡ ಜಾರಿಗೆ ತರಲಾಗಿದ್ದು, ಮುಂದಿನ 5 ವರ್ಷಗಳಲ್ಲಿ ಈ ಕ್ಷೇತ್ರದಲ್ಲಿ 10 ಸಾವಿರ ಕೋಟಿ ರೂಪಾಯಿಗಳಷ್ಟು ಬಂಡವಾಳವನ್ನು ಸೆಳೆಯುವ ಗುರಿ ಹಾಕಿಕೊಳ್ಳಲಾಗಿದೆ. ಅದೇ ರೀತಿ ವೆಬ್ 3.0 ಮತ್ತು ಮೆಟಾವರ್ಸ್ ತಾಂತ್ರಿಕತೆಗೆ ಸಂಬಂಧಿಸಿದಂತೆ ಸಹ ಸಮರ್ಪಕ ನೀತಿಯನ್ನು ಜಾರಿಗೆ ತರವ ಮೂಲಕ ಅಂತಿಮವಾಗಿ ತಂತ್ರಜ್ಞಾನದ ಲಾಭವು ಗ್ರಾಮೀಣ ಪ್ರದೇಶದ ಜನರನ್ನು ತಲುಪುವಂತೆ ಮಾಡುವುದು ಸರ್ಕಾರದ ಉದ್ದೇಶವಾಗಿದೆ.

ವಿವಿಧ ಕಂಪನಿಗಳ ಸಿಇಒ ಹಾಗೂ ಅವರ ಪ್ರತಿನಿಧಿಗಳು ನೀತಿಗಳಲ್ಲಿ ಬದಲಾವಣೆ, ನಿಯಮಗಳ ಸರಳೀಕರಣ, ಕೌಶಲ್ಯಯುಳ್ಳ ಮಾನವ ಸಂಪನ್ಮೂಲದ ಅವಶ್ಯಕತೆ ಇದೆ ಎಂದು ತಿಳಿಸಿರುವುದನ್ನು ಬಗೆಹರಿಸಲು ಸರ್ಕಾರವು ಈಗಾಗಲೇ ಕಾರ್ಯಪ್ರವೃತ್ತವಾಗಿದೆ.

ಒಟ್ಟಿನಲ್ಲಿ ರಾಜ್ಯದಲ್ಲಿ ಹೆಚ್ಚಿನ ಸಂಖ್ಯೆಯ ನಾವೀನ್ಯತಾ ಕ್ಲಸ್ಟರ್‌ಗಳನ್ನು ಸೃಷ್ಟಿಸುವುದು, ಸಂಶೋಧನೆ, ಜಾಗತಿಕ ಮಟ್ಟದ ಅತ್ಯುನ್ನತ ಸಂಶೋಧನಾ ವಲಯವನ್ನು ಆಕರ್ಷಿಸಲು ಹಾಗೂ ಪ್ರತಿಭಾವಂತರಿಗೆ ಅವಕಾಶ ಕಲ್ಪಿಸುವ ನಿಟ್ಟಿನಲ್ಲಿ ಸರ್ಕಾರವು ಐಟಿ ಬಿಟಿ ಹಾಗೂ ವಿವಿಧ ವಲಯಗಳ ಕಂಪನಿಗಳೊಂದಿಗೆ ಹೆಗಲಿಗೆ ಹೆಗಲು ಕೊಟ್ಟು ನಡೆಯಲು ಮುಂದಾಗಿದೆ. ■



Downloaded From:www.kpscvaani.com
















# ಯುವ ಕ್ರೀಡಾ ಮನಸುಗಳ ಬಲ ಹೆಚ್ಚಿಸಿದ ಖೇಲೋ ಇಂಡಿಯಾ

**ಕರ್ನಾಟಕದಲ್ಲಿ ಯಶಸ್ವಿಯಾಗಿ ಜರುಗಿದ ಎರಡನೇ ಆವೃತ್ತಿಯ ವಿಶ್ವವಿದ್ಯಾಲಯ ಕ್ರೀಡಾಕೂಟ ಯುವ ಕ್ರೀಡಾ ಮನಸುಗಳ ಬಲ ಹೆಚ್ಚಿಸುವ ಜೊತೆಗೆ ಕ್ರೀಡಾ ಪ್ರೇಮಿಗಳ ಮೆಚ್ಚುಗೆಗೂ ಪಾತ್ರವಾಯಿತು.**

ರಂಜನ್ ಗೌಡ

**ಕೋ**ವಿಡ್ ಆತಂಕದ ನಡುವೆಯೂ ಎರಡನೇ ಆವೃತ್ತಿಯ ಖೇಲೋ ಇಂಡಿಯಾ ವಿಶ್ವವಿದ್ಯಾಲಯ ಕ್ರೀಡಾಕೂಟ ಯಶಸ್ವಿಯಾಗಿ ಮುಕ್ತಾಯಕಂಡಿತು. ಕೊರೊನಾ ಭೀತಿಯಿಂದಾಗಿಯೇ ಒಂದು ವರ್ಷ ಮುಂದೂಡಲ್ಪಟ್ಟಿದ್ದ ಈ ಕ್ರೀಡಾಕೂಟ ಸಕಲ ರೀತಿಯಲ್ಲೂ ಜೈ ಎನಿಸಿಕೊಂಡಿತು. ಜಂಟಿ ಆತಿಥ್ಯವನ್ನು ವಹಿಸಿದ್ದ ರಾಜ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಜೈನ್ ವಿಶ್ವವಿದ್ಯಾಲಯದ ಪರಿಶ್ರಮ ಸಾರ್ಥಕವಾಯಿತು.

ಯುವ ಕ್ರೀಡಾಪಟುಗಳ ಪಾಲಿಗೆ ಚಿಮ್ಮು ಹಲಗೆಯಂತಿರುವ ಖೇಲೋ ಇಂಡಿಯಾ ಕ್ರೀಡಾಕೂಟಕ್ಕೆ ಸಾವಿರಾರು ಅಥ್ಲೀಟ್‌ಗಳು ಸಾಕ್ಷಿಯಾದರು. ಕ್ರೀಡಾಕೂಟವನ್ನು ಮೊದಲ ಬಾರಿಗೆ ಗ್ರೀನ್ ಗೇಮ್ಸ್ ಅಡಿಯಲ್ಲಿ ನಡೆಸಿದ್ದು ವಿಶೇಷ. ಶೂನ್ಯ ತಾಜ್ಯ ಹಾಗೂ ಶೂನ್ಯ ಪ್ಲಾಸ್ಟಿಕ್ ಮಾದರಿಯಲ್ಲಿ ಅಳವಡಿಸಿಕೊಳ್ಳಲಾಗಿತ್ತು. ಒಟ್ಟಾರೆ, 10 ದಿನಗಳ ಕಾಲ ಬೆಂಗಳೂರಿನ ವಿವಿಧ ಭಾಗಗಳಲ್ಲಿ ನಡೆಸಿದ ಪ್ರತಿಷ್ಠಿತ ಕ್ರೀಡಾಕೂಟ ಯುವ ಕ್ರೀಡಾಮನಸುಗಳಿಗೆ ಮುದ ನೀಡಿದ್ದಲ್ಲದೆ, ಕ್ರೀಡಾಪ್ರಿಯರ ಮೆಚ್ಚುಗೆಗೂ ಪಾತ್ರವಾಯಿತು.

ಈ ಕ್ರೀಡಾ ಕೂಟದಲ್ಲಿ ಆದ ರಾಷ್ಟ್ರೀಯ ದಾಖಲೆ ಮತ್ತು ಚಾಂಪಿಯನ್ ಶಿಪ್ ಪಡೆದುಕೊಂಡವರ ವಿವಿರ ಈ ಕೆಳಕಂಡಂತಿದೆ.




Downloaded From:www.kpscvaani.com




### 2 ರಾಷ್ಟ್ರೀಯ ದಾಖಲೆಗಳು ನಿರ್ಮಾಣ:

ಕ್ರೀಡಾಕೂಟದಲ್ಲಿ ಎರಡು ರಾಷ್ಟ್ರೀಯ ದಾಖಲೆ ಹಾಗೂ 76 ಕೂಟ ದಾಖಲೆಗಳು ದಾಖಲಾದವು. ಜೈನ್ ವಿವಿ ತಂಡದ ಶಿವ ಶ್ರೀಧರ್, 200 ಮೀಟರ್ ವೈಯಕ್ತಿಕ ಮೆಡಲ್ (2ನಿ.5.43ಸೆ) ವಿಭಾಗದಲ್ಲಿ ರಾಷ್ಟ್ರೀಯ ದಾಖಲೆ ಬರೆದರೆ, ಮಂಗಳೂರು ವಿವಿ ತಂಡದ ವೇಟ್ ಲಿಫ್ಟರ್ ಆನ್ ಮಾರಿಯಾ, 87 ಕೆಜಿ ಮೇಲ್ಪಟ್ಟವರ ವಿಭಾಗದಲ್ಲಿ ರಾಷ್ಟ್ರೀಯ ದಾಖಲೆ (129 ಕೆಜಿ, ಕ್ಲೀನ್ ಮತ್ತು ಜರ್ಕ್) ಬರೆದರು.

### ಆತಿಥೇಯ ಜೈನ್ ವಿವಿ ತಂಡಕ್ಕೆ ಸಮಗ್ರ ಪ್ರಶಸ್ತಿ

ಆತಿಥೇಯ ಜೈನ್ ವಿಶ್ವವಿದ್ಯಾಲಯ ತಂಡ ಕ್ರೀಡಾಕೂಟದಲ್ಲಿ ಸಮಗ್ರ ಚಾಂಪಿಯನ್‌ಪಟ್ಟ ಅಲಂಕರಿಸಿತು. ಕೂಟದಲ್ಲಿ 20 ಸ್ವರ್ಣ, 7 ಬೆಳ್ಳಿ ಹಾಗೂ 5 ಕಂಚು ಸೇರಿದಂತೆ 32 ಪದಕ ಬಾಚಿಕೊಂಡ ಜೈನ್ ವಿವಿ ತಂಡ ಕೂಟದ ಮೊದಲ ದಿನದಿಂದಲೂ ಪದಕಪಟ್ಟಿಯಲ್ಲಿ ಅಗ್ರಸ್ಥಾನ ಕಾಯ್ದುಕೊಂಡಿತು. ಅಥ್ಲೆಟಿಕ್ಸ್‌ನಲ್ಲಿ ಹೆಚ್ಚು ಪದಕ ಜಯಿಸುವ ಮೂಲಕ ಜೈನ್ ವಿವಿ ತಂಡಕ್ಕೆ ಪ್ರಬಲ ಪೈಪೋಟಿ ನೀಡಿದ ಪಂಜಾಬ್‌ನ ಲವ್ಲಿ ಪ್ರೊಫೆಷನಲ್ ವಿವಿ ತಂಡ ಎರಡನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿತು.

### ಈಜಿನಲ್ಲಿ ಜೈನ್ ವಿವಿ ಪ್ರಾಬಲ್ಯ

ಜೈನ್ ವಿವಿ ತಂಡ ಈಜು ಸ್ಪರ್ಧೆಯ ಪುರುಷರ ವಿಭಾಗದಲ್ಲಿ ಸಮಗ್ರ ಚಾಂಪಿಯನ್ ಪಟ್ಟ ಅಲಂಕರಿಸಿತು. 14 ಚಿನ್ನ, 4 ಬೆಳ್ಳಿ ಮತ್ತು 3 ಕಂಚಿನೊಂದಿಗೆ ಈಜು ಸ್ಪರ್ಧೆಯಲ್ಲಿ ಒಟ್ಟು 21 ಪದಕ (ಪುರುಷರ ವಿಭಾಗದಲ್ಲಿ 10 ಚಿನ್ನ, 3 ಬೆಳ್ಳಿ) ಗೆದ್ದು ಸಾಧನೆ ಮಾಡಿತು. ಮಹಿಳಾ ವಿಭಾಗದಲ್ಲಿ ಮುಂಬೈ ವಿವಿ ತಂಡ ಈಜು ಸ್ಪರ್ಧೆಯ ಚಾಂಪಿಯನ್ ಪಟ್ಟ ಅಲಂಕರಿಸಿತು. ಈಜು ಸ್ಪರ್ಧೆಯಲ್ಲಿ ಒಟ್ಟು 23 ದಾಖಲೆಗಳು ನಿರ್ಮಾಣಗೊಂಡವು.

### ದ್ಯುತಿಚಂದ್‌ಗೆ ಪ್ರಿಯಾ ಸೆಡ್ಡು

ಜೈನ್ ವಿವಿ ತಂಡದ ಪ್ರಿಯಾ ಮೋಹನ್ ಮಹಿಳೆಯರ 200 ಮೀಟರ್ ಓಟದಲ್ಲಿ ಒಲಿಂಪಿಯನ್ ದ್ಯುತಿ ಚಂದ್‌ಗೆ ಆಘಾತ ನೀಡಿ ಸ್ವರ್ಣ ಪದಕವನ್ನು ಮುಡಿಗೇರಿಸಿಕೊಂಡರು. ಪ್ರಿಯಾ ಮೋಹನ್, 23.90 ಸೆಕೆಂಡ್‌ಗಳಲ್ಲಿ ಈ ದೂರ ಕ್ರಮಿಸಿದರೆ, ಸ್ಟಾರ್ ಅಥ್ಲೀಟ್ ದ್ಯುತಿ ಚಂದ್ 24.02 ಸೆಕೆಂಡ್‌ಗಳಲ್ಲಿ ಈ ದೂರ ಪೂರೈಸಿದರು. 24.13 ಸೆಕೆಂಡುಗಳಲ್ಲಿ ಗುರಿ ತಲುಪಿದ ರಾಂಚಿ ವಿಶ್ವವಿದ್ಯಾನಿಲಯದ ಫ್ಲಾರೆನ್ಸ್ ಬಾರ್ಲಾ ಕಂಚಿನ ಪದಕ ಗೆದ್ದರು. ಅಂತಾರಾಷ್ಟ್ರೀಯ ಮಟ್ಟದಲ್ಲಿ ಮಿಂಚುತ್ತಿರುವ ತುಮಕೂರು ಮೂಲದ ಪ್ರಿಯಾ ಮೋಹನ್ ನಿರೀಕ್ಷೆಯಂತೆಯೇ ಮಹಿಳೆಯರ 400 ಮೀಟರ್ ಓಟದಲ್ಲೂ ಸ್ವರ್ಣ ಗೆದ್ದುಕೊಂಡರು. ಪ್ರಿಯಾ 54.43 ಸೆಕೆಂಡ್‌ಗಳಲ್ಲಿ ಈ ಗುರಿ ತಲುಪಿದರೆ, ಇವರಿಗೆ ಪ್ರಬಲ ಪೈಪೋಟಿ ನೀಡಿದ ರಾಂಚಿ ವಿವಿ ತಂಡದ ಲಾರೆನ್ಸ್ ಬಾರ್ಲಾ (54.82ಸೆ) ಬೆಳ್ಳಿಗೆ ತೃಪ್ತಿಪಟ್ಟುಕೊಂಡರು. ಮಂಗಳೂರು ವಿವಿ ತಂಡದ ಲಿಖಿತಾ (55.45ಸೆ) ಕಂಚಿನ ಪದಕ ಗೆದ್ದುಕೊಂಡರು. ಕಳೆದ ವರ್ಷ ನಡೆದ ವಿಶ್ವ ಜೂನಿಯರ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲೂ ಪ್ರಿಯಾ ಮೋಹನ್ ಪದಕ ಜಯಿಸಿದ್ದರು.




### ರಾಜ್ಯ ಸರ್ಕಾರ ಮತ್ತು ಜೈನ್ ವಿವಿಗೆ ಮೆಚ್ಚುಗೆ

ಖೇಲೋ ಇಂಡಿಯಾ ವಿಶ್ವವಿದ್ಯಾಲಯ ಕ್ರೀಡಾಕೂಟವನ್ನು ಅಚ್ಚುಕಟ್ಟಾಗಿ ಆಯೋಜಿಸಿದ ಕರ್ನಾಟಕ ಸರ್ಕಾರ ಹಾಗೂ ಸಹ ಆಯೋಜಕರಾದ ಜೈನ್ ವಿಶ್ವವಿದ್ಯಾಲಯದ ಕಾರ್ಯವೈಖರಿಗೆ ಅಮಿತ್ ಷಾ ಮೆಚ್ಚುಗೆ ವ್ಯಕ್ತಪಡಿಸಿದರು. ಕೋವಿಡ್‌ನಿಂದ ಮುಂದೂಡಿಕೆಯಾಗಿದ್ದ ಕ್ರೀಡಾಕೂಟ ಆಯೋಜಕರ ಪರಿಶ್ರಮದಿಂದ ಅದ್ಭುತವಾಗಿ ಮೂಡಿ ಬಂತು, ಇದೊಂದು ಯಶಸ್ವಿ ಕ್ರೀಡಾಕೂಟವಾಗಿ ಹೊರಹೊಮ್ಮಿದೆ ಎಂದು ಷಾ ತಿಳಿಸಿದರು. ಕ್ರೀಡಾಕೂಟದಲ್ಲಿ ಪಾಲ್ಗೊಂಡ ಎಲ್ಲಾ ಕ್ರೀಡಾಪಟುಗಳನ್ನು ಅಭಿನಂದಿಸಿದರು.


Downloaded From:www.kpscvaani.com













### ಪ್ರಿಯಾ ಮೋಹನ್, ಶಿವ ಶ್ರೀಧರ್‌ಗೆ ಅಭಿನಂದನೆ

ಜೈನ್ ವಿವಿ ತಂಡದ ಈಜುಪಟು ಶಿವ ಶ್ರೀಧರ್ ಕೂಟದಲ್ಲಿ ಒಟ್ಟು 7 ಸ್ವರ್ಣ ಪದಕ ಗೆಲ್ಲುವ ಮೂಲಕ ಅವರು ಕೂಟದಲ್ಲಿ ಗರಿಷ್ಠ ಸ್ವರ್ಣ ಪದಕ ಗೆದ್ದ ದಾಖಲೆ ಬರೆದರು. ಸಿದ್ಧಾಂತ್ ಸೆಜ್ವಾಲ್ ಮತ್ತು ಸಾಧ್ವಿ ಧುರಿ ತಲಾ 5 ಸ್ವರ್ಣ ಪದಕ ಗೆದ್ದಿದ್ದು ಹಿಂದಿನ ಆವೃತ್ತಿಯ ದಾಖಲೆಯಾಗಿತ್ತು. ಒಲಿಂಪಿಯನ್ ದ್ಯುತಿ ಚಂದ್ ಅವರನ್ನು ಮಹಿಳೆಯರ 200 ಮೀಟರ್ ಓಟದಲ್ಲಿ ಹಿಂದಿಕ್ಕಿದ ಜೈನ್ ವಿವಿ ತಂಡದ ಪ್ರಿಯಾ ಮೋಹನ್ ಕೂಟದಲ್ಲಿ ಗಮನಸೆಳೆದರು.

ಕ್ರೀಡಾಕೂಟದ ಸಮಾರೋಪ ಸಮಾರಂಭದಲ್ಲಿ ಕೇಂದ್ರ ಕ್ರೀಡಾಸಚಿವ ಅನುರಾಗ್ ಠಾಕೂರ್ ಇವರಿಬ್ಬರನ್ನು ಅಭಿನಂದಿಸಿದರು.

### ಅಥ್ಲೆಟಿಕ್ಸ್‌ನಲ್ಲಿ ಮಂಗಳೂರು ಚಾಂಪಿಯನ್

ಅಥ್ಲೆಟಿಕ್ಸ್‌ನಲ್ಲಿ 6 ಸ್ವರ್ಣ, 6 ರಜತ ಹಾಗೂ 6 ಕಂಚಿನ ಪದಕ ಜಯಿಸಿದ ಮಂಗಳೂರು ವಿವಿ ತಂಡ ಅಥ್ಲೆಟಿಕ್ಸ್ ವಿಭಾಗದಲ್ಲಿ ಚಾಂಪಿಯನ್‌ಪಟ್ಟ ಉಳಿಸಿಕೊಂಡಿತು. ಒಡಿಶಾದ ಭುವನೇಶ್ವರದಲ್ಲಿ ನಡೆದ ಕಳೆದ ಆವೃತ್ತಿಯಲ್ಲೂ ಮಂಗಳೂರು ವಿವಿ ತಂಡ ಅಥ್ಲೆಟಿಕ್ಸ್ ವಿಭಾಗದಲ್ಲಿ ಚಾಂಪಿಯನ್ ಪಟ್ಟ ಅಲಂಕರಿಸಿತ್ತು.






Downloaded From:www.kpscvaani.com




### ವಿಘ್ನೇಶ್‌ಗೆ ತ್ರಿಬಲ್ ಸ್ವರ್ಣ ಸಂಭ್ರಮ

ಮಂಗಳೂರು ವಿಶ್ವವಿದ್ಯಾಲಯದ ವಿಘ್ನೇಶ್ ಎ. ಪುರುಷರ 200 ಮೀಟರ್ ಓಟದಲ್ಲಿ 21.28 ಸೆಕೆಂಡುಗಳಲ್ಲಿ ಗುರಿ ತಲುಪಿ ಕೂಟ ದಾಖಲೆಯೊಂದಿಗೆ ಚಿನ್ನ ಗೆದ್ದರು. ಪುರುಷರ 100 ಮೀ. ಓಟದಲ್ಲೂ ವಿಘ್ನೇಶ್ ಚಿನ್ನದ ಸಾಧನೆ ಮಾಡಿದ್ದರು. ಮದ್ರಾಸ್ ವಿಶ್ವವಿದ್ಯಾಲಯದ ರಾಹುಲ್ 2020ರಲ್ಲಿ 21.42 ಸೆಕೆಂಡುಗಳಲ್ಲಿ ಗುರಿ ತಲುಪಿ ದಾಖಲೆ ಬರೆದಿದ್ದರು. ಬೆಂಗಳೂರು ವಿಶ್ವವಿದ್ಯಾನಿಲಯದ ಶಶಿಕಾಂತ್ ಅಂಗಡಿ 21.39 ಸೆಕೆಂಡುಗಳಲ್ಲಿ ಗುರಿ ತಲುಪಿ ಬೆಳ್ಳಿ ಗೆದ್ದು, ಕೂಟ ದಾಖಲೆ ಬರೆದರು. ಮಂಗಳೂರು ವಿವಿ ತಂಡದ ಶೀರ್ಥೇಶ್ ಶೆಟ್ಟಿ 21.51 ಸೆಕೆಂಡುಗಳಲ್ಲಿ ಗುರಿ ತಲುಪಿ ಕಂಚಿನ ಪದಕ ಪಡೆದರು. ಪುರುಷರ 4/400 ಮೀಟರ್ ರಿಲೇಯಲ್ಲಿ ಸ್ವರ್ಣ ಗೆದ್ದ ಮಂಗಳೂರು ಪುರುಷರ ತಂಡದ ಸದಸ್ಯರೂ ಆಗಿದ್ದ ವಿಘ್ನೇಶ್, ಆ ಮೂಲಕ ಕೂಟದಲ್ಲಿ ಮೂರು ಸ್ವರ್ಣ ಸಾಧನೆಯೊಂದಿಗೆ ವೈಯಕ್ತಿಕ ಚಾಂಪಿಯನ್ ಪ್ರಶಸ್ತಿ ಪಡೆದರು. ಮಂಗಳೂರು ವಿವಿ ಪುರುಷರ ತಂಡ 4/100 ಹಾಗೂ 4/400 ಮೀಟರ್ ರಿಲೇ ವಿಭಾಗದಲ್ಲಿ ಸ್ವರ್ಣ ಗೆದ್ದುಕೊಂಡಿತು.

### ಪ್ರಶಸ್ತಿ ಉಳಿಸಿಕೊಂಡ ಬೆಂಗಳೂರು ನಗರ ವಿವಿ

ಬೆಂಗಳೂರು ನಗರ ವಿಶ್ವವಿದ್ಯಾಲಯ ತಂಡ ಪುರುಷರ ಹಾಕಿಯಲ್ಲಿ ಸತತ 2ನೇ ಬಾರಿಗೆ ಚಾಂಪಿಯನ್‌ಪಟ್ಟ ಅಲಂಕರಿಸಿತು. ಹರೀಶ್ ಮುತಗಾರ್ (28, 60ನೇ ನಿಮಿಷದಲ್ಲಿ) ಗಳಿಸಿದ ಎರಡು ಗೋಲುಗಳ ನೆರವಿನಿಂದ ಬೆಂಗಳೂರು ತಂಡ 3–0 ಗೋಲುಗಳಿಂದ ಅಮೃತಸರದ ಗುರುನಾನಕ್ ದೇವ್ ವಿವಿ ತಂಡವನ್ನು ಮಣಿಸಿತು. ಇದರಿಂದ ಎರಡನೇ ಬಾರಿಗೆ ಖೇಲೋ ಇಂಡಿಯಾ ಯೂನಿವರ್ಸಿಟಿ ಗೇಮ್ಸ್‌ನ ಚಿನ್ನ ಗೆದ್ದುಕೊಂಡಿತು. ವಸಂತ್ ಕುಮಾರ್ ಮತ್ತೊಂದು ಗೋಲು ಬಾರಿಸಿದರು.

### ಭಾವಿ ವೈದ್ಯೆಗೆ ನಾಲ್ಕು ಪದಕ

ರಾಷ್ಟ್ರೀಯ ಮಟ್ಟದಲ್ಲಿ ಈಗಾಗಲೇ ಹಲವು ಪದಕ ಬೇಟೆಯಾಡಿರುವ ಈಜುಪಟು ದಾಮಿನಿಗೌಡ ಕೂಟದಲ್ಲಿ 4 ಕಂಚಿನ ಪದಕ ಜಯಿಸಿ ಗಮನಸೆಳೆದರು. ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿವಿ ತಂಡವನ್ನು ಪ್ರತಿನಿಧಿಸಿದ ಕೆಂಪೇಗೌಡ ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿನಿ ದಾಮಿನಿ ಗೌಡ, ಈ ಹಿಂದೆಯೂ ಹಲವು ರಾಷ್ಟ್ರೀಯ ಹಾಗೂ ಅಖಿಲ ಭಾರತ ಅಂತರ ವಿಶ್ವವಿದ್ಯಾಲಯ ಮಟ್ಟದಲ್ಲಿ ಪದಕ ಜಯಿಸಿದ್ದರು.

### ಉಪ ರಾಷ್ಟ್ರಪತಿಗಳಿಂದ ಚಾಲನೆ

ಎರಡನೇ ಆವೃತ್ತಿಯ ಖೇಲೋ ಇಂಡಿಯಾ ವಿಶ್ವವಿದ್ಯಾಲಯ ಕ್ರೀಡಾಕೂಟಕ್ಕೆ ಏಪ್ರಿಲ್ 24 ರಂದು ಉಪರಾಷ್ಟ್ರಪತಿ ವೆಂಕಯ್ಯನಾಯ್ಡು ಚಾಲನೆ ನೀಡಿದರು. ಕಂಠೀರವ ಸ್ಟೇಡಿಯಂ, ಕನಕಪುರ ರಸ್ತೆಯಲ್ಲಿರುವ ಜೈನ್ ವಿಶ್ವವಿದ್ಯಾಲಯದ ಕ್ಯಾಂಪಸ್ ಸೇರಿದಂತೆ 5 ಸ್ಥಳಗಳಲ್ಲಿ ಸ್ಪರ್ಧೆಗಳು ನಡೆದವು. 20 ವಿವಿಧ ಸ್ಪರ್ಧೆಗಳು ನಡೆದು, 189 ವಿಶ್ವವಿದ್ಯಾಲಯಗಳಿಂದ 3900 ಕ್ರೀಡಾಪಟುಗಳು ಪಾಲ್ಗೊಂಡಿದ್ದರು. 2021 ರಲ್ಲಿ ನಡೆಯಬೇಕಿದ್ದ ಕ್ರೀಡಾಕೂಟವು ಕೋವಿಡ್‌ನಿಂದಾಗಿ ಮುಂದೂಡಿಕೆಯಾಗಿತ್ತು. 2020ರಲ್ಲಿ ನಡೆದ ಮೊದಲ ಆವೃತ್ತಿಯ ಕ್ರೀಡಾಕೂಟಕ್ಕೆ ಒಡಿಶಾದ ಭುವನೇಶ್ವರ ನಗರ ಆತಿಥ್ಯ ವಹಿಸಿತ್ತು. ಜೈನ್ ಗ್ಲೋಬಲ್ ಕ್ಯಾಂಪಸ್‌ನಲ್ಲಿ ಭಾರ ಎತ್ತುವ, ಜೂಡೋ, ಕುಸ್ತಿ, ಕಬಡ್ಡಿ, ವಾಲಿಬಾಲ್, ಈಜು, ಯೋಗಾಸನ, ಆರ್ಚರಿ, ಫೆನ್ಸಿಂಗ್, ಕರಾಟೆ, ಬಾಕ್ಸಿಂಗ್, ಫುಟ್‌ಬಾಲ್ ಸೇರಿದಂತೆ 13 ಕ್ರೀಡೆಗಳು ನಡೆದರೆ, ಕಂಠೀರವ ಕ್ರೀಡಾಂಗಣ, ಜೈನ್ ಗ್ಲೋಬಲ್ ಕ್ಯಾಂಪಸ್, ಡಿ ಜೈನ್ ಸ್ಪೋರ್ಟ್ಸ್ ಸ್ಕೂಲ್, ಸಾಯಿ ನೇತಾಜಿ ಸುಭಾಷ್ ಸದರ್ನ್ ಸೆಂಟರ್ ಮತ್ತು ಕೆ.ಎಂ.ಕಾರಿಯಪ್ಪ ಹಾಕಿ ಕ್ರೀಡಾಂಗಣದಲ್ಲಿ ಫುಟ್‌ಬಾಲ್, ಟೇಬಲ್ ಟೆನಿಸ್, ಬ್ಯಾಡ್ಮಿಂಟನ್, ಟೆನಿಸ್ ಆಯೋಜಿಸಲಾಗಿತ್ತು.

### 2036ಕ್ಕೆ ಅಗ್ರ 5 ಗುರಿ ; ಅಮಿತ್ ಶಾ

ಭಾರತದಲ್ಲಿ ಜನಸಂಖ್ಯೆ ಲೆಕ್ಕಾಚಾರದಲ್ಲಿ ಹೋಲಿಸಿದರೆ ಕ್ರೀಡೆಯಲ್ಲಿ ಇನ್ನು ಸಾಧನೆ ಮಾಡಬಹುದು. 2036ರ ಒಲಿಂಪಿಕ್ಸ್ ಪದಕ ಪಟ್ಟಿಯಲ್ಲಿ ಭಾರತ ಅಗ್ರ 5ರೊಳಗೆ ಸ್ಥಾನ ಪಡೆಯಬೇಕು. ಇದಕ್ಕೆ ಈಗಿನಿಂದಲೇ ತಯಾರಿ ಅಗತ್ಯವಿದೆ ಎಂದು ಅಮಿತ್ ಶಾ ಕ್ರೀಡಾಕೂಟದ ಸಮಾರೋಪ ಸಮಾರಂಭದಲ್ಲಿ ತಿಳಿಸಿದರು. ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಮಾತನಾಡಿದ ಅವರು, ದೇಶ 100ನೇ ಸ್ವಾತಂತ್ರ್ಯೋತ್ಸವ ಸಂಭ್ರಮದ ವೇಳೆ ಈ ಸಾಧನೆ ಮಾಡಬೇಕಿದೆ. ಮೋದಿ ಅಧಿಕಾರಕ್ಕೆ ಬಂದ ಮೇಲೆ ಖೇಲೋ ಇಂಡಿಯಾ, ಫಿಟ್ ಇಂಡಿಯಾ ಕಲ್ಪನೆಯಲ್ಲಿ ದೇಶ ಸಾಗುತ್ತಿದೆ ಎಂದರು. ಮುಂದಿನ 25 ವರ್ಷಕ್ಕೆ ದೇಶ ಕ್ರೀಡಾಕ್ಷೇತ್ರಕ್ಕೆ ಬೇಕಾಗಿರುವ ನೀಲನಕ್ಷೆಯನ್ನು ಕೇಂದ್ರ ಸರ್ಕಾರ ಸಿದ್ಧಪಡಿಸಿದೆ. ಮುಂದಿನ ದಿನಗಳಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರತ ಕ್ರೀಡಾಕ್ಷೇತ್ರದಲ್ಲೂ ಮತ್ತಷ್ಟು ಮಿಂಚಲಿದ್ದು, ಇದಕ್ಕೆ ಖೇಲೋ ಇಂಡಿಯಾ ಕಲ್ಪನೆಯೇ ವೇದಿಕೆಯಾಗಿದೆ ಎಂದರು.



Downloaded From:www.kpscvaani.com




## ಕುಂದು-ಕೊರತೆಗಳ ಪರಿಹಾರಕ್ಕಾಗಿ

# "ಕಲ್ಯಾಣ ಮಿತ್ರ" ಸಹಾಯವಾಣಿ

**ಪರಿಶಿಷ್ಟ ಜಾತಿ-ಪರಿಶಿಷ್ಟ ವರ್ಗದ ಜನರ ಕಲ್ಯಾಣಕ್ಕಾಗಿ ಕಾರ್ಯನಿರ್ವಹಿಸುತ್ತಿರುವ ಇಲಾಖೆಗಳಲ್ಲಿ ಅನುಷ್ಠಾನ ಮಾಡಲಾಗುತ್ತಿರುವ ಕಾರ್ಯಕ್ರಮಗಳು ಮತ್ತು ಕುಂದು-ಕೊರತೆಗಳ ಪರಿಹಾರಕ್ಕಾಗಿ ಸರ್ಕಾರವು ಸಹಾಯವಾಣಿಯನ್ನು ಆರಂಭಿಸಿದೆ.**

ಎನ್. ನಾಗರತ್ನಮ್ಮ

ಪರಿಶಿಷ್ಟ ಜಾತಿ-ಪರಿಶಿಷ್ಟ ವರ್ಗಗಳ ಜನರ ಕಲ್ಯಾಣವೇ ನಿಜವಾದ ಸಮಾಜ ಕಲ್ಯಾಣ ಎಂಬ ಧ್ಯೇಯ ಹೊಂದಿರುವ ಸರ್ಕಾರ ದೀನ-ದಲಿತರು ಸ್ವಾವಲಂಬಿ ಬದುಕು ಕಟ್ಟಿಕೊಂಡು, ಸಂತೋಷದಿಂದ ಜೀವನ ನಡೆಸಬೇಕು. ಅವರು ಸಮಾಜದ ಮುಖ್ಯವಾಹಿನಿಗೆ ಬರುವ ಜೊತೆಗೆ, ಉನ್ನತ ಶಿಕ್ಷಣ ಪಡೆದು ದೇಶದ ಆರ್ಥಿಕತೆಯನ್ನು ವೃದ್ಧಿ ಮಾಡಬೇಕು ಎನ್ನುವ ಉದ್ದೇಶದಿಂದ ಸಮಾಜ ಕಲ್ಯಾಣ ಇಲಾಖೆ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಗಳ ಅಧೀನದಲ್ಲಿರುವ ಎಲ್ಲಾ ಕಛೇರಿಗಳು, ನಿಗಮ, ಮಂಡಳಿ, ಆಯೋಗ, ಕೋಶಗಳಿಂದ ಅನುಷ್ಠಾನ ಮಾಡಲಾಗುತ್ತಿರುವ ಕಾರ್ಯಕ್ರಮಗಳ ಸಂಪೂರ್ಣ ಮಾಹಿತಿ ಪಡೆಯಲು ಹಾಗೂ ಕುಂದು-ಕೊರತೆಗಳ ಪರಿಹಾರಕ್ಕಾಗಿ ಏಕೀಕೃತ ಎಸ್‌ಸಿ/ಎಸ್‌ಟಿ 24 ಗಂಟೆ 7 ದಿನಗಳೂ ಕಾರ್ಯನಿರ್ವಹಿಸುವ "ಕಲ್ಯಾಣಮಿತ್ರ" ಸಹಾಯವಾಣಿಯನ್ನು ಪ್ರಾರಂಭಿಸಿದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಇಲಾಖೆಗಳು ಅನುಷ್ಠಾನಗೊಳಿಸುತ್ತಿರುವ ಯೋಜನೆಗಳ ಬಗ್ಗೆ ಸಂಪೂರ್ಣ ಮಾಹಿತಿ ಪಡೆಯಲು ಹಾಗೂ ಅರ್ಜಿ ಸಲ್ಲಿಸುವುದು, ಸೌಲಭ್ಯಗಳನ್ನು ಪಡೆಯುವಲ್ಲಿ ಎದುರಿಸುತ್ತಿರುವ ಸಮಸ್ಯೆಗಳ ಪರಿಹಾರಕ್ಕಾಗಿ ಸರ್ಕಾರವು "ಕಲ್ಯಾಣ ಮಿತ್ರ" ಸಹಾಯವಾಣಿ ಸಂಖ್ಯೆ 9482300400 ಅನ್ನು ಪ್ರಾರಂಭಿಸಿದೆ.

ಸಮಾಜ ಕಲ್ಯಾಣ ಇಲಾಖೆ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ವಿದ್ಯಾರ್ಥಿ ನಿಲಯದ ವಿದ್ಯಾರ್ಥಿಗಳಿಗೆ ಸಮವಸ್ತ್ರ, ಪುಸ್ತಕ, ಲೇಖನ ಸಾಮಗ್ರಿಗಳು, ಶೂ ಇವೇ ಮುಂತಾದವುಗಳನ್ನು ಒದಗಿಸಿಕೊಡುವ ಜೊತೆಗೆ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ಪದವಿ ಹಾಗೂ ಸ್ನಾತಕೋತ್ತರ ಪದವಿಗಳಲ್ಲಿ ಪ್ರಥಮ ಬಾರಿಗೆ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ಪ.ಜಾ ಮತ್ತು ಪ.ಪಂ ದ



Downloaded From:www.kpscvaani.com



ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡಲಾಗುತ್ತಿದೆ.

ಅಂತರ್ಜಾತಿ ವಿವಾಹ, ವಿಧವಾ ಮರು ವಿವಾಹ, ಸರಳ ವಿವಾಹ, ದೇವದಾಸಿಯರ ಮಕ್ಕಳನ್ನು ವಿವಾಹವಾಗುವವರಿಗೆ ಪ್ರೋತ್ಸಾಹಧನ, ವಿಧವೆಯರು ಮರು ವಿವಾಹವಾದಲ್ಲಿ ರೂ. 3 ಲಕ್ಷದವರೆಗೆ ಪ್ರೋತ್ಸಾಹ ಧನ ವಿತರಿಸಲಾಗುತ್ತಿದ್ದು, ಪಿ.ಸಿ.ಆರ್. ಕಾಯ್ದೆ ಮತ್ತು ಪಿ.ಓ.ಎ ಕಾಯ್ದೆ ಅನುಷ್ಠಾನ ಯೋಜನೆಯಡಿ ದೌರ್ಜನ್ಯಕ್ಕೊಳಗಾದ ಪ.ಜಾ ಮತ್ತು ಪ.ಪಂ.ದ ಸಂತ್ರಸ್ತರಿಗೆ ಪರಿಹಾರ ಧನ, ದೌರ್ಜನ್ಯದಲ್ಲಿ ಮೃತಪಟ್ಟವರ ಅವಲಂಬಿತರಿಗೆ ಪರಿಹಾರ, ಅನುಕಂಪದ ಆಧಾರಿತ ನೌಕರಿ/ಪಿಂಚಣಿ ಸೌಲಭ್ಯ ಕಲ್ಪಿಸಲಾಗುವುದು.

ಪ.ಜಾ ಮತ್ತು ಪರಿಶಿಷ್ಟ ಪಂಗಡದ ಸಮುದಾಯದವರ ಅಂತ್ಯ ಸಂಸ್ಕಾರಕ್ಕಾಗಿ ಸ್ಮಶಾನ ಭೂಮಿ ಖರೀದಿ, ಅಭಿವೃದ್ಧಿಗಾಗಿ ಅನುದಾನ ಬಿಡುಗಡೆ ಮಾಡುವುದು, ಉದ್ಯಮಿಗಳಿಗೆ ಶೇ.4ರ ಬಡ್ಡಿ ದರದಲ್ಲಿ ಸಾಲ ಮತ್ತು ಸಮಾನಾಂತರ ಖಾತರಿ ಸೌಲಭ್ಯವನ್ನು ಕೆ.ಎಸ್.ಎಫ್.ಸಿ ಮತ್ತು ರಾಷ್ಟ್ರೀಕೃತ ಮತ್ತು ಡಿ.ಸಿ.ಸಿ ಬ್ಯಾಂಕ್‌ಗಳ ಮೂಲಕ ಕಲ್ಪಿಸಲಾಗುತ್ತಿದೆ.

ಹೊರ ದೇಶದಲ್ಲಿ ಉನ್ನತ ಶಿಕ್ಷಣಕ್ಕಾಗಿ ಹಣಕಾಸಿನ ನೆರವು ಒದಗಿಸುವುದು, ಉದ್ಯೋಗಾಕಾಂಕ್ಷಿಗಳಿಗೆ ವಿವಿಧ ಇಲಾಖೆ, ನಿಗಮ, ಮಂಡಳಿಗಳ ನೇಮಕಾತಿಗಳಲ್ಲಿ ಮೀಸಲಾತಿ ಜಾರಿಗೊಳಿಸುವುದು, ವಿದ್ಯಾರ್ಥಿಗಳಿಗೆ ಪ್ರತಿಷ್ಠಿತ ಶಾಲೆಗಳಲ್ಲಿ ಪ್ರವೇಶಾವಕಾಶ ಕಲ್ಪಿಸಿ ಶಾಲಾ ಶುಲ್ಕ ಮತ್ತು ನಿರ್ವಹಣಾ ವೆಚ್ಚವನ್ನು ಭರಿಸಲಾಗುತ್ತಿದೆ.

ಪ್ರಾಧಿಕಾರಗಳು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಜ್ಜುಗೊಳಿಸಲು ಪರೀಕ್ಷಾ ಪೂರ್ವ ತರಬೇತಿ ಕೇಂದ್ರಗಳ ಮೂಲಕ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಅಭ್ಯರ್ಥಿಗಳಿಗೆ ಯು.ಪಿ.ಎಸ್.ಸಿ., ಕೆ.ಎ.ಎಸ್., ಎಸ್.ಎಸ್.ಸಿ., ಆರ್.ಆರ್.ಬಿ., ಐ.ಬಿ.ಪಿ.ಎಸ್., ಗ್ರೂಪ್-ಸಿ ಮೊದಲಾದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪೂರ್ವಭಾವಿ ಉಚಿತ ತರಬೇತಿ ನೀಡಲಾಗುವುದು. ಅಲ್ಲದೆ ವಿವಿಧ ಇಲಾಖೆ, ನಿಗಮ, ಮಂಡಳಿಗಳಲ್ಲಿ ನೇಮಕಾತಿಗಳಲ್ಲಿ ಇರುವ ಬ್ಯಾಕ್‌ಲಾಗ್ ಹುದ್ದೆಗಳನ್ನು ಗುರ್ತಿಸಿ, ಭರ್ತಿಗೆ ಕ್ರಮಕೈಗೊಳ್ಳಲಾಗುವುದನ್ನು ಮಾಡಲಾಗುತ್ತದೆ.

ಸಮಾಜ ಕಲ್ಯಾಣ ಇಲಾಖಾ ವ್ಯಾಪ್ತಿಯ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಮೂಲಕ ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದ ಗ್ರಾಮೀಣ ಪ್ರದೇಶದ ಪ.ಜಾ& ಪ.ಪಂ. ಮತ್ತು ಹಿಂದುಳಿದ ವರ್ಗಗಳ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುವ ಉದ್ದೇಶದಿಂದ ಕೇಂದ್ರ ಸರ್ಕಾರದ ಜವಾಹರ್ ನವೋದಯ ಮಾದರಿಯ ವಸತಿ ಶಾಲೆಗಳಂತೆ ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ, ಅಟಲ್ ಬಿಹಾರಿ ವಾಜಪೇಯಿ, ಇಂದಿರಾ ಗಾಂಧಿ ವಸತಿ ಶಾಲೆ, ಡಾ. ಬಿ.ಆರ್. ಅಂಬೇಡ್ಕರ್ ವಸತಿ ಶಾಲೆ, ಏಕಲವ್ಯ ಮಾದರಿಯ ಒಟ್ಟು 826 ವಸತಿ ಶಾಲೆಗಳು ಈ ಸಂಘದಡಿಯಲ್ಲಿ ಕಾರ್ಯನಿರ್ವಹಿಸುತ್ತಿವೆ.

ಇನ್ನು ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಕರ್ನಾಟಕ ಆದಿ ಜಾಂಬವ ಅಭಿವೃದ್ಧಿ ನಿಗಮ, ಕರ್ನಾಟಕ ತಾಂಡ ಅಭಿವೃದ್ಧಿ ನಿಗಮ, ಕರ್ನಾಟಕ ರಾಜ್ಯ ಭೋವಿ ಅಭಿವೃದ್ಧಿ ನಿಗಮ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಅಲೆಮಾರಿ ಅಭಿವೃದ್ಧಿ ಕೋಶ, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ, ಡಾ. ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮಗಳು ಕಾರ್ಯನಿರ್ವಹಿಸುತ್ತಿವೆ. ಇನ್ನು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮವು ಕಾರ್ಯನಿರ್ವಹಿಸುತ್ತಿದ್ದು, ಇಲ್ಲಿಯೂ ಕೂಡ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರ ಅಭಿವೃದ್ಧಿಗಾಗಿ ಗಂಗಾ ಕಲ್ಯಾಣ, ಭೂ ಒಡೆತನ, ಉದ್ಯಮಶೀಲತಾ ಅಭಿವೃದ್ಧಿ, ಸ್ವಯಂ ಉದ್ಯೋಗ, ಮಹಿಳೆಯರಿಗೆ ಮೈಕ್ರೋ ಕ್ರೆಡಿಟ್ ಯೋಜನೆ ಸೇರಿದಂತೆ ಇನ್ನು ಹಲವಾರು ಯೋಜನೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

ಇನ್ನು ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗವು ಮಾನ್ಯುಯಲ್ ಸ್ಕ್ಯಾವೆಂಜರ್ಸ್ ನೇಮಕಾತಿ ನಿಷೇಧ ಮತ್ತು ಪುನರ್ವಸತಿ ಅಧಿನಿಯಮ 2013 ರಲ್ಲಿನ ನಿಯಮಗಳನ್ನು ಜಾರಿಗೊಳಿಸುವುದು ಮತ್ತು ಸಫಾಯಿ ಕರ್ಮಚಾರಿ ಮತ್ತು ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್‌ಗಳ ದೂರುಗಳನ್ನು ಆಲಿಸಿ ಪರಿಹರಿಸುವುದು, ಸಂಬಂಧಪಟ್ಟ ಇತರ ಎಲ್ಲಾ ವಿಷಯಗಳ ಬಗ್ಗೆ ಮೇಲ್ವಿಚಾರಣೆ ಮತ್ತು ಶಿಫಾರಸ್ಸು ಮಾಡುತ್ತಿದೆ.

ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣವೇ ಸದೃಢ ಸಮಾಜದ ನಿರ್ಮಾಣಕ್ಕೆ ಬುನಾದಿ ಎಂಬ ಧ್ಯೇಯವನ್ನು ಹೊಂದಿರುವ ಸರ್ಕಾರ ಮೇಲ್ಕಂಡ ಯೋಜನೆಗಳಲ್ಲದೆ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಯೋಜನೆಯಡಿ ಸರ್ಕಾರದ 35 ವಿವಿಧ ಇಲಾಖೆಗಳ ಮೂಲಕ ಎಸ್.ಸಿ/ಎಸ್.ಟಿ ಸಮುದಾಯದವರ ಅಭಿವೃದ್ಧಿಗಾಗಿ ಅನೇಕ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ. ಎಸ್‌ಸಿ, ಎಸ್‌ಟಿ ಜನರ ಅಭಿವೃದ್ಧಿಗೆ 5 ವರ್ಷಗಳ ಯೋಜನೆ ರೂಪಿಸಿ, ಆರ್ಥಿಕ ನೆರವು ಒದಗಿಸಲು ಆ್ಯಂಕರ್ ಬ್ಯಾಂಕ್ ವ್ಯವಸ್ಥೆ ಮಾಡಲಾಗುತ್ತಿದೆ.

ರಾಜ್ಯದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಸಮುದಾಯದವರ ಕುಂದು-ಕೊರತೆಗಳ ವಿಚಾರಣೆ ಮತ್ತು ಪರಿಹಾರ ಒದಗಿಸುವುದನ್ನು ಕರ್ನಾಟಕ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಆಯೋಗವು ಮಾಡುತ್ತಿದ್ದು, ಇನ್ನೂ ತ್ವರಿತವಾಗಿ ಕುಂದು-ಕೊರತೆಗಳನ್ನು ನಿವಾರಣೆ ಮಾಡುವ ನಿಟ್ಟಿನಲ್ಲಿ ಸರ್ಕಾರವು "ಕಲ್ಯಾಣ ಮಿತ್ರ" ಸಹಾಯವಾಣಿಯನ್ನು ಪ್ರಾರಂಭಿಸಿದೆ.


Downloaded From:www.kpscvaani.com

# 2017 ರಾಜ್ಯ ಚಲನಚಿತ್ರ ಪ್ರಶಸ್ತಿ ಪ್ರದಾನ



**ಚಂದನವನದ ಅತ್ಯುನ್ನತ ಪ್ರಶಸ್ತಿಗಳಲ್ಲಿ ಒಂದಾದ ರಾಜ್ಯ ಚಲನಚಿತ್ರ ಪ್ರಶಸ್ತಿಗೆ ಭಾಜನರಾದವರ ಸಂಕ್ಷಿಪ್ತ ಪರಿಚಯ.**

ಮನುಷ್ಯನಿಗೆ ದುಡಿಮೆ, ಆಹಾರ, ಸೂರು ಎಷ್ಟು ಮುಖ್ಯವೋ... ಅದೇ ರೀತಿಯಲ್ಲಿ ಮನರಂಜನೆಯು ಅಷ್ಟೇ ಮುಖ್ಯವಾಗುತ್ತದೆ. ದೇಹಕ್ಕೆ ಅಥವಾ ಮನಸ್ಸಿಗೆ ಆದ ಆಯಾಸವನ್ನು ಹೋಗಲಾಡಿಸುವ ಶಕ್ತಿ ಮನರಂಜನೆಗಿದೆ. ಹೀಗೆ ಸಾರ್ವಜನಿಕರಿಗೆ ಮನರಂಜನೆ ನೀಡುತ್ತಿರುವ ಕ್ಷೇತ್ರಗಳಲ್ಲಿ ಚಲನಚಿತ್ರ ರಂಗವು ಒಂದು. ಉತ್ತಮ ಸದಭಿರುಚಿಯ ಚಿತ್ರಗಳು ಬರಬೇಕಾದರೆ ಅವುಗಳಿಗೆ ಪ್ರೋತ್ಸಾಹ ಮತ್ತು ಮೆಚ್ಚುಗೆ ದೊರಕಬೇಕು. ಹಾಗಾಗಿ ಚಲನಚಿತ್ರ ರಂಗದ ಕಲಾವಿದರು, ನಟ–ನಟಿಯರು, ತಂತ್ರಜ್ಞರು, ನಿರ್ಮಾಪಕರು, ನಿರ್ದೇಶಕರು ಇವರನ್ನು ಒಳಗೊಂಡಂತೆ ಈ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಕಲಾವಿದರ ಸಾಧನೆಯನ್ನು ಗುರುತಿಸಿ ಅವರುಗಳಿಗೆ ವಾರ್ಷಿಕವಾಗಿ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ.

ಕರ್ನಾಟಕ ಸರ್ಕಾರದ ವತಿಯಿಂದ ನೀಡಲಾಗುವ ವಾರ್ಷಿಕ ರಾಜ್ಯ ಚಲನಚಿತ್ರ ಪ್ರಶಸ್ತಿಯು ಚಂದನವನದಲ್ಲಿ ನೀಡಲಾಗುವ ಅತ್ಯುನ್ನತ ಪ್ರಶಸ್ತಿಗಳಲ್ಲಿ ಒಂದು ಎಂದು ಪರಿಗಣಿಸಲಾಗುತ್ತದೆ. ರಾಜ್ಯ ಸರ್ಕಾರ ನೀಡುವ ಈ ರಾಜ್ಯ ಚಲನಚಿತ್ರ ಪ್ರಶಸ್ತಿಗೆ ವಿಜೇತರನ್ನು ಆಯ್ಕೆ ಮಾಡಲು ಸರ್ಕಾರವು ಪ್ರಶಸ್ತಿ ಆಯ್ಕೆ ಸಮಿತಿಯನ್ನು ರಚಿಸುತ್ತದೆ.

ಹೀಗೆ ಎನ್.ಎಸ್.ಶಂಕರ್ ಅವರ ಅಧ್ಯಕ್ಷತೆಯಲ್ಲಿ 2017 ನೇ ಕ್ಯಾಲೆಂಡರ್ ವರ್ಷದ ಪ್ರಶಸ್ತಿ ಆಯ್ಕೆ ಸಲಹಾ ಸಮಿತಿಯು ರಾಜ್ಯ ಚಲನಚಿತ್ರ ಪ್ರಶಸ್ತಿಗೆ ಅರ್ಹರನ್ನು ಆಯ್ಕೆ ಮಾಡಿದೆ. ಇನ್ನು 2017 ನೇ ಕ್ಯಾಲೆಂಡರ್ ವರ್ಷದ ಜೀವಮಾನ ಸಾಧನೆ ಪ್ರಶಸ್ತಿಯನ್ನು ಜೆ.ಕೆ. ಶ್ರೀನಿವಾಸ ಮೂರ್ತಿ ಮತ್ತು ಇದೇ ಸಾಲಿನ ವಾರ್ಷಿಕ ಸಾಹಿತ್ಯ ಪ್ರಶಸ್ತಿಯನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ನಿರ್ದೇಶಕರು ಹಾಗೂ ವಾರ್ಷಿಕ ಅತ್ಯುತ್ತಮ ಕಿರುಚಿತ್ರ ಪ್ರಶಸ್ತಿಯನ್ನು ಎಂ.ಎನ್.ಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ಸಮಿತಿಯು ಪ್ರಶಸ್ತಿ ಪುರಸ್ಕೃತರನ್ನು ಆಯ್ಕೆ ಮಾಡಿದೆ.

ಸಮಿತಿಯು 121 ಚಲನಚಿತ್ರಗಳನ್ನು ವೀಕ್ಷಿಸಿ ಸರ್ವಾನುಮತದಿಂದ ಆಯ್ಕೆ ಮಾಡಿದ 2017 ನೇ ಕ್ಯಾಲೆಂಡರ್ ವರ್ಷದ ರಾಜ್ಯ ವಾರ್ಷಿಕ ಚಲನಚಿತ್ರ ಪ್ರಶಸ್ತಿಗೆ 14.11.2018 ರಂದು ಸರ್ಕಾರವು ಅಧಿಕೃತ ಸರ್ಕಾರಿ ಆದೇಶವನ್ನು ಹೊರಡಿಸಿತ್ತು. ಡಾ: ರಾಜ್‌ಕುಮಾರ್ ಅವರ



Downloaded From:www.kpscvaani.com



ಜನ್ಮದಿನವಾದ ಏಪ್ರಿಲ್ 24 ರಂದೇ ರಾಜ್ಯ ಚಲನಚಿತ್ರ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಆಯೋಜಿಸಲು ಸರ್ಕಾರ ಆದೇಶ ಹೊರಡಿಸಿರುವುದರಿಂದ 2019 ರ ಏಪ್ರಿಲ್ 24 ರಂದು ಸಮಾರಂಭವನ್ನು ಏರ್ಪಡಿಸಲಾಗಿತ್ತು. ಆದರೆ ಅಂದು ಮಂಡ್ಯ ಜಿಲ್ಲೆಯಲ್ಲಿ ಸಂಭವಿಸಿದ ಬಸ್ ಅಪಘಾತದಲ್ಲಿ ಹಲವು ಮಂದಿ ದುರ್ಮರಣಕ್ಕೀಡಾದ ಕಾರಣ ಕಾರ್ಯಕ್ರಮವನ್ನು ರದ್ದು ಪಡಿಸಲಾಯಿತು. ಇದಾದ ಎರಡು ದಿನಗಳ ತರುವಾಯ ಚಿತ್ರನಟ ಸಂಸದ ಅಂಬರೀಷ್ ಅವರು ನಿಧನರಾದ ಕಾರಣ ಮತ್ತೆ ಮುಂದೂಡಲಾಗಿತ್ತು. ಆ ನಂತರ ಸತತ ಎರಡು ವರ್ಷ ಮಹಾಮಾರಿ ಕೋವಿಡ್–19 ನಿಂದಾಗಿ ಪ್ರಶಸ್ತಿ ಸಮಾರಂಭವನ್ನು ಹಮ್ಮಿಕೊಳ್ಳಲಾಗಿರಲಿಲ್ಲ. ಆದ್ದರಿಂದ ಇದೇ ಏಪ್ರಿಲ್ 24 ರಂದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ನಟಸಾರ್ವಭೌಮ ಡಾ: ರಾಜ್‌ಕುಮಾರ್ ಅವರ 94 ನೇ ಜನ್ಮದಿನಾಚರಣೆಯಂದು 2017 ನೇ ರಾಜ್ಯ ವಾರ್ಷಿಕ ಚಲನಚಿತ್ರ ಪ್ರಶಸ್ತಿಯನ್ನು ಮುಖ್ಯಮಂತ್ರಿ ಬಸವರಾಜ ಎಸ್ ಬೊಮ್ಮಾಯಿ ಅವರು ಪ್ರದಾನ ಮಾಡಿದರು.

## ಪ್ರಶಸ್ತಿ ವಿಜೇತರ ಸಂಕ್ಷಿಪ್ತ ವಿವರ:

**ಡಾ: ರಾಜ್‌ಕುಮಾರ್ ಪ್ರಶಸ್ತಿ:**

ಕನ್ನಡ ಚಿತ್ರರಂಗದ ಸಮಗ್ರ ಬೆಳವಣಿಗೆಗೆ ಅಪೂರ್ವ ಕೊಡುಗೆ ನೀಡಿದ ಸಾಧಕರಿಗೆ ಕನ್ನಡದ ಮೇರುನಟ ಡಾ: ರಾಜ್‌ಕುಮಾರ್ ಅವರ ಹೆಸರಿನಲ್ಲಿ ಸ್ಥಾಪಿಸಿರುವ ರಾಜ್ಯ ಪ್ರಶಸ್ತಿಯನ್ನು ನೀಡಲಾಗುತ್ತದೆ. ದಕ್ಷಿಣ ಭಾರತದ ಖ್ಯಾತ ನಟಿ, ಭಾರತದ ಐದು ಭಾಷೆಗಳಲ್ಲಿ ಲೀಲಾಜಾಲವಾಗಿ ನಟಿಸಿರುವ ಲಕ್ಷ್ಮೀ ಅವರು 1970 ರ ದಶಕದ ಆರಂಭದಿಂದ ಕನ್ನಡದ ನಂಟನ್ನು ಈವರೆವಿಗೂ ಗಾಢವಾಗಿ ಉಳಿಸಿಕೊಂಡು ಬಂದಿದ್ದಾರೆ. ಅಲ್ಲದೆ ಕನ್ನಡದ ಹಲವಾರು ಚಿತ್ರಗಳ ಯಶಸ್ಸಿಗೆ  ನಟಿ ಲಕ್ಷ್ಮೀ ಅವರ ಕಾಣಿಕೆಯು ಗಮನಾರ್ಹವಾದದ್ದು. ಕನ್ನಡ ಪ್ರೇಕ್ಷಕರ ಹೃದಯದಲ್ಲಿ ಭದ್ರ ಸ್ಥಾನ ಪಡೆದಿರುವ ಹಿರಿಯ ಕಲಾವಿದೆಯಾದ ಲಕ್ಷ್ಮೀ ಅವರಿಗೆ 2017 ನೇ ಸಾಲಿನ ಡಾ: ರಾಜ್‌ಕುಮಾರ್ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

**ಪುಟ್ಟಣ್ಣ ಕಣಗಾಲ್ ಪ್ರಶಸ್ತಿ:**

ಕನ್ನಡ ಚಿತ್ರರಂಗಕ್ಕೆ ತಮ್ಮ ನಿರ್ದೇಶನದ ಮೂಲಕ ಅಪೂರ್ವ ಕೊಡುಗೆ ನೀಡಿದ ನಿರ್ದೇಶಕರಿಗೆ ಪುಟ್ಟಣ್ಣ ಕಣಗಾಲ್ ಹೆಸರಿನಲ್ಲಿ ಜೀವಮಾನ ಸಾಧನೆ ಪ್ರಶಸ್ತಿಯನ್ನು ನೀಡಲಾಗುತ್ತದೆ. ಹಿರಿಯ ಹೆಸರಾಂತ ನಿರ್ದೇಶಕ, ನಿರ್ಮಾಪಕ ಮತ್ತು ನಟರಾದ ಎಸ್.ನಾರಾಯಣ್ ಅವರಿಗೆ ಈ ಪ್ರಶಸ್ತಿಯನ್ನು ನೀಡಲಾಯಿತು. ಚಂದನವನಕ್ಕೆ ಸಹಾಯಕ ನಿರ್ದೇಶಕರಾಗಿ ಪ್ರವೇಶ ಪಡೆದ ನಾರಾಯಣ್ ಅವರು 'ಚೈತ್ರದ ಪ್ರೇಮಾಂಜಲಿ' ಚಿತ್ರದ ಮೂಲಕ ಮೊದಲ ಬಾರಿಗೆ ಸ್ವತಂತ್ರ ನಿರ್ದೇಶಕರಾದರು. ಆ ನಂತರ ಅವರು 'ಕುರಿಗಳು ಸಾರ್ ಕುರಿಗಳು,' 'ಶಬ್ಧವೇಧಿ', 'ಸೂರ್ಯವಂಶ', 'ಗಲಾಟೆ ಅಳಿಯಂದ್ರು' ಮುಂತಾದ ಸೂಪರ್ ಹಿಟ್‌ನಂತಹ ಸಿನಿಮಾಗಳನ್ನು ನಿರ್ದೇಶಿಸಿದ್ದಾರೆ.



**ಡಾ: ವಿಷ್ಣುವರ್ಧನ್ ಪ್ರಶಸ್ತಿ:**

ಕನ್ನಡ ಚಲನಚಿತ್ರ ರಂಗದ ವಿವಿಧ ವಲಯಗಳಲ್ಲಿ ಅಪೂರ್ವ ಸಾಧನೆ ಮಾಡಿದ ಹಿರಿಯ ಚೇತನಗಳಿಗೆ ನೀಡುವ ಜೀವಮಾನ ಸಾಧನೆ ಪ್ರಶಸ್ತಿಯು ದಿವಂಗತ ಜಿ.ಎನ್. ಲಕ್ಷ್ಮೀಪತಿ ಅವರಿಗೆ ಈ ಬಾರಿ ಸಂದಿತ್ತು. ಸುಪ್ರಸಿದ್ಧ ವಾಣಿಜ್ಯೋದ್ಯಮಿಗಳಾದ ಇವರು ಎಲ್.ಎನ್. ಕಂಬೈನ್ಸ್ ಲಾಂಛನದಲ್ಲಿ ಸದಭಿರುಚಿಯ ಹಾಗೂ ಮೌಲಿಕವಾದ ಚಿತ್ರಗಳನ್ನು ನಿರ್ಮಾಣ ಮಾಡಿರುವ ಕಾರಣಕ್ಕಾಗಿ ಇವರಿಗೆ ಈ ಪ್ರಶಸ್ತಿಯು ಲಭಿಸಿದೆ. ಇವರ ಕಂಬೈನ್ಸ್‌ನಡಿ ನಿರ್ಮಾಣವಾಗಿರುವ ಚಿತ್ರಗಳೆಲ್ಲವೂ ಮೌಲಿಕವಾದ ಮತ್ತು ಗುಣಮಟ್ಟದಲ್ಲಿ ಉತ್ತಮವಾಗಿ ಮೂಡಿಬಂದಿವೆ. ಅವುಗಳಲ್ಲಿ 'ಒಂದಾನೊಂದು ಕಾಲದಲ್ಲಿ', 'ಕಾಡು', ಚಿತ್ರಗಳು ರಾಷ್ಟ್ರೀಯ ಪ್ರಶಸ್ತಿಯನ್ನು 'ಚಿತೆಗೂ ಚಿಂತೆ' ರಾಜ್ಯ ಪ್ರಶಸ್ತಿಯನ್ನು ಪಡೆದಿದೆ. ಪ್ರಶಸ್ತಿ ಘೋಷನೆಯಾದ ಬಳಿಕ ಶ್ರೀಯುತರು ನಿಧನರಾದ ಕಾರಣ ಅವರ ಪುತ್ರ ಪ್ರಶಸ್ತಿಯನ್ನು ಸ್ವೀಕರಿಸಿದರು.

ಈ ಮೂರು ಪ್ರಶಸ್ತಿಗಳು ತಲಾ 5 ಲಕ್ಷರೂ ನಗದು, 50 ಗ್ರಾಂ ಚಿನ್ನದ ಪದಕ ಸೇರಿದಂತೆ ಸ್ಮರಣ ಫಲಕ ಮತ್ತು ಪ್ರಶಸ್ತಿ ಪತ್ರವನ್ನು ಒಳಗೊಂಡಿರುತ್ತದೆ.

## 2017 ರ ರಾಜ್ಯ ಚಲನಚಿತ್ರ ಪ್ರಶಸ್ತಿ ಪುರಸ್ಕೃತರ ವಿವರ:

**ಪ್ರಥಮ ಅತ್ಯುತ್ತಮ ಚಿತ್ರ: "ಶುದ್ಧಿ"**

ಮೆ: ಸಾನ್ವಿ ಪಿಕ್ಚರ್ಸ್ ಅವರ ನಿರ್ಮಾಣದ ಆದರ್ಶ್ ಹೆಚ್. ಈಶ್ವರಪ್ಪ ಅವರ ನಿರ್ದೇಶನದಲ್ಲಿ ಸಮಕಾಲೀನ



Downloaded From:www.kpscvaani.com



ಜ್ವಲಂತ ಸಮಸ್ಯೆಗಳಲ್ಲೊಂದಾದ ಮಹಿಳಾ ಲೈಂಗಿಕ ದೌರ್ಜನ್ಯವನ್ನು ಹಾಗೂ ಅದರ ವಿರುದ್ಧ ಹೋರಾಡುವವರು ಎದುರಿಸಬೇಕಾದ ಸವಾಲುಗಳ ಕುರಿತು ಪರಿಣಾಮಕಾರಿಯಾಗಿ ಮೂಡಿಬಂದಿರುವ 'ಶುದ್ಧಿ' ಚಿತ್ರವು ಮೊದಲನೇ ಅತ್ಯುತ್ತಮ ಚಿತ್ರ ಪ್ರಶಸ್ತಿಯನ್ನು ಪಡೆದುಕೊಂಡಿದೆ. (ಪ್ರಶಸ್ತಿಯು ನಿರ್ಮಾಪಕರು ಮತ್ತು ನಿರ್ದೇಶಕರಿಗೆ ತಲಾ ಒಂದು ಲಕ್ಷ ರೂ ನಗದು ಹಾಗೂ 50 ಚಿನ್ನದ ಪದಕವನ್ನು ಒಳಗೊಂಡಿದೆ).

**ದ್ವಿತೀಯ ಅತ್ಯುತ್ತಮ ಚಿತ್ರ: "ಮಾರ್ಚ್ 22"**

ಮೆ:ಎಸಿಎಂಇ ಮೂವೀಸ್ ಇಂಟರ್‌ನ್ಯಾಷನಲ್ ಅವರ ನಿರ್ಮಾಣ ಮತ್ತು ಕೋಡ್ಲು ರಾಮಕೃಷ್ಣ ಅವರ ನಿರ್ದೇಶನದಲ್ಲಿ ಮೂಡಿಬಂದಿರುವ 'ಮಾರ್ಚ್ 22' ಚಿತ್ರವು ಕೋಮುಸೌಹಾರ್ದತೆಗೆ ಹೆಸರಾಗಿದ್ದ ಹಳ್ಳಿಯೊಂದು ಬಿಕ್ಕಟ್ಟಿನ ಸಮಯದಲ್ಲಿ ಛಿದ್ರಗೊಂಡು ಮತ್ತೆ ಒಂದಾಗುವ ಮಾನವೀಯ ಮೌಲ್ಯಗಳನ್ನು ಬಿತ್ತುವ ಚಿತ್ರವಾಗಿದ್ದು, ದ್ವಿತೀಯ ಅತ್ಯುತ್ತಮ ಚಿತ್ರ ಪ್ರಶಸ್ತಿಯನ್ನು ಪಡೆದುಕೊಂಡಿದೆ. (ಪ್ರಶಸ್ತಿಯು ನಿರ್ಮಾಪಕರು ಮತ್ತು ನಿರ್ದೇಶಕರಿಗೆ ತಲಾ ಎಪ್ಪತ್ತೈದು ಸಾವಿರ ರೂ. ನಗದು ಹಾಗೂ 100 ಗ್ರಾಂ ಬೆಳ್ಳಿ ಪದಕವನ್ನು ಒಳಗೊಂಡಿದೆ).

**ತೃತೀಯ ಅತ್ಯುತ್ತಮ ಚಿತ್ರ: 'ಪಡ್ಡಾಯಿ' (ತುಳು)**

ಮೆ: ಗೋಪಾಲ್ ಪೈ ಪಿಕ್ಚರ್ಸ್ ಅವರ ನಿರ್ಮಾಣದಲ್ಲಿ ಅಭಯ್ ಸಿಂಹ ಅವರು ನಿರ್ದೇಶಿಸಿರುವ ತುಳು ಭಾಷೆಯ ಪಡ್ಡಾಯಿ ಚಿತ್ರವು ಷೇಕ್ಸ್ಪಿಯರ್‌ನ 'ಮ್ಯಾಕ್‌ಬೆತ್' ನಾಟಕವನ್ನು ಆಧರಿಸಿದೆ. ಮನುಷ್ಯರ ಮಾನಸಿಕ ಪಾಟಲಿಗಳಲ್ಲಿ ಸಂಭವಿಸುವ ಮಾನಸಿಕ ಪಲ್ಲಟಗಳು, ಭಾವಾವೇಷಗಳು ಜಗತ್ತಿನ ಎಲ್ಲೆಡೆ ಏಕರೂಪವೇ ಆದ ಕಾರಣ ಕರಾವಳಿಯ ಮೀನುಗಾರ ಕುಟುಂಬದ ದಂಪತಿಗಳ ಬದುಕಿನಲ್ಲಿ ಸಂಭವಿಸುವ ದುರಂತಗಳಿಗೆ ಅನ್ವಯಿಸುವಂತೆ ಈ ಚಿತ್ರವನ್ನು ನಿರ್ದೇಶಕರು ಒಗ್ಗಿಸಿದ್ದಾರೆ. ಮನುಷ್ಯನ ರಾಗ–ದ್ವೇಷ, ಅಸೂಯೆ, ವಿಷಾದ ಮತ್ತು ಮಹತ್ವಾಕಾಂಕ್ಷೆ ತರುವ ದುಃಖ ಸರಣಿಯನ್ನು ಸಮರ್ಥವಾಗಿ ನಿರೂಪಿಸಿರುವ 'ಪಡ್ಡಾಯಿ' 2017 ನೇ ಸಾಲಿನ ತೃತೀಯ ಅತ್ಯುತ್ತಮ ಚಲನಚಿತ್ರ ಪ್ರಶಸ್ತಿಯನ್ನು ಪಡೆದಿದೆ. (ಪ್ರಶಸ್ತಿಯು ನಿರ್ಮಾಪಕರು ಮತ್ತು ನಿರ್ದೇಶಕರಿಗೆ ತಲಾ ಐವತ್ತು ಸಾವಿರ ರೂ. ನಗದು ಹಾಗೂ 100 ಗ್ರಾಂ ಬೆಳ್ಳಿ ಪದಕವನ್ನು ಒಳಗೊಂಡಿದೆ).

**ವಿಶೇಷ ಸಾಮಾಜಿಕ ಕಾಳಜಿಯ ಚಿತ್ರ: 'ಹೆಬ್ಬೆಟ್ ರಾಮಕ್ಕ'**

ಪುರುಷ ಪ್ರಧಾನ ರಾಜಕೀಯ ಕ್ಷೇತ್ರದಲ್ಲಿ, ಮಹಿಳೆಯರ ಪರಾಧೀನತೆ ಮತ್ತು ತನ್ನ ವಿಮೋಚನೆಗಾಗಿ ಮಹಿಳೆಯು ಪುರುಷ ಸಮಾಜವನ್ನು ಎದುರಿಸಿ ಗೆಲ್ಲುವ ವಸ್ತುವಿನ ಕಥಾಹಂದರ ಹೊಂದಿರುವ 'ಹೆಬ್ಬೆಟ್ ರಾಮಕ್ಕ' ಚಿತ್ರವನ್ನು ಮೆ: ಸವಿರಾಜ್ ಸಿನಿಮಾಸ್ ನಿರ್ಮಾಣದಲ್ಲಿ ಎನ್. ಆರ್. ನಂಜುಂಡೇಗೌಡ ಅವರು ನಿರ್ದೇಶಿಸಿದ್ದಾರೆ. ಸಮಕಾಲೀನ ಸಂದರ್ಭದಲ್ಲಿ ಮಹಿಳೆಯರು ರಾಜಕೀಯ ಕ್ಷೇತ್ರದಲ್ಲಿ ಎದುರಿಸಬೇಕಾದ ಸಮಸ್ಯೆಗಳು ಮತ್ತು ಸವಾಲುಗಳು ಅನೇಕ. ತನ್ನ ಅಸ್ತಿತ್ವವನ್ನು ರಾಜಕೀಯ ರಂಗದಲ್ಲಿ ಉಳಿಸಿಕೊಳ್ಳಲು ದೊಡ್ಡ ಸಾಹಸವನ್ನು ಮಾಡಬೇಕಾಗುತ್ತದೆ. ಮಹಿಳಾಪರ ಧ್ವನಿಯ ಈ 'ಹೆಬ್ಬೆಟ್ ರಾಮಕ್ಕ' ಚಿತ್ರವು ವಿಶೇಷ ಸಾಮಾಜಿಕ ಕಾಳಜಿಯ ಚಿತ್ರ ಪ್ರಶಸ್ತಿಯನ್ನು ಪಡೆದುಕೊಂಡಿದೆ. (ಪ್ರಶಸ್ತಿಯು ನಿರ್ಮಾಪಕರು ಮತ್ತು ನಿರ್ದೇಶಕರಿಗೆ ತಲಾ ಎಪ್ಪತ್ತೈದು ಸಾವಿರ ರೂ. ನಗದು ಹಾಗೂ 100 ಗ್ರಾಂ ಬೆಳ್ಳಿ ಪದಕವನ್ನು ಒಳಗೊಂಡಿದೆ).

**ಅತ್ಯುತ್ತಮ ಜನಪ್ರಿಯ ಮನರಂಜನಾ ಚಿತ್ರ: 'ರಾಜಕುಮಾರ'**

ಮೆ:ಹೊಂಬಾಳೆ ಫಿಲಂಸ್ ಅವರ ನಿರ್ಮಾಣ ಮತ್ತು ಸಂತೋಷ್ ಆನಂದ್ ರಾಮ್ ಅವರ ನಿರ್ದೇಶನದಲ್ಲಿ

> **“**
>
> **ಇದೇ ವರ್ಷ ಮೈಸೂರಿನಲ್ಲಿ ಚಿತ್ರ ನಗರಿ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು. ಯಾರೂ ಮನವಿ ಅಥವಾ ಬೇಡಿಕೆ ಸಲ್ಲಿಸದಿದ್ದರೂ ಪ್ರಸಕ್ತ 2022–23 ನೇ ಸಾಲಿನ ರಾಜ್ಯ ಆಯವ್ಯಯದಲ್ಲಿ 125 ಕನ್ನಡ ಮತ್ತು ಕರ್ನಾಟಕದ ಪ್ರಾದೇಶಿಕ ಭಾಷಾ ಚಲನಚಿತ್ರಗಳಿಗೆ ಬದಲಾಗಿ 200 ಚಿತ್ರಗಳಿಗೆ ಸಹಾಯಧನ ನೀಡಲು ಅವಕಾಶ ಕಲ್ಪಿಸಲಾಗಿದೆ. ಸದ್ಯದಲ್ಲಿಯೇ ಡಾ: ಪುನೀತ್ ರಾಜ್‌ಕುಮಾರ್ ಅವರಿಗೆ ಮರಣೋತ್ತರ ಕರ್ನಾಟಕ ರತ್ನ ಪ್ರಶಸ್ತಿಯನ್ನು ನೀಡುವ ಸಮಾರಂಭವನ್ನು ಆಯೋಜಿಸಲಾಗುವುದು. ಕನ್ನಡ ಚಿತ್ರರಂಗದ ಶ್ರೇಯೋಭಿವೃದ್ಧಿಗೆ ಸರ್ಕಾರದ ಬೆಂಬಲ ಹೀಗೆ ಮುಂದುವರಿಯಲಿದೆ.**
>
> ಬಸವರಾಜ ಎಸ್ ಬೊಮ್ಮಾಯಿ
> ಮುಖ್ಯಮಂತ್ರಿಗಳು
>
> **”**



Downloaded From:www.kpscvaani.com

ತಯಾರಾಗಿರುವ 'ರಾಜಕುಮಾರ' ಚಿತ್ರವು ಅತ್ಯುತ್ತಮ ಜನಪ್ರಿಯ ಮನರಂಜನಾ ಚಿತ್ರ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿದೆ. ಕೌಟುಂಬಿಕ ಮೌಲ್ಯಗಳು, ದೂರೀಕರಿಸಿದ ಹಿರಿಯ ನಾಗರಿಕರನ್ನು ಅನಾಥ ಪ್ರಜ್ಞೆಯಿಂದ ವಿಮೋಚನೆಗೊಳಿಸಬೇಕಾದ ಮಾನವೀಯ ಕಾಳಜಿ ಮತ್ತು ನಿಸ್ವಾರ್ಥ ವ್ಯಕ್ತಿತ್ವವು ಸೃಷ್ಟಿಸುವ ಸುಂದರ ಅನುಭವವನ್ನು ನೀಡುವ ಚಿತ್ರವಾಗಿದೆ. ಒಂದು ಹಂತದಲ್ಲಿ ಪ್ರೀತಿ ಪ್ರಣಯಗಳಿಗಿಂತ ಕೌಟುಂಬಿಕ ಮೌಲ್ಯಗಳ ನಿಷ್ಠೆಯೇ ಮಹತ್ವದ್ದೆಂದು ಸಾರುತ್ತಾ, ತನ್ನ ಮಾನವೀಯ ತುಡಿತಗಳಿಂದ ಪ್ರೇಕ್ಷಕರನ್ನು ಮುದಗೊಳಿಸಿತ್ತು. (ಪ್ರಶಸ್ತಿಯು ನಿರ್ಮಾಪಕರು ಮತ್ತು ನಿರ್ದೇಶಕರಿಗೆ ತಲಾ ಐವತ್ತು ಸಾವಿರ ರೂ. ನಗದು ಹಾಗೂ 100 ಗ್ರಾಂ ಬೆಳ್ಳಿ ಪದಕವನ್ನು ಒಳಗೊಂಡಿದೆ).

**ಅತ್ಯುತ್ತಮ ಮಕ್ಕಳ ಚಿತ್ರ: 'ಎಳೆಯರು ನಾವು ಗೆಳೆಯರು'**

ಮೆ:ಆಕಾಶ್ ಪ್ರೊಡಕ್ಷನ್ಸ್ ಅವರ ನಿರ್ಮಾಣದ ವಿಕ್ರಂ ಸೂರಿ ಅವರ ನಿರ್ದೇಶನದಲ್ಲಿ ತಯಾರಾಗಿರುವ 'ಎಳೆಯರು ನಾವು ಗೆಳೆಯರು' ಚಿತ್ರವು ಮಕ್ಕಳ ನಡುವಿನ ನಿರ್ಮಲ ಸಂಬಂಧಗಳು ಮತ್ತು ಅವರ ನಿಷ್ಕಾಮ ಒಡನಾಟಗಳನ್ನು, ಅವರಲ್ಲಿ ಚಿಗುರುವ ಮಾನವೀಯ ಸೆಲೆಗಳನ್ನು ಹಿಡಿದಿಟ್ಟಿವೆ. ಹಳ್ಳಿಯಲ್ಲಿ ಯಾವುದಾದರೊಂದು ರೀತಿಯ ಸಮಾಜ ಸೇವೆ ಮಾಡಬೇಕೆಂಬ ಹಂಬಲದಲ್ಲಿ ಮಕ್ಕಳು ತಮ್ಮ ಬದುಕನ್ನೇ ಅಪಾಯಕ್ಕೊಡ್ಡಿಕೊಳ್ಳಬೇಕಾದಂತಹ ಪರಿಸ್ಥಿತಿಗೆ ಸಿಲುಕಿದರೂ ಮಕ್ಕಳು ಬಿಕ್ಕಟ್ಟುಗಳನ್ನು ಸಹಕಾರ, ಸಾಹಸಗಳಿಂದ ಎದುರಿಸಿ ಜಯಶಾಲಿಯಾಗುವ ಕಥಾಹಂದರನ್ನು ಚಿತ್ರವು ಹೊಂದಿದೆ. (ಪ್ರಶಸ್ತಿಯು ನಿರ್ಮಾಪಕರು ಮತ್ತು ನಿರ್ದೇಶಕರಿಗೆ ತಲಾ ಐವತ್ತು ಸಾವಿರ ರೂ. ನಗದು ಹಾಗೂ 100 ಗ್ರಾಂ ಬೆಳ್ಳಿ ಪದಕವನ್ನು ಒಳಗೊಂಡಿದೆ).

**ನಿರ್ದೇಶಕರ ಪ್ರಥಮ ನಿರ್ದೇಶನದ ಅತ್ಯುತ್ತಮ ಚಿತ್ರ: 'ಅಯನ'**

ಮೆ:ಡೀಸ್ ಫಿಲಂಸ್ ನಿರ್ಮಾಣದಲ್ಲಿ ಸಮಕಾಲೀನ ಸಮಾಜದಲ್ಲಿ ಧಾವಂತ ಬದುಕನ್ನು ಎದುರಿಸುತ್ತಿರುವ ವೃತ್ತಿ ಪರರ ಜೀವನ, ಬೆಂಗಳೂರು ನಗರದಲ್ಲಿ ತಲೆಯೆತ್ತಿರುವ 'ಸ್ಟಾರ್ಟ್‌ಅಪ್' ಸಂಸ್ಕೃತಿಯ ಮೇಲೆ ಕ್ಷ-ಕಿರಣ ಬೀರುವ 'ಅಯನ' ಚಿತ್ರವನ್ನು ಗಂಗಾಧರ ಸಾಲೀಮಠ ಅವರು ನಿರ್ದೇಶಿಸಿದ್ದಾರೆ. ನಾಲ್ವರು ಸ್ನೇಹಿತರಲ್ಲಿ ಮೂವರು ವಿವಾಹ ಮತ್ತು ತಮ್ಮ ವೃತ್ತಿಯ ಬೇರೆ ಬೇರೆ ಕೆಲಸಗಳಲ್ಲಿ ನಿರತರಾಗಿ ಬದುಕಿಗೆ ಅಂಟಿ ಕೂರುತ್ತಾರೆ. ಆದರೆ ನಾಲ್ಕನೆಯವನು ಸ್ಟಾರ್ಟ್‌ಅಪ್ ಒಂದರ ಮುಖ್ಯಸ್ಥನಾಗುವ ಆಕಾಂಕ್ಷೆಯಿಂದ ಕನಸನ್ನು ಬೆನ್ನು ಹತ್ತಿದಾಗ ಆಗುವ ಕಟು ವಾಸ್ತವದ ಕುರಿತು ಚಿತ್ರವು ಬೆಳಕು ಚೆಲ್ಲಿದೆ. (ಪ್ರಶಸ್ತಿಯು ನಿರ್ಮಾಪಕರು ಮತ್ತು ನಿರ್ದೇಶಕರಿಗೆ ತಲಾ ಐವತ್ತು ಸಾವಿರ ರೂ ನಗದು, ಹಾಗೂ 100 ಗ್ರಾಂ ಬೆಳ್ಳಿ ಪದಕವನ್ನು ಒಳಗೊಂಡಿದೆ).

**ಅತ್ಯುತ್ತಮ ಪ್ರಾದೇಶಿಕ ಭಾಷಾ ಚಿತ್ರ: 'ಸೋಫಿಯಾ' (ಕೊಂಕಣಿ)**

'ಸೋಫಿಯಾ' ಮೆ: ಜಾನೆಟ್ ನರೋನ್ಹಾ ಪ್ರೊಡಕ್ಷನ್ಸ್‌ನ ನಿರ್ಮಾಣ ಮತ್ತು ಹ್ಯಾರಿ ಫರ್ನಾಂಡಿಸ್ ಅವರ ನಿರ್ದೇಶನದಲ್ಲಿ ತಯಾರಾದ ಕೊಂಕಣಿ ಭಾಷೆಯ ಚಿತ್ರ. ಜಾನೆಟ್ ನರೋನ್ಹಾ ಅವರು ನೃತ್ಯಪಟು ಮತ್ತು ಸಂಗೀತಗಾರ್ತಿ ಹಾಗೂ ಬಹುಭಾಷಾ ನಟಿ ಕುಮಾರಿ ಎಸ್ತರ್ ನರೋನ್ಹಾ ಅವರ ತಾಯಿ. ಮಗಳ ಕಲಾಶಕ್ತಿಯನ್ನು ಪೋಷಿಸಲು ಬಹರೈನ್‌ನಲ್ಲಿದ್ದ ಉನ್ನತ ಹುದ್ದೆಯ ಉದ್ಯೋಗವನ್ನು ತೊರೆದು ಮಂಗಳೂರಿನಲ್ಲಿ ನೆಲೆಸಿದ್ದು, ಮೆ: ಜಾನೆಟ್ ನರೋನ್ಹಾ ಪ್ರೊಡಕ್ಷನ್ಸ್ ಸಂಸ್ಥೆಯ ಸಂಸ್ಥಾಪಕರಾಗಿದ್ದಾರೆ. (ಪ್ರಶಸ್ತಿಯು ನಿರ್ಮಾಪಕರು ಮತ್ತು ನಿರ್ದೇಶಕರಿಗೆ ತಲಾ ಐವತ್ತು ಸಾವಿರ ರೂ ನಗದು, ಹಾಗೂ 100 ಗ್ರಾಂ ಬೆಳ್ಳಿ ಪದಕವನ್ನು ಒಳಗೊಂಡಿದೆ).

**ಅತ್ಯುತ್ತಮ ನಟ/ನಟಿ ಪ್ರಶಸ್ತಿ:**

ಅತ್ಯುತ್ತಮ ನಟ ಪ್ರಶಸ್ತಿಯನ್ನು 'ಮಂಜರಿ' ಚಿತ್ರದ ನಟನೆಗಾಗಿ ವಿಶೃತ್ ನಾಯಕ್, ಅತ್ಯುತ್ತಮ ನಟಿ ಪ್ರಶಸ್ತಿಯನ್ನು 'ಹೆಬ್ಬೆಟ್ ರಾಮಕ್ಕ' ಚಿತ್ರದ ನಟನೆಗಾಗಿ ತಾರಾ ಅನುರಾಧಾ, ಅತ್ಯುತ್ತಮ ಪೋಷಕ ನಟ ಪ್ರಶಸ್ತಿಯನ್ನು 'ಲಕ್ಷ್ಮೀನಾರಾಯಣರ ಪ್ರಪಂಚಾನೇ ಬೇರೆ' ಚಿತ್ರದ ನಟನೆಗಾಗಿ ಮಂಜುನಾಥ ಹೆಗಡೆಯವರು, ಅತ್ಯುತ್ತಮ ಪೋಷಕ ನಟಿ ಪ್ರಶಸ್ತಿಗೆ 'ಮೂಕ ನಾಯಕ' ಚಿತ್ರದ ನಟನೆಗಾಗಿ ರೇಖಾ ಶಂಕರ್‌ಪ್ರಸಾದ್ ಅವರು ಮತ್ತು ಅತ್ಯುತ್ತಮ ಬಾಲ ನಟ ಪ್ರಶಸ್ತಿಗೆ 'ರಾಮರಾಜ್ಯ' ಚಿತ್ರದ ನಟನೆಗಾಗಿ ಮಾಸ್ಟರ್ ಕಾರ್ತಿಕ್, 'ಕಟಕ' ಚಿತ್ರದ ನಟನೆಗಾಗಿ ಕುಮಾರಿ ಶ್ಲಾಘ ಸಾಲಿಗ್ರಾಮ ಅತ್ಯುತ್ತಮ ಬಾಲ ನಟಿ ಪ್ರಶಸ್ತಿಗೆ ಭಾಜನರಾಗಿದ್ದಾರೆ. (ಈ ಪ್ರಶಸ್ತಿಗಳು ತಲಾ ಇಪ್ಪತ್ತು ಸಾವಿರ ರೂ. ನಗದು ಹಾಗೂ 100 ಗ್ರಾಂ ಬೆಳ್ಳಿ ಪದಕವನ್ನು ಒಳಗೊಂಡಿದೆ).

'ಕೆಂಗುಲಾಬಿ' ಚಿತ್ರದ ಕಥೆಗಾಗಿ ಹನುಮಂತ ಬಿ. ಲಾಲಿಗೇರಿ, 'ನೀರು ತಂದವರು' ಚಿತ್ರದ ಕತೆಗಾಗಿ ಡಾ: ಅಮರೇಶ ನುಗಡೋಣಿ ಅವರಿಗೆ ಅತ್ಯುತ್ತಮ ಕಥೆ ಪ್ರಶಸ್ತಿಯು, 'ಕಿಂಪಿರ್ವೆ' ಚಿತ್ರದ ಚಿತ್ರಕಥೆ ರಚನೆಗಾಗಿ ವೆಂಕಟ್ ಭಾರಧ್ವಾಜ್ ಅವರಿಗೆ ಅತ್ಯುತ್ತಮ ಚಿತ್ರಕತೆ ಪ್ರಶಸ್ತಿಯು, ಹೆಬ್ಬೆಟ್ ರಾಮಕ್ಕ ಚಿತ್ರದ ಸಂಭಾಷಣೆಗಾಗಿ ಪ್ರೊ. ಎಸ್. ಜಿ. ಸಿದ್ಧರಾಮಯ್ಯ ಅವರಿಗೆ ಅತ್ಯುತ್ತಮ ಸಂಭಾಷಣೆ ಪ್ರಶಸ್ತಿ, ಅತ್ಯುತ್ತಮ ಛಾಯಾಗ್ರಹಣ ಪ್ರಶಸ್ತಿಯನ್ನು 'ಚಮಕ್' ಚಿತ್ರಕ್ಕಾಗಿ ಸಂತೋಷ್ ರೈ ಪಾತಾಜೆ, 'ರಾಜಕುಮಾರ' ಚಿತ್ರದ ಸಂಗೀತ ನಿರ್ದೇಶನಕ್ಕಾಗಿ ವಿ.ಹರಿಕೃಷ್ಣ ಅವರು ಅತ್ಯುತ್ತಮ ಸಂಗೀತ ನಿರ್ದೇಶನ ಪ್ರಶಸ್ತಿ, 'ಮಫ್ತಿ' ಚಿತ್ರದ ಸಂಕಲನಕ್ಕಾಗಿ ಹರೀಶ್ ಕೊಮ್ಮೆ ಅವರು ಅತ್ಯುತ್ತಮ ಸಂಕಲನ, 'ಹೆಬುಲಿ' ಚಿತ್ರದ ಕಲಾ ನಿರ್ದೇಶನಕ್ಕೆ ರವಿ ಎ.ಎಸ್ ಅವರು ಅತ್ಯುತ್ತಮ ಕಲಾ ನಿರ್ದೇಶಕ, 'ಮಾರ್ಚ್ 22' ಚಿತ್ರದ 'ಮುತ್ತು ರತ್ನದ ಪ್ಯಾಟೆ..' ಗೀತೆ ರಚನೆಗಾಗಿ ಜೆ.ಎಂ. ಪ್ರಹ್ಲಾದ್ ಅವರು ಅತ್ಯುತ್ತಮ ಗೀತ ರಚನೆ, 'ಹುಲಿರಾಯ' ಚಿತ್ರದ ಗೀತೆ 'ವಲಸೇ ಬಂದವರೇ..' ಗಾಯನಕ್ಕೆ ತೇಜಸ್ವಿ ಹರಿದಾಸ್ ಅವರಿಗೆ ಅತ್ಯುತ್ತಮ ಹಿನ್ನೆಲೆ ಗಾಯಕ, 'ದಯವಿಟ್ಟು ಗಮನಿಸಿ' ಚಿತ್ರದ ಗೀತೆ 'ಅಸಾದುಲ್ಲಾ ದಾಡಿ ಬಿಟ್ಟ..' ಗಾಯನಕ್ಕೆ ಅಪೂರ್ವ ಶ್ರೀಧರ್ ಅವರು ಅತ್ಯುತ್ತಮ ಹಿನ್ನೆಲೆ ಗಾಯಕಿ ಪ್ರಶಸ್ತಿಯನ್ನು ಹಾಗೂ 'ರಾಗ' ಚಿತ್ರದ ನಿರ್ಮಾಣಕ್ಕಾಗಿ ಮಿತ್ರ ಅವರಿಗೆ, ಮಹಾಕಾವ್ಯ' ಚಿತ್ರದ ನಿರ್ಮಾಣಕ್ಕಾಗಿ ದರ್ಶನ್ ಅವರಿಗೆ ಮತ್ತು 'ಹೆಬ್ಬುಲಿ' ಚಿತ್ರದ ನಿರ್ಮಾಣಕ್ಕಾಗಿ ಸುರೇಶ್.ಕೆ ಅವರಿಗೆ ತೀರ್ಪುಗಾರರ ವಿಶೇಷ ಪ್ರಶಸ್ತಿ ಲಭಿಸಿದ್ದು, ಕನ್ನಡ ಸಿನಿಮಾ ಇತಿಹಾಸ ಕುರಿತು ಬರೆದಿರುವ ಗಂಗಾಧರ ಮೊದಲಿಯಾರ್ ಅವರ 'ಸಿನಿಮಾ ಸಮಯ' ಪುಸ್ತಕಕ್ಕೆ ಮತ್ತು ಪುಸ್ತಕ ಪ್ರಕಟಿಸಿರುವ ಪ್ರಕಾಶನ ಸಂಸ್ಥೆಗೆ ರಾಜ್ಯ ಪ್ರಶಸ್ತಿ ಸಂದಿದೆ. ■



Downloaded From:www.kpscvaani.com



# ಬರದ ನಾಡು ವಿಜಯಪುರ ಜಿಲ್ಲೆಯಲ್ಲಿ ಹರಿಯಲಿದೆ ನೀರು

**ಚಾರಿತ್ರ್ಯಿಕ ಬೂದಿಹಾಳ-ಪೀರಾಪುರ ಏತ ನೀರಾವರಿ ಯೋಜನೆಯಿಂದಾಗಿ ಇನ್ನು ಕೆಲವೇ ತಿಂಗಳುಗಳಲ್ಲಿ ವಿಜಯಪುರ ಜಿಲ್ಲೆಯಲ್ಲಿ ನೀರು ಹರಿಯಲಿದೆ.**

ಗವಿಸಿದ್ದಪ್ಪ ಹೊಸಮನಿ

ಉತ್ತರ ಕರ್ನಾಟಕದ ಪ್ರಸಿದ್ಧ ಜೋಳದ ರೊಟ್ಟಿಯ ಊಟಕ್ಕೆ ವಿಜಯಪುರ ಪ್ರಸಿದ್ಧ. ಇದಕ್ಕೆ ಕಾರಣವೇನೆಂದರೆ 'ಜೋಳ'ವೇ ಈ ಭಾಗದ ಪ್ರಮುಖ ಬೆಳೆಯಾಗಿರುವುದು. ವಿಶಿಷ್ಟ ಮಣ್ಣಿನ ಗುಣದ ಬೆಳೆಗಳಿಗೆ ಮೂಲಾಧಾರವಾದ ಐತಿಹಾಸಿಕ ನೀರಾವರಿ ಯೋಜನೆಯೊಂದಕ್ಕೆ ಮುಖ್ಯಮಂತ್ರಿಗಳಾದ ಬಸವರಾಜ ಎಸ್ ಬೊಮ್ಮಾಯಿ ಅವರು ಇತ್ತೀಚಿಗೆ ವಿಜಯಪುರ ಜಿಲ್ಲೆಯಲ್ಲಿ ಚಾಲನೆ ನೀಡಿದರು.

ರೈತ ಸಂಜೀವಿನಿಯಂತಹ ಯೋಜನೆಯೊಂದು ಸಾಕಾರಗೊಂಡಿದ್ದಕ್ಕೆ ಮುತ್ತಿನ ತೆನೆ ಬೆಳೆಯ ವಿಜಯಪುರ ಜಿಲ್ಲೆಯ ಉಳುವ ಯೋಗಿಯ ಮೊಗದಲ್ಲಿ ಸಂತಸ ಮೂಡಿಸಿದೆ.

**ಎರಡು ದಶಕಗಳ ಕನಸು:**

ಏಪ್ರಿಲ್ 26 ವಿಜಯಪುರ ಇತಿಹಾಸದ ಪುಟಗಳಲ್ಲಿ ಐತಿಹಾಸಿಕ ದಿನವಾಗಿ ದಾಖಲಾಯಿತು. ಜಗಜ್ಯೋತಿ ಶ್ರೀ ಬಸವೇಶ್ವರ ಜನ್ಮಭೂಮಿಯಲ್ಲಿ, ರೈತರ ಬದುಕು ಹಸನಗೊಳಿಸುವ ಮಹತ್ವದ ಬೂದಿಹಾಳ–ಪೀರಾಪುರ ಏತ ನೀರಾವರಿ ಯೋಜನೆಯ ಹಂತ ಫೈಪ್ ವಿತರಣಾ ಜಾಲದ ಕಾಮಗಾರಿ ಶಂಕುಸ್ಥಾಪನೆ ಕಾರ್ಯಕ್ರಮಕ್ಕೆ ಈ ಭಾಗದ ಸುಮಾರು 25,000 ರೈತರು ಸಾಕ್ಷಿಯಾದರು. ಜಲ ಸಂಪನ್ಮೂಲ ಇಲಾಖೆ, ಭಾಗ್ಯ ಜಲ ನಿಗಮ ನಿಯಮಿತದಿಂದ ಆಯೋಜನೆಗೊಂಡಿದ್ದ ಐತಿಹಾಸಿಕ ಯೋಜನೆಯೊಂದರ ಚಾಲನೆಗಾಗಿ ತಾಳಿಕೋಟಿ ತಾಲೂಕಿನ ಕೊಡಗಾನೂರ ಗ್ರಾಮಕ್ಕೆ ಆಗಮಿಸುತ್ತಿದ್ದಂತೆ ಬಂಟನೂರ ಗ್ರಾಮಸ್ಥರು ಮುಖ್ಯಮಂತ್ರಿಗಳಿಗೆ ರೈತರು ಗೋಮಾತೆಯನ್ನು ಕಾಣಿಕೆಯಾಗಿ ನೀಡಿದ್ದು ವಿಶೇಷವಾಗಿತ್ತು.

**ಏನಿದು ಯೋಜನೆ:**

ನಾರಾಯಣ ಜಲಾಶಯದ ಎಡಭಾಗದಲ್ಲಿನ ಹಿನ್ನಿರನ್ನು ಮುದ್ದೇಬಿಹಾಳ ತಾಲೂಕಿನ ನಾಗಬೇನಾಳ ಗ್ರಾಮದ ಹತ್ತಿರ ಎತ್ತಿ ಸಿಂಧಗಿ ಹಾಗೂ ಮುದ್ದೇಬಿಹಾಳ ತಾಲೂಕಿನ ಅಂದರೆ ಈಗಿನ ದೇವರ ಹಿಪ್ಪರಗಿ ಮತ್ತು ತಾಳಿಕೋಟಿ ತಾಲೂಕಿನ ದೇವರ ಹಿಪ್ಪರಗಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ 46 ಗ್ರಾಮಗಳ ನೀರಾವರಿ ವಂಚಿತ 55 ಸಾವಿರ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವ ಯೋಜನೆ ಇದಾಗಿದೆ. ಸ್ವಯಂಚಾಲಿತ ತಂತ್ರಜ್ಞಾನ ಅಳವಡಿಕೆಯಿಂದಾಗಿ ಕೊನೆಯ ಭಾಗದ ರೈತರಿಗೂ ಸಮ ಪ್ರಮಾಣದಲ್ಲಿ ನೀರು ಹರಿಯುವಂತಹ ವಿಶೇಷತೆ ಇದ್ದು, ಈ ಆಧುನಿಕ ತಂತ್ರಜ್ಞಾನ ಬಳಕೆಯಿಂದಾಗಿ ಸುಮಾರು 5 ಟಿಎಂಸಿ ನೀರಿಗೆ ಅನುಕೂಲವಾಗಲಿದೆ.

**16,476,86 ಹೇಕ್ಟೇರ್ ಕ್ಷೇತ್ರಕ್ಕೆ ನೀರು:**

ಈ ಯೋಜನೆ ಕಾರ್ಯಾನುಷ್ಠಾನಗೊಂಡಲ್ಲಿ ತಾಳಿಕೋಟಿ ತಾಲೂಕು ವ್ಯಾಪ್ತಿಯ ಮಸಕನಾಳ, ಭೀಳೆಬಾವಿ, ಮೈಲೇಶ್ವರ, ಬಿ.ಸಾಲವಾಡಗಿ, ಮಟಕದನಹಳ್ಳಿ, ನವದಗಿ, ಬೇಲೂರ,



Downloaded From:www.kpscvaani.com

ಗುಂಡಕನಾಳ, ಕೊಡಗಾನೂರ, ಲಕ್ಕುಂಡಿ, ಶೆಳ್ಳಗಿ, ಕಾರಗನೂರ, ಗೊಟಕಂಡಕಿ, ಗಡಿ ಸೋಮನಾಳ, ಬಂಟನೂರ, ಹೀರಾಪುರ, ಹೂವಿನಹಳ್ಳಿ, ಅಸ್ಕಿ, ನೀರಲಗಿ, ಬೇಕಿನಾಳ, ಬನಹಟ್ಟಿ, ಜಲಪುರ, ಬೀಂಜಲಬಾವಿ, ಕಲಕೇರಿ, ಬೂದಿಹಾಳ, ಹಾಳಗುಂಡಕನಾಳ, ರಾಂಪುರ, ತುರುಕನಗೇರಿ, ವನಕ್ಯಾಳ ಮತ್ತು ದೇವರ ಹಿಪ್ಪರಗಿ ತಾಲೂಕಿನ ಅಸ್ತನಾಪುರ, ಅಲಗೂರ, ಹುಣಶಿಹಾಳ, ಯದ್ಯಾಪುರ, ಕುದರಗೊಂಡ, ಕೆರುಟಗಿ, ತಿಳಗುಳ, ಬಿಬಿ ಇಂಗಳಗಿ ಮತ್ತು ಹಂಚಿ ಗ್ರಾಮಗಳು ಸೇರಿದಂತೆ ಒಟ್ಟು 16,476.86 ಹೇಕ್ಟೇರ್ ಕ್ಷೇತ್ರವು ನೀರಾವರಿಗೊಳಪಡಲಿದೆ.

**ಭಾರತ ಸರ್ಕಾರದಿಂದ ಅನುಮೋದನೆ:**

ಈ ಯೋಜನೆಯಲ್ಲಿ ನೀರಾವರಿಗೆ ಒಳಪಡುವ ಸಂಪೂರ್ಣ 20,043 ಹೇಕ್ಟೇರ್ ಕ್ಷೇತ್ರವನ್ನು 5 ರಿಂದ 30 ಹೆಕ್ಟೇರ್ ಬ್ಲಾಕ್‌ಗಳಾಗಿ ವಿಂಗಡಿಸಲಾಗಿದ್ದು, ನೀರನ್ನು ವಿತರಣಾ ಜಾಲದ ಪೈಪಲೈನ್ ಮೂಲಕ ಸ್ಕಾಡಾ ನಿಯಂತ್ರಣದೊಂದಿಗೆ ಪ್ರತಿ ಬ್ಲಾಕಿಗೆ ಒದಗಿಸಲು ವಿನ್ಯಾಶಿಸಲಾಗಿದೆ. ಈ ಯೋಜನೆಗೆ ಭಾರತ ಸರ್ಕಾರದ ಅರಣ್ಯ ಮತ್ತು ಪರಿಸರ ಸಚಿವಾಲಯದಿಂದ ಅವಶ್ಯಕ ಪರಿಸರ ತಿರುವಳಿಗೆ ಅನುಮೋದನೆಯನ್ನು ಪಡೆಯಲಾಗಿದೆ. ಗುತ್ತಿಗೆದಾರರು ಯೋಜನೆಯ ಸರ್ವೆ ಕಾರ್ಯವನ್ನು ಮುಕ್ತಾಯಗೊಳಿಸಿದ್ದು, ಸಂಪೂರ್ಣ ಯೋಜನೆಯ ವಿನ್ಯಾಸ ಮತ್ತು ನಕ್ಷೆಗಳನ್ನು ತಯಾರಿಸುವ ಕಾರ್ಯ ಪೂರ್ಣಗೊಂಡು ಈ ನಕ್ಷೆ ಮತ್ತು ವಿನ್ಯಾಸಗಳಿಗೆ ಕೂಡ ಅನುಮೋದನೆ ಪಡೆಯಲಾಗಿದೆ. ಅದರಂತೆ ಸದರಿ ಕಾಮಗಾರಿಯನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಿ ಉದ್ದೇಶಿತ ನೀರಾವರಿ ಕ್ಷೇತ್ರಕ್ಕೆ ನೀರು ಹರಿಸಲು ಯೋಜಿಸಲಾಗಿದೆ.

**ಕಾಮಗಾರಿ ಬಹುತೇಕ ಪೂರ್ಣ:**

ಸದರಿ ಯೋಜನೆಯ ಮೊದಲ ಭಾಗದಲ್ಲಿ 523.03 ಕೋಟಿಗಳಿಗೆ ಜಾಕವೆಲ್, ಪಂಪಹೌಸ್, ರೈಸಿಂಗ್ ಮೇನ್ ಹಾಗೂ ಎರಡು ಸ್ಥಳಗಳಲ್ಲಿ ಡೆಲಿವರಿ ಚೆಂಬರ್ ನಿರ್ಮಾಣದ ಕಾಮಗಾರಿ ಬಹುತೇಕ ಪೂರ್ಣಗೊಂಡು ಚಾಲನೆಗೊಳಿಸಲು ಸಿದ್ಧಗೊಂಡಿದೆ. ಸದರಿ ಯೋಜನೆಯ ಎರಡನೇ ಕಾಮಗಾರಿಗೆ ಸಂಬಂಧಿಸಿದಂತೆ ಸ್ವಯಂಚಾಲಿತ ವಾಲ್ವ್, ಪೈಪಲೈನ್, ಎಲೆಕ್ಟ್ರೋ ಮೆಕ್ಯಾನಿಕಲ್ ಕಾಮಗಾರಿ, ಸ್ಕಾಡಾ ಅಟೋಮೇಶನ್ ಇತ್ಯಾದಿ ಕಾಮಗಾರಿಗೆ 796.11 ಕೋಟಿಗಳಿಗೆ ಗುತ್ತಿಗೆಯನ್ನು ವಹಿಸಿಕೊಡಲಾಗಿದೆ. ಕಾಮಗಾರಿಯನ್ನು ಪೂರ್ಣಗೊಳಿಸಲು 18 ತಿಂಗಳು ಅಂದರೆ 2023ರ ಜನವರಿ ಅಂತ್ಯದವರೆಗೆ ಕಾಲವಕಾಶ ನೀಡಲಾಗಿದೆ.

**ಸೋಮನಗೌಡ ಪಾಟೀಲ ಸಾಸನೂರ ಸೇವೆ ಸ್ಮರಣೆ:**

ದೇವರ ಹಿಪ್ಪರಗಿಯು ರಾಜ್ಯದಲ್ಲಿಯೇ ಅತೀ ಹಿಂದುಳಿದ ಪ್ರದೇಶವಾಗಿದೆ. ಈ ಭಾಗದ ರೈತರ ಪ್ರಮುಖ ಬೇಡಿಕೆಯಾದ ಬೂದಿಹಾಳ-ಪೀರಾಪುರ ಏತ ನೀರಾವರಿ ಯೋಜನೆ ಅನುಷ್ಠಾನವಾದರೆ ನಮ್ಮ ಭಾಗದ ಶೇ.90ರಷ್ಟು ಭೂಮಿಗೆ ನೀರು ಹರಿಯಲಿದೆ. ನಮ್ಮ ಜಮೀನುಗಳಿಗೆ ನೀರು ಬರುತ್ತಿರುವುದು ಸಂತಸ ತಂದಿದೆ ಎಂದ ಈ ಭಾಗದ ಅನೇಕ ಗ್ರಾಮಸ್ಥರು, ಪಟ್ಟು ಹಿಡಿದು ಯೋಜನೆ ಜಾರಿಮಾಡಿದ ದೇವರಹಿಪ್ಪರಗಿ ಮತಕ್ಷೇತ್ರದ ಶಾಸಕರಾದ ಸೋಮನಗೌಡ ಬಿ.ಪಾಟೀಲ ಸಾಸನೂರ ಅವರಿಗೆ ಕಾರ್ಯಕ್ರಮದಲ್ಲಿ ಗೌರವಾರ್ಥ ಜೋಡೆತ್ತುಗಳು ಮತ್ತು ಮಡಕೆಯನ್ನು ಸಮರ್ಪಿಸಿದ್ದು ಕೂಡ ವಿಶೇಷವಾಗಿತ್ತು.

**ಗಣ್ಯರು ಸಾಕ್ಷಿ:**


ಈ ಐತಿಹಾಸಿಕ ಕಾರ್ಯಕ್ರಮಕ್ಕೆ ಜಲ ಸಂಪನ್ಮೂಲ ಸಚಿವರಾದ ಗೋವಿಂದ ಕಾರಜೋಳ, ಅರಣ್ಯ ಮತ್ತು ಆಹಾರ ಇಲಾಖೆಯ ಸಚಿವರು ಮತ್ತು ಜಿಲ್ಲಾ ಉಸ್ತುವಾರಿ ಸಚಿವರಾದ ಉಮೇಶ ವಿ ಕತ್ತಿ, ಸಂಸದರಾದ ರಮೇಶ ಜಿಗಜಿಣಗಿ, ದೇವರ ಹಿಪ್ಪರಗಿ ಕ್ಷೇತ್ರದ ಶಾಸಕರಾದ ಸೋಮನಗೌಡ ಪಾಟೀಲ ಸಾಸನೂರ ಸೇರಿದಂತೆ ವಿಜಯಪುರ ಜಿಲ್ಲೆಯ ವಿವಿಧ ವಿಧಾನಸಭಾ ಮತ ಕ್ಷೇತ್ರಗಳ ಶಾಸಕರಾದ ಎ.ಎಸ್.ಪಾಟೀಲ ನಡಹಳ್ಳಿ, ಬಸನಗೌಡ ಪಾಟೀಲ ಯತ್ನಾಳ, ರಮೇಶ ಬೂಸನೂರ, ವಿಧಾನ ಪರಿಷತ್ತಿನ ವಿರೋಧ ಪಕ್ಷದ ಮುಖ್ಯ ಸಚೇತಕರಾದ ಮತ್ತು ವಿಧಾನ ಪರಿಷತ್ತಿನ ಶಾಸಕರಾದ ಪ್ರಕಾಶ ಕೆ.ರಾಠೋಡ್, ಪಿ.ಎಚ್.ಪೂಜಾರ, ಕರ್ನಾಟಕ ರಾಜ್ಯ ಬೀಜ ಮತ್ತು ಸಾವಯವ ಪ್ರಮಾಣ ಸಂಸ್ಥೆಯ ಅಧ್ಯಕ್ಷರಾದ ವಿಜುಗೌಡ ಪಾಟೀಲ, ಕರ್ನಾಟಕ ರಾಜ್ಯ ಲಿಂಬೆ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾದ ಅಶೋಕ ಅಲ್ಲಾಪೂರ, ಕಾಡಾ ನಿಗಮದ ಅಧ್ಯಕ್ಷರಾದ ಶರಣಪ್ಪ ತಳವಾರ, ಕೊಡಗಾನೂರ ಗ್ರಾಪಂ ಅಧ್ಯಕ್ಷರಾದ ಬಸನಗೌಡ ಪಾಟೀಲ ಹಾಗೂ ಇನ್ನಿತರ ಗಣ್ಯರು ಸಾಕ್ಷಿಯಾದರು.

ಜಲ ಸಂಪನ್ಮೂಲ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ರಾಕೇಶ ಸಿಂಗ್, ಐಜಿಪಿ ಸತೀಶಕುಮಾರ, ಜಿಲ್ಲಾಧಿಕಾರಿಗಳಾದ ಡಾ.ವಿಜಯಮಹಾಂತೇಶ ದಾನಮ್ಮನವರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಎಚ್.ಡಿ.ಆನಂದಕುಮಾರ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಹುಲ್ ಶಿಂಧೆ ಮತ್ತು ಕೃಷ್ಣ ಭಾಗ್ಯ ಜಲ ನಿಗಮ ನಿಯಮಿತದ ಅಧಿಕಾರಿಗಳಾದ ಬಿ.ಎಸ್.ಶಿವಕುಮಾರ, ಎಚ್.ಸುರೇಶ, ಜಗದೀಶ ರಾಠೋಡ, ಬಿ.ಟಿ.ಪಾಟೀಲ, ರವಿ ಚಂದ್ರಗಿರಿ, ಸದಾನಂದ ಪತ್ತಾರ, ಮಾರುತಿ ಕದಂ, ಮೋಹನ ಹಲಗತ್ತಿ, ವಿ.ಎಲ್.ಸೇಗುಣಸಿ, ಹನುಮಂತ ಗುಡಗುಂಟಿ ಮತ್ತಿತರರು ಬೂದಿಹಾಳ-ಪೀರಾಪುರ ಏತ ನೀರಾವರಿ ಯೋಜನೆಯ ಪೈಪ್ ವಿತರಣಾ ಜಾಲದ ಕಾಮಗಾರಿ ಶಂಕುಸ್ಥಾಪನೆ ಕಾರ್ಯಕ್ರಮವು ಅಚ್ಚುಕಟ್ಟಾಗಿ ನಡೆಯುವಂತೆ ನೋಡಿಕೊಂಡರು. ಅಂತೂ ಈ ಕಾಮಗಾರಿ ಶಂಕುಸ್ಥಾಪನೆ ಮೂಲಕ ಬರಡು ನಾಡಿನ ಅನ್ನದಾತರ ಎರಡು ದಶಕಗಳ ಕನಸು ನನಸಾಗಲಿದೆ. ■

> ವಿಜಯಪುರ ಭಾಗಕ್ಕೆ ನೀರಾವರಿ ಸೌಕರ್ಯ ಕಲ್ಪಿಸಬೇಕು ಎನ್ನುವ ನಮ್ಮ ಹಂಬಲವು ಜಮೀನು ನೀಡಿದ ಮಹನೀಯರ ತ್ಯಾಗದಿಂದಲೇ ಆಗಿದೆ. ಆ ತ್ಯಾಗಕ್ಕೆ ಬೆಲೆ ಕಟ್ಟಲು ಆಗುವುದಿಲ್ಲ. ವಿಜಯಪುರಕ್ಕೆ ಇರುವ ಬರದ ನಾಡಿನ ಬಿರುದು ಅಳಿಸಿ, 'ಜಲದ ನಾಡ'ನ್ನಾಗಿಸಲಾಗುವುದು. ವಿಜಯಪುರ ರೈತರ ಆರ್ಥಿಕ ಶಕ್ತಿಯನ್ನು ಇನ್ನಷ್ಟು ಹೆಚ್ಚಿಸುವ ನಿಟ್ಟಿನಲ್ಲಿ ಈ ಭಾಗದ ನೀರಾವರಿ ಯೋಜನೆಗಳ ಅನುಷ್ಠಾನಕ್ಕೆ ಹೆಚ್ಚಿನ ಒತ್ತು ಕೊಡಲಾಗುವುದು. ಏತ ನೀರಾವರಿ ಯೋಜನೆಯನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗುವುದು.
>
> **ಬಸವರಾಜ ಎಸ್ ಬೊಮ್ಮಾಯಿ,**
> ಮುಖ್ಯಮಂತ್ರಿಗಳು



Downloaded From:www.kpscvaani.com




## ಕಾರ್ಮಿಕರಿಗೆ ವಿವಿಧ ಸೌಲಭ್ಯಗಳನ್ನು ಒದಗಿಸುತ್ತಿರುವ

# ಹಟ್ಟಿ ಚಿನ್ನದ ಗಣಿ

**ರಾಯಚೂರಿನ ಹಟ್ಟಿ ಚಿನ್ನದ ಗಣಿಯು ತಮ್ಮ ಗಣಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರು ಮತ್ತು ಅವರ ಕುಟುಂಬ ವರ್ಗದವರಿಗೆ ವಿವಿಧ ಸೌಲಭ್ಯಗಳನ್ನು ನೀಡುವ ಮೂಲಕ ಕಾರ್ಮಿಕ ಮೆಚ್ಚುಗೆಗೆ ಪಾತ್ರವಾಗಿದೆ.**

ರಮೇಶ ಗೌಡೂರು

**ನೂ**ರಾರು ಅಡಿ ಆಳದಲ್ಲಿರುವ ಚಿನ್ನದ ಅದಿರು ಹೊರತೆಗೆದು ಸಂಸ್ಕರಿಸಿ ಅಪ್ಪಟ ಚಿನ್ನ ತೆಗೆಯುತ್ತಿರುವ ರಾಯಚೂರು ಜಿಲ್ಲೆಯ ಹಟ್ಟಿ ಚಿನ್ನದ ಗಣಿಯು 2020–21ನೇ ಸಾಲಿನಲ್ಲಿ 20.856.33 ಲಕ್ಷಗಳಷ್ಟು ಲಾಭಗಳಿಸುವ ಮೂಲಕ ಮತ್ತಷ್ಟು ಅಭಿವೃದ್ಧಿ ಮುನ್ನೋಟಕ್ಕೆ ದಾರಿ ಮಾಡಿಕೊಟ್ಟಿದೆ. ಈಗ ದೇಶದ ಪ್ರತಿಷ್ಠಿತ ಚಿನ್ನ ಉದ್ಯಮದ ಏಕೈಕ ಆಶಾಕಿರಣವೆಂದರೆ ರಾಯಚೂರು ಜಿಲ್ಲೆಯ ಹಟ್ಟಿ ಚಿನ್ನದ ಗಣಿ. ಕರ್ನಾಟಕ ಸರ್ಕಾರದ ಒಡೆತನದಲ್ಲಿರುವ ಈ ಗಣಿಯನ್ನು ಸರ್ಕಾರವೇ ನಡೆಸುತ್ತಿದೆ.

ಹಿಂದುಳಿದ ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಸಾವಿರಾರು ಜನರಿಗೆ ಉದ್ಯೋಗ ಒದಗಿಸುವುದರೊಂದಿಗೆ, ಈ ಗಣಿಯು ರಾಜ್ಯ ಬೊಕ್ಕಸಕ್ಕೆ ಹಾಗೂ ಕೇಂದ್ರದ ಕಂದಾಯ ಸಂಗ್ರಹಣೆಗೆ ಅಪಾರ ಕೊಡುಗೆ ನೀಡಿದೆ. ಈ ಗಣಿಗಳ ಅಕ್ಕಪಕ್ಕಗಳಲ್ಲಿ ಭಾರತೀಯ ಭೂವೈಜ್ಞಾನಿಕ ಸಂಸ್ಥೆ, ಖನಿಜ ಅನ್ವೇಷಣಾ ನಿಗಮ, ಹಟ್ಟಿ ಗೋಲ್ಡ್ ಮೈನ್ ಮತ್ತು ಖಾಸಗಿ ಸಂಸ್ಥೆಗಳು ಹೊಸ ಹೊಸ ಚಿನ್ನದ ಗಣಿಗಳನ್ನು ಪತ್ತೆ ಮಾಡಿವೆ. ಈ ಎಲ್ಲ ಚಿನ್ನದ ನಿಕ್ಷೇಪಗಳ ಅದಿರನ್ನು ಹಟ್ಟಿಯಲ್ಲಿ ಕರಗಿಸಬಹುದು. ಹಾಗೆಯೇ ಇಲ್ಲಿ ಚಿನ್ನದ ಕೈಗಾರಿಕೆಯನ್ನು ಇನ್ನೂ ಅನೇಕ ವರ್ಷಗಳ ಕಾಲ ಸುಸೂತ್ರವಾಗಿ ಮುಂದುವರಿಸಬಹುದಾಗಿದೆ.

ಹಟ್ಟಿಯಲ್ಲಿ ಮೂರು ಗಣಿಗಳಿದ್ದು, ವಿಲೇಜ್ ಶಾಫ್ಟ್, ಸೆಂಟ್ರಲ್ ಶಾಫ್ಟ್ ಹಾಗೂ ಮಲ್ಲಪ್ಪ ಶಾಫ್ಟ್ ಎಂದು ಇವುಗಳನ್ನು (ಶಾಫ್ಟ್ ಎಂದರೆ ಗಣಿಗಾರಿಕೆ ನಡೆಯುವ ಸ್ಥಳ) ಕರೆಯಲಾಗುತ್ತದೆ. ವಿಲೇಜ್ ಶಾಫ್ಟ್‌ಗೆ ಶತಮಾನಗಳ ಇತಿಹಾಸವಿದೆ. ಈಗ ಇಲ್ಲಿ ಗಣಿಗಾರಿಕೆ ಚಟುವಟಿಕೆ ಕಡಿಮೆ. ಮಲ್ಲಪ್ಪ ಹಾಗೂ ಸೆಂಟ್ರಲ್ ಶಾಫ್ಟ್‌ಗಳಲ್ಲಿ ಈಗ ಹೆಚ್ಚು ಚಿನ್ನ ಉತ್ಪಾದನೆಯಾಗುತ್ತಿದೆ.

ತಜ್ಞರು ಹಟ್ಟಿ ಚಿನ್ನದ ಗಣಿ ಇತಿಹಾಸವನ್ನು ಮೂರು ಕಾಲಘಟ್ಟದಲ್ಲಿ ವಿಂಗಡಿಸಿದ್ದಾರೆ. ಚಕ್ರವರ್ತಿ ಅಶೋಕನ ಕಾಲದ್ದು, ಮೊದಲನೆಯ ಘಟ್ಟ, ಎರಡನೆಯದ್ದು ಬ್ರಿಟಿಷರ ಕಾಲ (1882 ರಿಂದ 1920 ರವರೆಗೆ), 1947ರವರೆಗಿನ ಗಣಿಗಾರಿಕೆಯನ್ನು ಮೂರನೆಯ ಆಧುನಿಕ ಕಾಲದ ಘಟ್ಟ ಎಂದು ಗುರುತಿಸಲಾಗಿದೆ. ಹೈದರಾಬಾದ್ ನಿಜಾಮರ ಆಡಳಿತ ಕಾಲದಲ್ಲಿ ಹಟ್ಟಿ ಸುತ್ತಮುತ್ತ ಚಿನ್ನದ ನಿಕ್ಷೇಪಗಳ ಶೋಧನೆಗಾಗಿ ಇಂಗ್ಲೆಂಡ್‌ನ ಮನ್ ಎಂಬ ಲೋಹ ತಜ್ಞರು ಸಮೀಕ್ಷೆ ನಡೆಸಿದ್ದರು. ಹಟ್ಟಿ ಸುತ್ತಮುತ್ತಲಿನ ಭೂಮಿಯಲ್ಲಿ ಚಿನ್ನಕ್ಕಾಗಿ ಶೋಧನೆ ನಡೆಸಿದ್ದವರು ನಮ್ಮ ದೇಸಿ ತಜ್ಞರೇ ಹೊರತು ವಿದೇಶಿಯರಲ್ಲ ಎಂಬುದನ್ನು ಮನ್ ಅವರೇ ಅಧ್ಯಯನದ ಮೂಲಕ


Downloaded From:www.kpscvaani.com

ಅಭಿಪ್ರಾಯಕ್ಕೆ ಇಲ್ಲಿರುವ ಅನೇಕ ಬಾವಿಗಳೇ ಪುರಾವೆ ಎಂದು ಅವರು ಹೇಳಿದ್ದಾರೆ.

ಎರಡು ಸಾವಿರ ವರ್ಷಗಳ ಹಿಂದೆ ಇಲ್ಲಿ ಗಣಿಗಾರಿಕೆ ಚಟುವಟಿಕೆಗಳು ನಡೆದಿದ್ದವು ಎಂಬುದಕ್ಕೆ ಹಟ್ಟಿ ಗಣಿ ಕಂಪನಿಯಲ್ಲಿ ದಾಖಲೆಗಳಿವೆ. ಆಗ ಗಣಿಗಾರಿಕೆಗೆ ಬಳಸಲಾಗುತ್ತಿದ್ದ ಮರದ ದಿಮ್ಮಿ, ಕಟ್ಟಿಗೆ ಮತ್ತಿತರ ಪರಿಕರಗಳು ಹಟ್ಟಿ ಗಣಿ ಕಂಪನಿಯ ಸಂಗ್ರಹಾಲಯದಲ್ಲಿವೆ. ಗಣಿಗಾರಿಕೆಯಲ್ಲಿ ಹೊಸ ತಂತ್ರಜ್ಞಾನ ಅಳವಡಿಕೆಗೆ ಆದ್ಯತೆ ನೀಡಲಾಗಿದೆ. ಇದು ದೇಶದ ಏಕೈಕ ಚಿನ್ನದ ಗಣಿ ಆಗಿರುವುದರಿಂದ ವ್ಯವಸ್ಥಿತ ನಿರ್ವಹಣೆಗೆ ಹೆಚ್ಚು ಒತ್ತು ನೀಡಲಾಗಿದೆ ಎಂದು ಇತ್ತೀಚೆಗೆ ಗಣಿ ಮತ್ತು ವಿಜ್ಞಾನ ಇಲಾಖೆಯ ಸಚಿವರು ನಡೆಸಿದ ಸಭೆಯಲ್ಲಿ ಅಧಿಕಾರಿಗಳು ಮಾಹಿತಿ ನೀಡಿದರು.

**ಪ್ರತಿದಿನ 400 ರಿಂದ 500 ಜನರಿಗೆ ಉಚಿತ ಚಿಕಿತ್ಸಾ ವ್ಯವಸ್ಥೆ:** ಹಟ್ಟಿ ಚಿನ್ನದ ಗಣಿ ಆಸ್ಪತ್ರೆಯು 120 ಹಾಸಿಗೆಯ ಸಾಮರ್ಥ್ಯದ ಸೌಲಭ್ಯವನ್ನು ಹೊಂದಿದ್ದು, ಆಸ್ಪತ್ರೆಯಲ್ಲಿ ಕಂಪನಿಯ ನೌಕರರು ಹಾಗೂ ಅವಲಂಬಿತರಿಗೆ ಉಚಿತ ಚಿಕಿತ್ಸೆಯನ್ನು ನೀಡಲಾಗುತ್ತಿದೆ. ಪ್ರತಿದಿನ ಸುಮಾರು 400-500 ಹೊರ ರೋಗಿಗಳಿಗೆ ಚಿಕಿತ್ಸೆಯನ್ನು ನೀಡಲಾಗುತ್ತಿದೆ. ಕಂಪನಿಯ ಆಸ್ಪತ್ರೆಯು ಸುಸಜ್ಜಿತವಾದಂತಹ ಮೈನರ್ ಹಾಗೂ ಮೇಜರ್ ಶಸ್ತ್ರಚಿಕಿತ್ಸಾ ಘಟಕ, ಡಿಜಿಟಲ್ ಎಕ್ಸರೇ, ಅಲ್ಟ್ರಾ ಸೋನೋಗ್ರಫಿ, ಬ್ಲಡ್‌ಬ್ಯಾಂಕ್, ಲ್ಯಾಬೋರೇಟರಿ, ಡಯಾಲಿಸಿಸ್ ಯುನಿಟ್, ಹಾಗೂ ಡೇ ಕೇರ್ ಸೆಂಟರ್ ಮುಂತಾದ ಸೌಲಭ್ಯಗಳನ್ನು ಹೊಂದಲಾಗಿದೆ.

ಆಸ್ಪತ್ರೆಯಲ್ಲಿ ಪ್ರಸ್ತುತ 10 ಖಾಯಂ ಮತ್ತು 09 ಗುತ್ತಿಗೆ ವೈದ್ಯರು ಆರ್ಥೋಪೆಡಿಕ್ಸ್, ಅರಿವಳಿಕೆ, ಜನರಲ್ ಸರ್ಜರಿ, ಮೆಡಿಸಿನ್, ಇಎನ್‌ಟಿ, ಡರ್ಮಟಾಲಜಿ ಮತ್ತು ಪೀಡಿಯಾಟ್ರಿಕ್ಸ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಅಲ್ಲದೆ 125 ಪ್ಯಾರಾ ಮೆಡಿಕಲ್ ಮತ್ತು ಇತರೆ ಸಿಬ್ಬಂದಿ ಮತ್ತು ಕಾರ್ಮಿಕರು ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದಾರೆ.

ಇನ್ನು ಸುಮಾರು 3,900 ಉದ್ಯೋಗಿಗಳು ಮತ್ತು ಅವರ ಅವಲಂಬಿತರಿಗೆ ಜನೌಷಧಿ ಕೇಂದ್ರದಿಂದ ಔಷಧಿಗಳನ್ನು ಪೂರೈಸಲಾಗುತ್ತಿದ್ದು, 100 ಹಾಸಿಗೆಯ ಸಾಮರ್ಥ್ಯವುಳ್ಳ ಕೋಡ್ ಕೇರ್ ಸೆಂಟರ್ ಮತ್ತು ಆಕ್ಸಿಜನ್ ಘಟಕವನ್ನು ಸ್ಥಾಪಿಸಲಾಗಿದೆ.




**788 ವಿದ್ಯಾರ್ಥಿಗಳಿಗೆ ಶಿಕ್ಷಣ:** ಹಟ್ಟಿ ಚಿನ್ನದ ಗಣಿ ಕಂಪನಿಯು ಸಂಪೂರ್ಣ ಅನುದಾನಿತ ಕೇಂದ್ರೀಯ ವಿದ್ಯಾಲಯವನ್ನು ಹೊಂದಲಾಗಿದೆ. ಈ ವಿದ್ಯಾಲಯವು 2015 ರಿಂದ ಸೇವೆ ಸಲ್ಲಿಸುತ್ತಿದ್ದು, ಮುಖ್ಯವಾಗಿ ನೌಕರರ ಮತ್ತು ಇತರ ಸ್ಥಳೀಯ ಮಕ್ಕಳ ಶೈಕ್ಷಣಿಕ ಅಗತ್ಯವನ್ನು ಪೂರೈಸುತ್ತಿದ್ದು, ಪ್ರಸ್ತುತ ವಿದ್ಯಾಲಯವು 1 ನೇ ತರಗತಿಯಿಂದ 7ನೇ ತರಗತಿಯವರೆಗೆ ಎರಡು ವಿಭಾಗಗಳು ಹಾಗೂ 8ನೇ ತರಗತಿಯಿಂದ 10ನೇ ತರಗತಿಯವರೆಗೆ ಒಂದು ವಿಭಾಗವನ್ನು ಹೊಂದಿದ್ದು, ಒಟ್ಟು 788 ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುತ್ತಿದೆ.

**ಮಕ್ಕಳಿಗೆ ವಿದ್ಯಾರ್ಥಿವೇತನ ಸೌಲಭ್ಯ**

ಹಟ್ಟಿ ಚಿನ್ನದ ಗಣಿಯ ಕಂಪನಿಯಲ್ಲಿ ಕೆಲಸ ಮಾಡುತ್ತಿರುವ ಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಒತ್ತು ನೀಡಲಾಗಿದೆ. ತಾಂತ್ರಿಕ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ನೌಕರರ ಮಕ್ಕಳಿಗೆ ಮಾಸಿಕ 600 ರೂ.ಗಳನ್ನು ಹೆಣ್ಣು ಮಕ್ಕಳಿಗೆ ಹಾಗೂ 400 ರೂ.ಗಳನ್ನು ಗಂಡು ಮಕ್ಕಳಿಗೆ ವಿದ್ಯಾರ್ಥಿವೇತನ ನೀಡಲಾಗುತ್ತಿದೆ. ಹಾಗೆಯೇ ಎಲ್ಲಾ ಸ್ಥಳೀಯ ಶಾಲೆಗಳ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಾರ್ಷಿಕವಾಗಿ ಪ್ರಮಾಣಪತ್ರದೊಂದಿಗೆ ಬೆಳ್ಳಿ ಪದಕವನ್ನು ನೀಡಿ ಪ್ರೋತ್ಸಾಹಿಸಲಾಗುತ್ತಿದೆ.

ಹಟ್ಟಿ ಚಿನ್ನದ ಗಣಿ ಕಂಪನಿಯು ವೃತ್ತಿಪರ ತರಬೇತಿ ಕೇಂದ್ರ ಹೊಂದಿರುವುದರ ಜೊತೆಗೆ ಪ್ರಥಮ ಚಿಕಿತ್ಸಾ ತರಬೇತಿ ಕೋರ್ಸ್ ನಡೆಸಲು ಮತ್ತು ಪ್ರಮಾಣೀಕರಿಸಲು ಡಿಜಿಎಂಎಸ್ ಇಲಾಖೆಯಿಂದ ಪರವಾನಿಗೆ ಪಡೆದಿರುತ್ತದೆ. ಅಲ್ಲದೆ ಹಟ್ಟಿ ಚಿನ್ನದ ಗಣಿ ಕ್ರೀಡಾ ಸಂಸ್ಥೆಯ ವತಿಯಿಂದ ಕಂಪನಿಯು ತನ್ನ ಉದ್ಯೋಗಿಗಳು ಮತ್ತು ಅವರ ಅವಲಂಬಿತರಿಗೆ ಕ್ರೀಡೆ, ಫಿಟ್ನೆಸ್ ಮತ್ತು ಮನರಂಜನಾ ಚಟುವಟಿಕೆಗಳ ಅಗತ್ಯತೆಗಳನ್ನು ಪೂರೈಸುತ್ತಿದೆ. ಅಲ್ಲದೇ ಜಿಮ್, ಟೇಬಲ್ ಟೆನ್ನಿಸ್, ಬ್ಯಾಡ್ಮಿಂಟನ್, ಲೈಬ್ರರಿ ಮತ್ತು ಕೇರಮ್ ಒಳಾಂಗಣ ಕ್ರೀಡೆಗಳನ್ನು ಮತ್ತು ಹೊರಾಂಗಣ ಕ್ರೀಡಾ ಸೌಲಭ್ಯಗಳಲ್ಲಿ ಕ್ರಿಕೆಟ್, ಫುಟ್ಬಾಲ್ ಮೈದಾನ, ವಾಲಿ ಬಾಲ್ ಮೈದಾನ ಮತ್ತು ಬಾಲ್ ಬ್ಯಾಡ್ಮಿಂಟನ್ ಕ್ರೀಡೆಗಳ ಸೌಲಭ್ಯಗಳನ್ನು ಹೊಂದಲಾಗಿದೆ.

ಕಂಪನಿಯು ಕಲ್ಯಾಣ ಮಂಟಪ ಹಾಗೂ ಎಲ್ಲಾ ಕಾಲೋನಿಗಳಲ್ಲಿ ಸಮುದಾಯ ಭವನಗಳನ್ನು ಹೊಂದಿದ್ದು, ನೌಕರರು ಮತ್ತು ಅವರ ಕುಟುಂಬದವರು ವಿವಿಧ ಸಮಾರಂಭ ಮತ್ತು ಕಾರ್ಯಕ್ರಮಗಳನ್ನು ನಡೆಸಲು ಅನುಕೂಲವಾಗುವಂತೆ ಸಬ್ಸಿಡಿ ದರದಲ್ಲಿ ನೀಡಲಾಗುತ್ತದೆ. ಹಟ್ಟಿ ಚಿನ್ನದ ಗಣಿ ಕಂಪನಿಯ ಉಪಹಾರಗೃಹದಿಂದ ಎಲ್ಲಾ ಸಿಬ್ಬಂದಿ ಮತ್ತು ಉದ್ಯೋಗಿಗಳಿಗೆ ಗರಿಷ್ಠ ರಿಯಾಯಿತಿ ದರದಲ್ಲಿ ಆಹಾರವನ್ನು ಪೂರೈಸಲಾಗುತ್ತಿದೆ.

ಹೀಗೆ ಹಟ್ಟಿ ಚಿನ್ನದ ಗಣಿಯು ತನ್ನ ನೌಕರರು ಮತ್ತು ಅವರ ಕುಟುಂಬದವರಿಗೆ ವಿವಿಧ ಸೌಲಭ್ಯಗಳನ್ನು ಒದಗಿಸುವ ಮೂಲಕ ನೌಕರರಿಂದ ಮೆಚ್ಚುಗೆಯನ್ನು ಗಳಿಸುವ ಜೊತೆಗೆ ಲಾಭದಾಯಕವಾಗಿ ಅಭಿವೃದ್ಧಿಯನ್ನು ಹೊಂದುತ್ತಿದೆ. ■


Downloaded From:www.kpscvaani.com




# ಜನರ ಸುರಕ್ಷತೆಗಾಗಿ ಎಮರ್ಜೆನ್ಸಿ ಕಾಲ್ ಬಾಕ್ಸ್

**ತುರ್ತು ಸಂದರ್ಭಗಳಲ್ಲಿ ಸಾರ್ವಜನಿಕರ ಸುರಕ್ಷತೆಗಾಗಿ ತುಮಕೂರು ನಗರದಲ್ಲಿ ಪಬ್ಲಿಕ್ ಅನೌನ್ಸ್‌ಮೆಂಟ್ ಮತ್ತು ಎಮರ್ಜೆನ್ಸಿ ಕಾಲ್ ಬಾಕ್ಸ್ ಅಳವಡಿಕೆ.**

ಆರ್. ರೂಪಕಲಾ

ತುಮಕೂರು ನಗರದ ಸಾರ್ವಜನಿಕರ ಭದ್ರತೆ ಹಾಗೂ ಸುರಕ್ಷತೆಗಾಗಿ ಸ್ಮಾರ್ಟ್ ಸಿಟಿ ಲಿಮಿಟೆಡ್ ವತಿಯಿಂದ ನಗರ ವ್ಯಾಪ್ತಿ 41 ಕಡೆಗಳಲ್ಲಿ ಪಬ್ಲಿಕ್ ಅನೌನ್ಸ್‌ಮೆಂಟ್ ಮತ್ತು ಎಮರ್ಜೆನ್ಸಿ ಕಾಲ್ ಬಾಕ್ಸ್‌ಗಳನ್ನು ಅಳವಡಿಸಲಾಗಿದೆ.

ನಗರದಲ್ಲಿ ಸ್ಮಾರ್ಟ್ ಸಿಟಿ ಕೈಗೊಂಡಿರುವ ಪ್ರಮುಖ ಯೋಜನೆಗಳಲ್ಲೊಂದಾದ ಸಮಗ್ರ ನಗರ ನಿರ್ವಹಣೆ ಮತ್ತು ನಿಯಂತ್ರಣ ಕೇಂದ್ರ (ಐಸಿಎಂಸಿಸಿ) ಯೋಜನೆಯಡಿ ಈ ಎಮರ್ಜೆನ್ಸಿ ಕಾಲ್ (ತುರ್ತು ಸಹಾಯವಾಣಿ) ಬಾಕ್ಸ್‌ಗಳನ್ನು ಅಳವಡಿಸಲಾಗಿದೆ. ಸಾರಿಗೆ, ಅಗ್ನಿಶಾಮಕ, ಜಲಮಂಡಳಿ, ಪೊಲೀಸ್, ಇ–ಆಡಳಿತ ಸೇರಿದಂತೆ ವಿವಿಧ ಕ್ರಿಯಾತ್ಮಕ ಇಲಾಖೆಗಳನ್ನೊಳಗೊಂಡಂತೆ ಏಕೈಕ ವೇದಿಕೆ ಕಲ್ಪಿಸಿ ತುರ್ತು ಸಂದರ್ಭಗಳಲ್ಲಿ ಸಾರ್ವಜನಿಕರಿಗೆ ಸುರಕ್ಷತೆ ಒದಗಿಸುವುದು ಈ ತುರ್ತು ಸಹಾಯವಾಣಿಯ ಉದ್ದೇಶವಾಗಿದೆ.

ಎಮರ್ಜೆನ್ಸಿ ಕಾಲ್ ಬಾಕ್ಸ್ ಅನ್ನು ಜೀವ ಉಳಿಸುವ ಬಾಕ್ಸ್ (SOS= Save Our Soul) ಎಂದರೂ ತಪ್ಪಾಗಲಾರದು. ರಸ್ತೆ ಅಪಘಾತ ಸೇರಿದಂತೆ ಮತ್ತಿತರ ತುರ್ತು ಸಂದರ್ಭಗಳಲ್ಲಿ ಚಿಕಿತ್ಸೆ ಮೂಲಕ ಜೀವವನ್ನು ಉಳಿಸಿಕೊಳ್ಳುವ ಸಾಧ್ಯತೆಯಿದ್ದರೂ ಅಗತ್ಯ ನೆರವು ದೊರೆಯದೆ ಗಾಯಾಳುಗಳು ಸಾವನ್ನಪ್ಪಿರುವ ಎಷ್ಟೋ ನಿದರ್ಶನಗಳಿವೆ. ಇಂತಹ ಸಂದರ್ಭಗಳಲ್ಲಿ ಗಾಯಾಳುಗಳಿಗೆ ಸಕಾಲದಲ್ಲಿ ಆಂಬುಲೆನ್ಸ್ ಸೇವೆ, ಹೆಚ್ಚಿನ ವೈದ್ಯಕೀಯ ಚಿಕಿತ್ಸೆಗಾಗಿ ತುರ್ತು ಸಹಾಯವಾಣಿಗೆ ಕರೆ ಮಾಡಿ ನೆರವು ಪಡೆಯುವ ಮೂಲಕ ಜೀವನ್ಮರಣದ ನಡುವೆ ಹೋರಾಡುತ್ತಿರುವವರಿಗೆ ಮರು ಜೀವ ನೀಡಬಹುದಾಗಿದೆ.

ಸಾರ್ವಜನಿಕರು ತುರ್ತು ಸಂದರ್ಭಗಳಲ್ಲಿ ಎಮರ್ಜೆನ್ಸಿ ಕಾಲ್ ಬಾಕ್ಸ್‌ನಲ್ಲಿರುವ ಕೆಂಪು ಗುಂಡಿಯನ್ನು ಒತ್ತಿ ಕರೆ ಮಾಡಬೇಕು. ತುರ್ತು ಸಹಾಯವಾಣಿಯಲ್ಲಿ ಕ್ಯಾಮೆರಾ ಅಳವಡಿಸಲಾಗಿದ್ದು, ಕೆಂಪು ಗುಂಡಿ ಒತ್ತಿದ ಕೂಡಲೇ ಸ್ಮಾರ್ಟ್ ಸಿಟಿ ಕಮಾಂಡ್ ಮತ್ತು ಕಂಟ್ರೋಲ್ ಸೆಂಟರ್‌ಗೆ ವೀಡಿಯೋ ಕರೆ ಬರುತ್ತದೆ. ನಂತರ


Downloaded From:www.kpscvaani.com




ಕಮ್ಯಾಂಡ್ ಸೆಂಟರ್ ಆಪರೇಟರ್‌ಗಳು ಪಬ್ಲಿಕ್ ಅನೌನ್ಸ್‌ಮೆಂಟ್ ಸಿಸ್ಟಮ್/ಎಮರ್ಜೆನ್ಸಿ ಕಾಲ್ ಬಾಕ್ಸ್‌ನ ಸ್ವೀಕೃತ ಕರೆ ಆಧರಿಸಿ ನಕಲಿ ಕರೆಯೋ ಅಥವಾ ಅಸಲಿ ಕರೆಯೋ ಎಂದು ತಿಳಿದು ಅಗತ್ಯ ಸೇವೆಗಳನ್ನು ನೀಡಲಿದ್ದಾರೆ.

**ನಗರದ 41 ಕಡೆ ಎಮರ್ಜೆನ್ಸಿ ಕಾಲ್ ಬಾಕ್ಸ್:**

ಸಾರ್ವಜನಿಕರು ತುರ್ತು ಸಂದರ್ಭಗಳಲ್ಲಿ ಎಮರ್ಜೆನ್ಸಿ ಕಾಲ್ ಬಾಕ್ಸ್ ಮೂಲಕ ಕರೆ ಮಾಡಲು 41 ಕಡೆ ಎಮರ್ಜೆನ್ಸಿ ಬಾಕ್ಸ್‌ಗಳನ್ನು ಅಳವಡಿಸಲಾಗಿದೆ. ನಗರ ವ್ಯಾಪ್ತಿಯ ದೇವರಾಯಪಟ್ಟಣ, ಶ್ರೀ ಸಿದ್ದಗಂಗಾ ಮಠ ಮುಂಭಾಗದ ಗೇಟ್, ಶ್ರೀ ಸಿದ್ದಗಂಗಾ ಮಠ ಹಿಂಭಾಗದ ಗೇಟ್, ಗೋಕುಲ್ ಬಡಾವಣೆ, ಹನುಮಂತಪುರ, ಯಲ್ಲಾಪುರ, ಹೆಚ್.ಎಂ.ಎಸ್. ಸಾಲೆ, ದಿಬ್ಬೂರು, ರಾಣಿ ಚೆನ್ನಮ್ಮ ವೃತ್ತ, ಕಾರ್ತಿಕ್ ಬಾರ್, ಸಂಕ್ರಾಂತಿ ಸ್ಟೋರ್, ಎಸ್‌ಎಸ್‌ಐಟಿ ಕಾಲೇಜು, ಮರಳೂರು ದಿಣ್ಣೆ, ಬನಶಂಕರಿ, ಮಾರುತಿ ನಗರ ಕಮಾನು, ಜಿಮ್ ವೃತ್ತ, ಉಪ್ಪಾರಹಳ್ಳಿ ಆಟೋನಿಲ್ದಾಣ, ನಮ್ಮೂರ ಆಹಾರ, ದೋಬಿ ಘಾಟ್, ಹೊರಪೇಟೆ ವೃತ್ತ, ಕೋತಿ ತೋಪು, ಅಮಾನಿಕೆರೆ ಪಾರ್ಕ್, ರಂಗಾಪುರ ಸ್ಕೈವಾಕ್, ಬಾಂಬೆ ಬಿಲ್ಡಿಂಗ್, ಕುರಿಪಾಳ್ಯ ವೃತ್ತ, ಕೆಸರಮಡು, ಶೆಟ್ಟಿಹಳ್ಳಿ, ಗೆದ್ದಲಹಳ್ಳಿ, ಕ್ಯಾತಸಂದ್ರ, ಬಡವಾಡಿ, ಶಿವಕುಮಾರ ಸ್ವಾಮಿ ವೃತ್ತ, ಭದ್ರಮ್ಮ ವೃತ್ತ, ಕಾಲ್ಟೆಕ್ಸ್ ವೃತ್ತ, ಗುಬ್ಬಿ ಗೇಟ್, ಕೋಡಿ ವೃತ್ತದ ಬಳಿ ತಲಾ ಒಂದು ಹಾಗೂ ದಾನಾ ಪ್ಯಾಲೇಸ್, ಶಿರಾ ಗೇಟ್ ಪ್ರದೇಶದಲ್ಲಿ ತಲಾ ಎರಡರಂತೆ ಎಮರ್ಜೆನ್ಸಿ ಕಾಲ್ ಬಾಕ್ಸ್‌ಗಳನ್ನು ಅಳವಡಿಸಲಾಗಿದೆ.

ನಗರದಲ್ಲಿ 2020ರ ಮಾರ್ಚ್ ಮಾಹೆಯಲ್ಲಿ ಎಮರ್ಜೆನ್ಸಿ ಕಾಲ್ ಬಾಕ್ಸ್‌ಗಳನ್ನು ಅಳವಡಿಸಲಾಗಿದ್ದು, ಈವರೆಗೂ ಇವುಗಳಿಂದ ಸುಮಾರು 300 ಕರೆಗಳನ್ನು ಸ್ವೀಕರಿಸಲಾಗಿದೆ. ದಿನದ 24 ಗಂಟೆಗಳ ಕಾಲವೂ ಕಾರ್ಯನಿರ್ವಸುವ ಕಮಾಂಡ್ ಅಂಡ್ ಕಂಟ್ರೋಲ್ ಸೆಂಟರ್‌ನಲ್ಲಿ ಮಹಾನಗರ ಪಾಲಿಕೆ, ಪೊಲೀಸ್ ಇಲಾಖೆ ಹಾಗೂ ಸ್ಮಾರ್ಟ್ ಸಿಟಿ ಲಿಮಿಟೆಡ್‌ನ 38 ಸಿಬ್ಬಂದಿಗಳು 3 ಪಾಳಿ(Shift)ಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ಬಹಳಷ್ಟು ಜನರಿಗೆ ಎಮರ್ಜೆನ್ಸಿ ಕಾಲ್ ಬಾಕ್ಸ್ ಬಳಕೆ ಹಾಗೂ ಪ್ರಯೋಜನಗಳ ಬಗ್ಗೆ ಮಾಹಿತಿಯೇ ಇರುವುದಿಲ್ಲ. ಕಮ್ಯಾಂಡ್ ಸೆಂಟರ್‌ನಲ್ಲಿ ಎಲ್ಲಾ ಲೊಕೇಶನ್‌ಗಳ ನಕ್ಷೆಯನ್ನು ಅಳವಡಿಸಲಾಗಿದ್ದು, ಪ್ರತಿಯೊಂದೂ ಎಮರ್ಜೆನ್ಸಿ ಕಾಲ್ ಬಾಕ್ಸ್‌ಗಳಿಗೆ ಪ್ರತ್ಯೇಕ ಕೋಡ್‌ಗಳನ್ನು ನೀಡಲಾಗಿದೆ. ಕಾಲ್ ಬಾಕ್ಸ್‌ನಲ್ಲಿ ಕೆಂಪು ಗುಂಡಿ ಒತ್ತಿದ ಕೂಡಲೇ ಲೊಕೇಶನ್ ಯಾವುದೆಂದು ಈ ಕೋಡ್ ಮೂಲಕ ತಿಳಿಯುತ್ತದೆ.

ಕಮ್ಯಾಂಡ್ ಸೆಂಟರ್‌ನಲ್ಲಿರುವ ರಿಸೀವರ್‌ನಲ್ಲಿ ಯಾವ ಲೊಕೇಶನ್‌ನಿಂದ ಕರೆ ಬರುತ್ತಿದೆ ಎಂದು ತಿಳಿಯುವ ವ್ಯವಸ್ಥೆಯಿರುವುದರಿಂದ ಅಪಘಾತ ನಡೆದಿರುವ ಸ್ಥಳವನ್ನು ಪತ್ತೆ ಹಚ್ಚಿ ಕಡಿಮೆ ಸಮಯದಲ್ಲಿ ಸ್ಥಳಕ್ಕೆ ಧಾವಿಸಿ ನೆರವು ನೀಡಲು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಸಾರ್ವಜನಿಕರು ತುರ್ತು ಸಂದರ್ಭಗಳಲ್ಲಿ ಎಮರ್ಜೆನ್ಸಿ ಕಾಲ್ ಬಾಕ್ಸ್ ಬಳಕೆ ಮಾಡುವ ಮೂಲಕ ಅಗತ್ಯ ನೆರವು ಪಡೆಯಬೇಕೆಂದು ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕ ಬಿ.ಟಿ. ರಂಗಸ್ವಾಮಿ ಅವರು ಮನವಿ ಮಾಡಿದ್ದಾರೆ. ■

> **ಸಾರ್ವಜನಿಕರು ಅಪಘಾತವಾದಾಗ ನೆರವು ಕೋರಿಕೆಗೆ, ಆಂಬುಲೆನ್ಸ್ ಸೇವೆಗೆ, ಪೊಲೀಸ್ ಸೇವೆಗೆ, ಕಳ್ಳತನವಾದಾಗ ನೆರವು ಕೋರಿಕೆಗೆ, ಆರೋಗ್ಯ ಸೇವೆಗೆ, ಸಂಚಾರಿ ನಿಯಮ ಉಲ್ಲಂಘನೆ ಸೇರಿದಂತೆ ಯಾವುದೇ ತುರ್ತು ಸಂದರ್ಭಗಳಲ್ಲಿ ಎಮರ್ಜೆನ್ಸಿ ಕಾಲ್ ಬಾಕ್ಸ್ ಅನ್ನು ಉಪಯೋಗಿಸಬಹುದಾಗಿದೆ.**



Downloaded From:www.kpscvaani.com



# ಸೇಬು ಬೆಳೆ

## ಶಿರಾ ಆಗಲಿದೆಯೇ ಕಾಶ್ಮೀರ ?

ಡಿ. ಪಿ. ಮುರಳೀಧರ್

ಅನ್ ಆಪಲ್ ಎ ಡೇ ಕೀಪ್ಸ್ ದ ಡಾಕ್ಟರ್ ಅವೇ ! (ಪ್ರತಿ ದಿನವೂ ಒಂದು ಸೇಬು ಸೇವಿಸಿದಲ್ಲಿ ವೈದ್ಯರಿಂದ ದೂರ ಉಳಿಬಹುದು) ಎಂಬ ಆಂಗ್ಲ ಭಾಷೆಯ ಗಾದೆ ಮಾತು ಇಂದಿಗೂ ಎಲ್ಲೆಡೆ ಪ್ರಚಲಿತ. ಅಷ್ಟೇ ಅಲ್ಲ ! ಪ್ರೇಮಿಗಳಿಗೆ ಸೇಬು ಹಣ್ಣು ಪ್ರಣಯದ ಸಂಕೇತವೂ ಹೌದು.

ಇಡೀ ಜಗತ್ತಿನಲ್ಲೇ ಕಿತ್ತಳೆ, ಬಾಳೆ ಹಣ್ಣು ಮತ್ತು ದ್ರಾಕ್ಷಿಯ ನಂತರ ಅತ್ಯಧಿಕ ಪ್ರಮಾಣದಲ್ಲಿ ಬೆಳೆಯುವ ಸೇಬು, ಹಣ್ಣುಗಳ ಲೋಕದಲ್ಲಿ  ಅತ್ಯಧಿಕವಾಗಿ ಬೆಳೆಯುವ ನಾಲ್ಕನೇ ಅತಿ ದೊಡ್ಡ ಉತ್ಪನ್ನ. ಸೇಬು ಉತ್ಪನ್ನದಲ್ಲಿ ಚೀನಾ ದೇಶವು ಜಗತ್ತಿನಲ್ಲಿಯೇ ಪ್ರಪ್ರಥಮ ಹಾಗೂ ಮೊದಲ ಸ್ಥಾನ ಪಡೆದಿದೆ ಎಂಬುದೂ ಗಮನಾರ್ಹ.

**ಸೇಬಿನ ವಿಶೇಷತೆ:**

ಬಣ್ಣದಲ್ಲಿ ಕಣ್ಮನ ಸೆಳೆಯುವ, ರುಚಿಯಲ್ಲಿ ನಾಲಿಗೆಯನ್ನು ತಣಿಸುವ, ಪೌಷ್ಠಿಕತೆಯಲ್ಲಿ ಆರೋಗ್ಯಕ್ಕೆ ಪೂರಕವಾಗುವ ಹಾಗೂ ಗಾತ್ರದಲ್ಲಿ ಎಲ್ಲರನ್ನೂ ಆಕರ್ಷಿಸುವ ಸೇಬು ವಿಶ್ವಾದ್ಯಂತ ಜನಪ್ರಿಯತೆ ಗಳಿಸಿರುವ ಒಂದು ವಿಶೇಷ ಹಣ್ಣು. ಪ್ರಪಂಚದ ಎಲ್ಲೆಡೆ ಸೇಬಿನ ಹಣ್ಣನ್ನು ತಿನ್ನುತ್ತಾರೆ. ಸೇಬಿನ ರಸವನ್ನು ಸೇವಿಸುತ್ತಾರೆ. ಮುರಬ್ಬ (ಜ್ಯಾಮ್), ಜೆಲ್ಲಿ ಹಾಗೂ ಐಸ್ ಕ್ಯಾಂಡಿ ಮೂಲಕವೂ ಸೇಬಿನ ಸ್ವಾದವನ್ನು ಸವಿಯುತ್ತಾರೆ.

ಹವಾಗುಣ, ಮಣ್ಣಿನ ಗುಣ ಹಾಗೂ ನೀರಿನ ಗುಣಕ್ಕೆ ಅನುಗುಣವಾಗಿ ಜಗತ್ತಿನಾದ್ಯಂತ 7500 ಕ್ಕೂ ಹೆಚ್ಚು ಪ್ರಬೇಧಗಳಲ್ಲಿ ಕಾಣಸಿಗುವ ಈ ಹಣ್ಣು ಮೊದಲು ಮಧ್ಯ ಏಷ್ಯಾದಲ್ಲಿ ಜನ್ಮ ತಾಳಿ, ನಂತರ ಐರೋಪ್ಯ ರಾಷ್ಟ್ರಗಳಲ್ಲಿ, ತದ ನಂತರ ಅಮೇರಿಕಾ, ಚೀನಾ ಮತ್ತು ಭಾರತದಲ್ಲಿ ತನ್ನ ನೆಲೆಯನ್ನು ಕಂಡು ಕೊಂಡಿದೆ. ಪ್ರತಿ ಪ್ರಬೇಧದಲ್ಲೂ ಬಣ್ಣ ಮತ್ತು ರುಚಿಯಲ್ಲಿ ಅಲ್ಪ ಪ್ರಮಾಣದ ವ್ಯತ್ಯಾಸಗಳಿರುತ್ತವೆ.

**ರೈತರ ಪ್ರಯೋಗಗಳಿಗೆ ಮಹತ್ವ !**

ಕೃಷಿ ವಿಶ್ವವಿದ್ಯಾಲಯಗಳು ತಮ್ಮ ಪ್ರಯೋಗಾಲಯಗಳಿಂದ ಉಗಮವಾದ ಹೊಸ ಅನ್ವೇಷಣೆ ಮತ್ತು ಅವಿಷ್ಕಾರಗಳನ್ನು ರೈತರ ಭೂಮಿಗೆ ತೆಗೆದುಕೊಂಡು



Downloaded From:www.kpscvaani.com

ಹೋಗುವಂತೆ ಕರೆಕೊಟ್ಟರೂ ಸ್ಪಂದಿಸದ ಕೃಷಿಕರು, ಕೃಷಿ ಮಂತ್ರಾಲಯ ಮತ್ತು ಕೃಷಿ ಇಲಾಖೆಗಳು ನವನವೀನ ಪದ್ಧತಿಗಳನ್ನು ಹಾಗೂ ನೂತನ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುವಂತೆ ಜಾಹೀರಾತು ನೀಡಿ ಪ್ರಚುರಪಡಿಸಿದರೂ ಉತ್ಸಾಹ ಭರಿತರಾಗಿ ಮುಂದೆ ಬಾರದ ಕೃಷಿಕರು, ಒಂದು ಬೆಳೆಯಲ್ಲಿ ಒಬ್ಬ ರೈತ ಯಶಸ್ವಿಯಾದದ್ದನ್ನು ಕಣ್ಣಾರೆ ಕಂಡೊಡನೆಯೇ ಹಲವು ರೈತರು ಸ್ಪರ್ಧೆಗೆ ಇಳಿದಂತೆ ಆತನನ್ನು ಅನುಕರಿಸುತ್ತಾರೆ. ತಾವೂ ಕೂಡಾ ಯಶಸ್ಸಿನ ಪಾಲುದಾರರಾಗ ಬಯಸುತ್ತಾರೆ. ಈ ಹಿನ್ನೆಯಲ್ಲಿ ವಿಜ್ಞಾನಿಗಳ ಪ್ರಯೋಗಗಳಿಗಿಂತಲೂ ರೈತರ ಪ್ರಯೋಗಗಳು ಮಹತ್ವ ಪಡೆಯುತ್ತವೆ.

**ಬೆಳೆ ಬೆಳೆಯುವುದು ಹೇಗೆ ?**

ಸಮುದ್ರ ಮಟ್ಟದಿಂದ 1500 ಮೀಟರ್‌ನಿಂದ 2700 ಮೀಟರ್ ಎತ್ತರದ ಪ್ರದೇಶದಲ್ಲಿ ಸೇಬು ಬೆಳೆಯನ್ನು ಬೆಳೆಯಬಹುದಾಗಿದೆ. ಹಿಮಾಲಯದ ಪ್ರದೇಶದಲ್ಲಿ 1000 ಗಂಟೆಗಳಿಂದ 1500 ಗಂಟೆಗಳು ಶೀತ ಅಥವಾ ತಂಪಾದ ವಾತಾವರಣವಿರುವ ಹಿನ್ನೆಲೆಯಲ್ಲಿ ಸ್ವಾದಿಷ್ಟ ಭರಿತ ಸೇಬು ಬೆಳೆಗೆ ಅದು ಉತ್ತಮ ವಾತಾವರಣ ಎನಿಸಿದೆ. ಸೇಬಿನ ಸಸಿ ಎರಡು-ಮೂರು ವರ್ಷಗಳಲ್ಲಿ ಸೇಬಿನ ಗಿಡವಾಗಿ ಎಂಟು ವರ್ಷದ ನಂತರ ಸೇಬಿನ ಮರವಾಗುತ್ತದೆ. ಅಂತಹ ಮರದಲ್ಲಿ ಉತ್ತಮ ಫಸಲು ನಿರೀಕ್ಷಿಸಬಹುದಾಗಿದೆ.

ಸೇಬು ಬೆಳೆಯುವ ಸಂದರ್ಭದಲ್ಲಿ ತಾಪಮಾನ 21 ಡಿಗ್ರಿ ಸೆಲ್ಸಿಯಸ್ ನಿಂದ 24 ಡಿಗ್ರಿ ಸೆಲ್ಸಿಯಸ್ ಇರಬೇಕು. ವಾರ್ಷಿಕ ಮಳೆಯ ಪ್ರಮಾಣ 100 ಸೆಂಟಿಮೀಟರ್ ನಿಂದ 125 ಸೆಂಟಿಮೀಟರ್ ಇರಬೇಕು. ಗಾಳಿಯ ಪ್ರಮಾಣ ಹೆಚ್ಚಿದ್ದರೂ ಉತ್ತಮ ಹಣ್ಣು ಬೆಳೆಯುವುದಿಲ್ಲ. ಸಾವಯವ ಭರಿತ ಹಿತಕರ ಮಣ್ಣು ಸೇಬು ಬೆಳೆ ಬೆಳೆಯಲು ಅತೀ ಮುಖ್ಯ. ಜೌಗು ಪ್ರದೇಶದಲ್ಲಿ ಸೇಬು ಬೆಳೆ ಬೆಳೆಯಲಾಗದು. ಹಣ್ಣು ಪಕ್ವವಾಗುವ ಸಮಯದಲ್ಲಿ ಅತೀ ಹೆಚ್ಚು ಮಳೆ ಅಥವಾ ಮಂಜು ಬಿದ್ದಲ್ಲಿ, ಹಣ್ಣಿನ ಗುಣಮಟ್ಟ ಕುಸಿಯುತ್ತದೆ. ಹಣ್ಣಿನ ಬಣ್ಣವೂ ಆಕರ್ಷಕವಾಗಿರುವುದಿಲ್ಲ. ಸೇಬು ಬೆಳೆಗೆ ಬೆಳಕು ಮತ್ತು ಬಿಸಿಲು ಅತ್ಯಾವಶ್ಯಕ. ಇಲ್ಲವಾದಲ್ಲಿ, ಹಣ್ಣಿನ ಮೇಲೆ ಕಲೆಗಳು ಮೂಡಿ, ಹಣ್ಣು ಕೆಡುತ್ತವೆ. ಇಂತಹ ಹಣ್ಣುಗಳು ಸೇವನೆಗೆ ಅರ್ಹವಲ್ಲ. ಸೇಬು





ಸಸಿ ನೆಡಲು ಜನವರಿ ಅಥವಾ ಫೆಬ್ರವರಿ ತಿಂಗಳು ಯೋಗ್ಯ ಎಂದು ಕೃಷಿ ವಿಜ್ಞಾನಿಗಳು ಹೇಳುತ್ತಾರೆ.

ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನ ಯಾದಲಡಕು ಗ್ರಾಮದಲ್ಲಿ ಕಾರ್ತಿವೀರ ಎಂಬ ರೈತ ತನ್ನ ಸೋದರಿಯಂತಿರುವ ತಮ್ಮದೇ ಗ್ರಾಮದ ವಸಂತ ಕುಮಾರಿ ಎಂಬುವವರ ಆರೂವರೆ ಎಕರೆ ಜಮೀನಿನಲ್ಲಿ ಹಲವಾರು ಪ್ರಯೋಗಳನ್ನು ನಡೆಸುತ್ತಿದ್ದಾರೆ.

ತಮ್ಮ ಗ್ರಾಮದಲ್ಲಿಯೇ ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸಿ, ಶಿರಾದಲ್ಲಿ ಪ್ರೌಢ ಶಿಕ್ಷಣವನ್ನು ಪೂರೈಸಿ, ತುಮಕೂರಿನಲ್ಲಿ ಪದವಿ ಪೂರ್ವ ಶಿಕ್ಷಣವನ್ನು ಪಡೆದಿರುವ ಕಾರ್ತಿವೀರ


Downloaded From:www.kpscvaani.com



ಅವರು ಕೃಷಿಯಲ್ಲೇ ಸಾಧನೆ ಮಾಡಿ, ಕೃಷಿಯಲ್ಲಿಯೇ ಬದುಕು ಕಟ್ಟಿಕೊಳ್ಳಬೇಕೆಂಬ ಛಲ ಉಳ್ಳವರು.

ಶಿರಾ ತಾಲ್ಲೂಕಿನ ಹಣ್ಣು ಬೆಳೆಗಾರರ ಸಂಘದ ಅಧ್ಯಕ್ಷ ರಾಮದಾಸ್ ಅವರ ಸಂಪರ್ಕಕ್ಕೆ ಬಂದಾಗ ಕಸಿ ಮಾಡಿದ ಸೇಬು ಸಸಿ ಮಾರಾಟದ ವಿಷಯ ತಿಳಿಯುತ್ತದೆ. ಶಿರಾ ತಾಲ್ಲೂಕಿನ ರೈತರಿಗೆ ದಾಳಿಂಬೆ ಬೆಳೆಯನ್ನು ಬೆಳೆಯಲು ಮೊದಲು ಪರಿಚಯಿಸಿ ಪ್ರೋತ್ಸಾಹಿಸಿದವರು ರಾಮದಾಸ್. ಶಿರಾ ತಾಲ್ಲೂಕಿನ ರೈತರ ಅಂಗಳಕ್ಕೆ ಪಪ್ಪಾಯ ಬೆಳೆಯನ್ನು ಮೊದಲು ತಂದವರೂ ರಾಮದಾಸ್. ಅಂತಹವರ ಭೇಟಿಯಾಗಿ ಪರಿಚಯುವಾದಾಗ ಕಾರ್ತಿವೀರ ಪುಳಕಿತರಾಗುತ್ತಾರೆ. ಕಸಿ ಮಾಡಿದ ಸೇಬು ಸಸಿಗಳನ್ನು ಖರೀದಿಸಿ ತಮ್ಮ ಪ್ರಯೋಗಕ್ಕೆ ಸನ್ನದ್ಧರಾಗುತ್ತಾರೆ. ಭಾರತದಲ್ಲಿ ಜಮ್ಮು ಮತ್ತು ಕಾಶ್ಮೀರ, ಹಿಮಾಚಲ ಪ್ರದೇಶ, ಉತ್ತರ ಪ್ರದೇಶದ ಗುಡ್ಡಗಾಡುಗಳಲ್ಲಿ ಮತ್ತು ಉತ್ತರಾಂಚಲದಲ್ಲಿ ಬೃಹತ್ ಪ್ರಮಾಣದಲ್ಲಿ  ಹಾಗೂ ನಾಗಾಲ್ಯಾಂಡ್, ಸಿಕ್ಕಿಂ, ಅರುಣಾಚಲ ಪ್ರದೇಶ ಮತ್ತು ಮೇಘಾಲಯ ರಾಜ್ಯಗಳಲ್ಲಿ ಅಲ್ಪ ಪ್ರಮಾಣದಲ್ಲಿ ಬೆಳೆಯಲಾಗುತ್ತಿದ್ದ ಸೇಬು ಬೆಳೆಯನ್ನು ದಕ್ಷಿಣ ಭಾರತಕ್ಕೆ ಕರೆತರುವ ಸಾಹಸಕ್ಕೆ ಅಣಿ ಇಡುತ್ತಾರೆ.



ವಸಂತ ಕುಮಾರಿ ಅವರ ಆರೂವರೆ ಎಕರೆ ಜಮೀನಿನ ಎರಡೂವರೆ ಎಕರೆ ಪ್ರದೇಶದಲ್ಲಿ ತಾವು ಖರೀದಿಸಿದ 650 ಸೇಬು ಸಸಿಗಳನ್ನು ನೆಡುತ್ತಾರೆ. ಸಸಿಗೆ ನೀರು ಕೊಡುವುದರಿಂದ ಹಿಡಿದು ನೆರಳು ಕಲ್ಪಿಸುವವರೆಗೆ ಕಾರ್ತಿವೀರ ಅವರು ಎಲ್ಲಾ ರೀತಿಯಲ್ಲೂ ಕಾಳಜಿ ವಹಿಸುತ್ತಾರೆ. ನೋಡ ನೋಡುತ್ತಲೇ ಕೆಲವೇ ದಿನಗಳಲ್ಲಿ ಸುಮಾರು ಐವತ್ತು ಸಸಿಗಳು ಸಾವನ್ನಪ್ಪುತ್ತವೆ. ಇದರಿಂದ ನೀರು ಹೆಚ್ಚಾದಲ್ಲಿ, ಜೌಗು ಪ್ರದೇಶದಲ್ಲಿ ಹಾಗೂ ನೆರಳು ಅತಿಯಾದಲ್ಲಿ ಸೇಬು ಸಸಿಗಳು ಬೆಳೆಯುವುದಿಲ್ಲ ಎಂಬ ವಿಷಯವು ಪ್ರಾಯೋಗಿಕವಾಗಿ ಅನಾವರಣಗೊಳ್ಳುತ್ತದೆ. ಉಳಿದ ಸಸಿಗಳನ್ನು ರಕ್ಷಿಸಲು ಕಾರ್ತಿವೀರ ಅವರು ಮತ್ತಷ್ಟು ಕಾಳಜಿ ಹಾಗೂ ಇನ್ನಷ್ಟು ಮುತುವರ್ಜಿ ವಹಿಸುತ್ತಾರೆ.



Downloaded From:www.kpscvaani.com



**ಸೇಬು ಸೇವನೆ: ಲಾಭ ಏನು ?**

ಸೇಬು ಹಣ್ಣಿನಲ್ಲಿ ಕ್ಯಾಲೋರೀಸ್, ಕಾರ್ಬೋಹೈಡ್ರೇಟ್ಸ್, ಫೈಬರ್, ಕಾಪರ್, ಪೊಟಾಸಿಯಮ್, ವಿಟಮಿನ್ ಸಿ ಮತ್ತು ವಿಟಮಿನ್ ಕೆ ಒಳಗೊಂಡಂತೆ ಹಲವು ಪೌಷ್ಟಿಕಾಂಶಗಳಿವೆ. ಅಲ್ಲದೆ, ಆಂಟಿ ಆಕ್ಸಿಡೆಂಟ್ ಎನಿಸಿರುವ ವಿಟಮಿನ್ ಇ ಹಾಗೂ ಪಾಲಿ ಫಿನೋಲ್ಸ್‌ಗಳೂ ಇವೆ.

ಸೇಬಿನ ಹಣ್ಣಿನಲ್ಲಿ ಅತ್ಯಧಿಕ ಫೈಬರ್ ಮತ್ತು ನೀರಿನ ಅಂಶ ಇರುವ ಹಿನ್ನೆಲೆಯಲ್ಲಿ ಒಂದು ಸೇಬು ಸೇವಿಸಿದೊಡನೆಯೇ ಹಸಿವು ಇಂಗಿ ಹೋಗುತ್ತದೆ. ಇದರಿಂದ ಬೊಜ್ಜು ಕರಗುತ್ತದೆ. ಅಲ್ಲದೆ, ದೇಹದ ತೂಕವೂ ಇಳಿಕೆಯಾಗಲು ಸಹಕಾರಿಯಾಗುತ್ತದೆ.

ಕರಗುವ ಫೈಬರ್ ಅಂಶವಿರುವ ಹಿನ್ನೆಲೆಯಲ್ಲಿ ಕೊಬ್ಬಿನಾಂಶವೂ ಕರಗುತ್ತದೆ. ಇದರಿಂದ ನಿಯತವಾಗಿ ಸೇಬು ಸೇವನೆ ರಕ್ತದೊತ್ತಡವನ್ನು ಕಡಿಮೆ ಮಾಡುತ್ತದೆ.

ಅಂತೆಯೇ, ಇದು ಹೃದ್ರೋಗ ತಡೆಗೆ ಉತ್ತಮ ಚಿಕಿತ್ಸೆಯೇ ಆಗಬಲ್ಲದು. ಪಾಲಿ ಫಿನಾಲ್ ಅಂಶವಿರುವುದರಿಂದ ವಾರಕ್ಕೊಮ್ಮೆ ಸೇಬಿನ ಸೇವನೆ ಮಧುಮೇಹದಿಂದ ಬಳಲುತ್ತಿರುವವರಿಗೆ ಮಧುಮೇಹದ ಪ್ರಮಾಣವನ್ನೂ ಕಡಿಮೆ ಮಾಡಿ ಲವಲವಿಕೆಯಿಂದ ಇರಲು ಪ್ರೇರೇಪಿಸುತ್ತದೆ. ಸೇಬು ಸೇವನೆಯಿಂದ ದೇಹವನ್ನು ಸದೃಢವಾಗಿರಿಸಿಕೊಳ್ಳಲು ಅನುಕೂಲವಾಗುತ್ತದೆ. ಕೆಲವು ರೀತಿಯ ಕ್ಯಾನ್ಸರ್‌ಗೂ ಸೇಬು ಸೇವನೆ ರೋಗ-ನಿರೋಧಕ ಶಕ್ತಿಯನ್ನು ವೃದ್ಧಿಸುತ್ತದೆ. ಆಸ್ತಮಾ ರೋಗಿಗಳಿಗೂ ಸೇಬು ಸೇವನೆ ಉತ್ತಮ ಆರೋಗ್ಯ ಕರುಣಿಸುತ್ತದೆ. ಮೆದುಳಿನ ಆರೋಗ್ಯಕ್ಕೂ ಸೇಬು ಸೇವನೆ ಅತ್ಯಂತ ಸಹಕಾರಿ.

ಸೇಬು ಹಣ್ಣುಗಳನ್ನು ತೊಳೆಯದೇ ಇದ್ದರೆ, ಅವುಗಳನ್ನು ರೆಫ್ರಿಜಿರೇಟರ್‌ನಲ್ಲಿ ಅಥವಾ ಶೀತಲ ಗೃಹಗಳಲ್ಲಿ ಇಟ್ಟು ಕೆಲವು ವಾರಗಳವರೆಗೆ ಸಂರಕ್ಷಿಸಬಹುದು. ಸೇಬಿನ ಹಣ್ಣು ಸಂರಕ್ಷಿಸುವಾಗ ಪ್ರತಿ ಹಣ್ಣನ್ನೂ ಪ್ರತ್ಯೇಕವಾಗಿ ಕಾಗದದಲ್ಲಿ ಸುತ್ತಿ ಇಟ್ಟಲ್ಲಿ ಎರಡು ತಿಂಗಳಾದರೂ ಹಣ್ಣು ತಾಜಾ ಹಣ್ಣಾಗಿಯೇ ಇರುತ್ತದೆ. ಶೀತಲೀಕರಣ ವ್ಯವಸ್ಥೆಯಲ್ಲಿ ದೀರ್ಘ ಕಾಲ ಇಟ್ಟಲ್ಲಿ, ಹಣ್ಣಿನಲ್ಲಿ ಕಲೆಗಳು ಮೂಡುತ್ತವೆ. ಹಣ್ಣುಗಳು ಸುಕ್ಕು ಕಟ್ಟುತ್ತವೆ. ಆರೋಗ್ಯದ ದೃಷ್ಟಿಯಲ್ಲಿ ಅಂತಹ ಹಣ್ಣುಗಳನ್ನು ಸೇವಿಸುವುದು ಸೂಕ್ತವಲ್ಲ.

ಕೇವಲ ಒಂದು ವರ್ಷದ ಅವಧಿಯಲ್ಲಿ ಸೇಬು ಸಸಿಗಳು ಗಿಡಗಳಾಗಿ ಬೆಳೆದು ಹೂವು ಬಿಟ್ಟಾಗ ಸಂತಸ ಪಟ್ಟ ಕಾರ್ತಿವೀರ ಅವರು ಗಿಡಗಳು ಗಗನದತ್ತ ಮುಖಮಾಡಿ ಎತ್ತರಕ್ಕೆ ಬೆಳೆದರೆ ಹಣ್ಣುಗಳನ್ನು ಕುಯ್ಯುವುದು ಕಷ್ಟವಾಗುತ್ತದೆ ಎಂದು ಭಾವಿಸಿ, ಕೊಂಬೆಗಳನ್ನು ಬಾಗಿಸಿ ಹರವು ವಿಸ್ತಾರಗೊಳ್ಳುವಂತೆ ಮಾಡಿದ್ದಾರೆ. ಇದರಿಂದ ಮೊದಲ ಫಸಲಲ್ಲಿ ಸ್ವಾದಿಷ್ಟ ಹಣ್ಣುಗಳು ಕೈಗೆಟುಕುವಂತಾಗಿದೆ. ಶೀತಲ ವಾತಾವರಣದಲ್ಲಿಯೇ ಬೆಳೆಯುವ ಬೆಳೆ ಸೇಬು ಎಂಬ ಪರಿಕಲ್ಪನೆಯೂ ಹುಸಿಯಾಗಿದೆ.

ಎರಡು ಕೃಷಿ ಹೊಂಡಗಳಿರುವ ಈ ಜಮೀನಿನಲ್ಲಿ ಸೇಬು ಬೆಳೆ ಜೊತೆಗೆ ಅಗಸೆ, ನುಗ್ಗೆ, ತೆಂಗು, ಅಡಿಕೆ, ಮಾವು, ದಾಳಿಂಬೆ ಹೀಗೆ ಸಸ್ಯ ವೈವಿಧ್ಯವನ್ನೇ ಬೆಳೆಯಲಾಗುತ್ತಿದೆ. ಮುಂದಿನ ವರ್ಷದಿಂದ ಒಂದು ಗಿಡಕ್ಕೆ ಕನಿಷ್ಠ ಒಂದು ನೂರು ಕೆ.ಜಿ ಸೇಬು ಬೆಳೆಯನ್ನು ನಿರೀಕ್ಷಿಸಲಾಗುತ್ತಿದ್ದು, ಮೂರು ವರ್ಷದ ನಂತರ ಒಂದು ಗಿಡಕ್ಕೆ ನಾಲ್ಕು ನೂರರಿಂದ ಐದು ನೂರು ಕೆ.ಜಿ ಸೇಬು ದೊರೆಯುತ್ತದೆ ಎಂದು ಕಾರ್ತಿವೀರ ಅಂದಾಜಿಸಿದ್ದಾರೆ. ರಾಜ್ಯದಲ್ಲಿಯೇ ಸೇಬು ಬೆಳೆ ವಿಪುಲವಾಗಿ ಬೆಳೆದರೆ, ಸಾರಿಗೆ ವೆಚ್ಚದಲ್ಲಿ ತೀವ್ರ ಕಡಿತ ಉಂಟಾಗಿ, ಮಾರುಕಟ್ಟೆಯಲ್ಲಿ ಇದೀಗ ಮಾರಾಟವಾಗುತ್ತಿರುವ ಸೇಬು ಬೆಲೆ ಅರ್ಧಕ್ಕೆ ಅರ್ಧ ಕಡಿಮೆಯಾಗುತ್ತದೆ ಇದರಿಂದ ನಮ್ಮ ರಾಜ್ಯದ ರೈತರಿಗೂ ಲಾಭ. ರಾಜ್ಯದ ಗ್ರಾಹಕರಿಗೂ ಅನುಕೂಲ ಎಂಬುದು ಈ ಸಾಹಸೀ ರೈತನ ಅನಿಸಿಕೆ.

ಅಂತೆಯೇ, ಚಿಕ್ಕಬಳ್ಳಾಪುರ ಜಿಲ್ಲೆಯ ಮರಳುಕುಂಟೆ ಗ್ರಾಮದ ಜಿ. ಎನ್. ನಾರಾಯಣಸ್ವಾಮಿ ಎಂಬ ರೈತ ಕೂಡಾ ಸೇಬು ಕೃಷಿಯಲ್ಲಿ ತೊಡಗಿ ಯಶ ಕಂಡಿದ್ದಾರೆ ಎಂಬ ಮಾಹಿತಿಯೂ ಲಭ್ಯವಾಗಿದೆ. ಇವೆಲ್ಲವೂ ಸೇಬು ಬೆಳೆ ವಿಸ್ತಾರವಾಗುತ್ತಿದೆ ಎಂಬುದಕ್ಕೆ ಸೂಚಕ.

ಶೃಂಗಾರದಿಂದ ಆಹಾರದವರೆಗೆ ಬಳಸಲಾಗುವ ಸೇಬು ಮುಂದಿನ ದಿನಗಳಲ್ಲಿ ರಾಜ್ಯದ ಕೃಷಿಕರಿಗೆ ವರದಾನವಾಗಲಿದೆ ಎಂಬ ವಿಶ್ವಾಸ ಕೃಷಿ ತಜ್ಞರಲ್ಲೂ ಇದೆ. ರೈತರ ಒಂದೆರಡು ಸಾಹಸಗಾಥೆಗಳು ಇತರೆ ರೈತರಿಗೆ ತಿಳಿದಲ್ಲಿ ಸ್ವಾದಿಷ್ಟ ಸೇಬು ಎಲ್ಲಾ ಜಮೀನುಗಳಲ್ಲಿಯೂ ನೆಲೆ ಕಂಡುಕೊಂಡು ರೈತರ ಆರ್ಥಿಕತೆಯನ್ನೂ ಬಲಿಷ್ಠವಾಗಿ ಬೆಳೆಸಲಿದೆ.

ಕಾರ್ತಿವೀರರಂತಹ ಪ್ರಗತಿಪರ ರೈತರಿಂದ ಸೇಬು ಬೆಳೆಯಲ್ಲಿ ಶಿರಾ ಆಗಲಿದೆಯೇ ಕಾಶ್ಮೀರ ? ಅಂತೆಯೇ, ಕರ್ನಾಟಕವೂ ಆಗಲಿದೆಯೇ ಸೇಬಿನ ತವರು ? ಎಂಬ ನಮ್ಮ ಸಹಜ ಪ್ರಶ್ನೆಗಳಿಗೆ ಕೆಲವೇ ವರ್ಷಗಳಲ್ಲಿ ನಾವು ಉತ್ತರವನ್ನು ಕಾಣಬಹುದಾಗಿದೆ.



Downloaded From:www.kpscvaani.com



# ಹಸಿರ ಯೋಗಿ ಈರಣ್ಣ ಕೋಸಗಿ

ಈರಣ್ಣ ಬೆಂಗಾಲಿ

**ರಾಯಚೂರನ್ನು ಮಲೆನಾಡಿನ ಪರಿಸರವನ್ನಾಗಿಸುವ ನಿಟ್ಟಿನಲ್ಲಿ ಕರ್ಮ ಯೋಗಿಯಂತೆ ಪರಿಸರ ಸಂರಕ್ಷಣೆಯಲ್ಲಿ ತೊಡಗಿರುವ ಈರಣ್ಣ ಕೋಸಗಿ ಅವರ ಸಾಮಾಜಿಕ ಕಾರ್ಯದ ಸಾಹಸಗಾಥೆ.**

ಪರಿಸರ ಮಾಲಿನ್ಯ ಇಂದು ಮಿತಿಮೀರಿ ಹೆಚ್ಚಾಗಿದ್ದು ಅದರ ಪರಿಣಾಮದಿಂದಲೇ ಇಂದು ನಾವೆಲ್ಲ ಮುಖಕ್ಕೆ ಮಾಸ್ಕ್ ಹಾಕಿಕೊಂಡು ಓಡಾಡುತ್ತಿದ್ದೇವೆ. ಅತಿ ಶೀಘ್ರದಲ್ಲಿ ಬೆನ್ನಿಗೆ ಆಮ್ಲಜನಕದ ಸಿಲಿಂಡರ್ ಹಾಕಿಕೊಂಡು ಕೃತಕ ಆಮ್ಲಜನಕದಿಂದ ಉಸಿರಾಡುವ ಪರಿಸ್ಥಿತಿ ಎದುರಾಗುವುದರಲ್ಲಿ ಯಾವುದೇ ಅನುಮಾನವಿಲ್ಲ. ಇದಕ್ಕೆಲ್ಲಾ ಕಾರಣ ಪರಿಸರನಾಶ. ಹಾಗಾಗಿ ವಿವಿಧ ರೀತಿಯ ಮಾಲಿನ್ಯಗಳಿಂದ ನಾವು ಹಲವು ರೋಗಗಳಿಂದ ನರಳುತ್ತಿದ್ದೇವೆ.

ಜ್ವಲಂತ ಉದಾಹರಣೆ ಎಂಬಂತೆ ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ವಾಯು ಮಾಲಿನ್ಯ ಮಾರಕವಾಗಿದೆ. ರಾಜ್ಯ ರಾಜಧಾನಿ ಬೆಂಗಳೂರು ಪರಿಸ್ಥಿತಿಯೂ ಇದಕ್ಕಿಂತ ಹೊರತಾಗಿಲ್ಲ. ಇದಕ್ಕೆಲ್ಲಾ ಕಾರಣ ಮನುಷ್ಯನ ವಿವಿಧ ಚಟುವಟಿಕೆಗಳು. ಆಧುನಿಕತೆ, ನಾಗರೀಕತೆ, ತಂತ್ರಜ್ಞಾನದ ನಾಗಾಲೋಟದಲ್ಲಿ ಮುಂದುವರೆಯುತ್ತಿರುವ ನಾವೆಲ್ಲ ಅಷ್ಟೇ ವೇಗದಲ್ಲಿ ಪರಿಸರಕ್ಕೆ ಧಕ್ಕೆಯನ್ನು ತರುತ್ತಿದ್ದೇವೆ. ಜನಸಂಖ್ಯೆ ಹೆಚ್ಚಾದಂತೆಲ್ಲಾ ಕಾಡು ನಾಶ, ಗಿಡಮರಗಳ ಕಡಿತ ಹೆಚ್ಚುತ್ತಲೇ ಇದೆ. ಹೀಗಿರುವಾಗ ಕೇವಲ ಪ್ರಾಣಿ–ಪಕ್ಷಿಗಳು ಅಳಿವಿನಂಚಿನಲ್ಲಿವೆ ಎಂದರೆ ತಪ್ಪಾಗುತ್ತದೆ. ಇದರ ಜೊತೆ ಮನುಕುಲವು ಸಹ ಅಳಿವಿನಂಚಿನಲ್ಲಿದೆ ಎಂದು ಖಚಿತವಾಗಿ ಹೇಳಬಹುದು. ಇದರಿಂದ ಪಾರಾಗಲು ನಾವು ಜಾಗೃತಗೊಳ್ಳಬೇಕಾಗಿದೆ. ಗಿಡಮರಗಳ ಬೆಳಸಬೇಕಾಗಿದೆ, ಉಳಿಸಬೇಕಾಗಿದೆ.



Downloaded From:www.kpscvaani.com

ಇನ್ನು ಉತ್ತರ ಕರ್ನಾಟಕದ ಬಿಸಿಲೂರು ಎಂದೇ ಕರೆಯಲ್ಪಡುವ ರಾಯಚೂರಿನಲ್ಲಿ ಹೇಳಿ ಕೇಳಿ ತುಂಬಾ ಬಿಸಿಲು. ಇಲ್ಲಿ ಇರುವುದು ಎರಡೇ ಕಾಲ. ಒಂದು ಬೇಸಿಗೆ ಕಾಲ, ಮತ್ತೊಂದು ಕಡುಬೇಸಿಗೆ ಕಾಲ. ಇದರೊಂದಿಗೆ ಪರಿಸರದಲ್ಲಿನ ಗಿಡಮರಗಳ ನಾಶದಿಂದಾಗಿ ಬಿಸಿಲು ಮತ್ತಷ್ಟು ಹೆಚ್ಚುತ್ತಲಿದೆ. ಇದಕ್ಕೆ ಪರಿಹಾರವಾಗಿ ರಾಯಚೂರಿನ ಈರಣ್ಣ ಕೋಸಗಿ ಎಂಬುವವರು ಪರಿಸರ ರಕ್ಷಣೆಗೆ ಕಟಿಬದ್ಧರಾಗಿ ನಿಂತಿದ್ದಾರೆ.

ಈರಣ್ಣ ಕೋಸಗಿ ಕಳೆದ 13 ವರ್ಷಗಳಿಂದ ಸದ್ದಿಲ್ಲದೆ ಗಿಡಮರಗಳ ಪೋಷಣೆ ಮಾಡುತ್ತಾ ಹಸಿರು ಸೇವೆ ಮಾಡುತ್ತಿದ್ದಾರೆ. ಸಸಿಗಳನ್ನು ನೆಡುವುದು, ಅವುಗಳಿಗೆ ನೀರುಣಿಸುವುದು, ನಿರ್ವಹಣೆ ಮಾಡುವುದು ಸೇರಿದಂತೆ ಪರಿಸರ ಸಂರಕ್ಷಣೆಯ ಕಾರ್ಯದಲ್ಲಿ ನಿರತರಾಗಿದ್ದಾರೆ. 43 ವರ್ಷದ ಈರಣ್ಣ ಅವರಿಗೆ ಪರಿಸರ, ಗಿಡಮರ, ಪ್ರಾಣಿ–ಪಕ್ಷಿಗಳಲ್ಲಿ ಹೆಚ್ಚು ಆಸಕ್ತಿ ಇದ್ದು, ಅವುಗಳ ರಕ್ಷಣೆಗೆ ಮುಂದಾಗಿದ್ದಾರೆ. ಆ ಮೂಲಕ ಬಿಸಿಲೂರ ರಾಯಚೂರನ್ನು ಮಲೆನಾಡಾಗಿ ಪರಿವರ್ತನೆ ಮಾಡಲು ಪಣ ತೊಟ್ಟಿದ್ದಾರೆ.


ರಾಯಚೂರು ನಗರದ ಸುತ್ತಮುತ್ತ ಅಲ್ಲದೇ ವಿವಿಧ ಗ್ರಾಮಗಳಲ್ಲೂ ಈರಣ್ಣ ಕೋಸಗಿಯವರು ಸಾವಿರಾರು ಸಸಿಗಳನ್ನು ನೆಟ್ಟಿದ್ದಾರೆ. ಅವುಗಳೆಲ್ಲ ಈಗ ಮರಗಳಾಗಿ ನಿಂತಿವೆ. ಇವನ್ನು ಕಂಡಾಗ ಈರಣ್ಣ ಅವರು ಅತೀವ ಸಂತಸ ಪಡುತ್ತಾರೆ. ಈರಣ್ಣ ಅವರು ನೆಟ್ಟಿದ ಸಸಿಗಳನ್ನು ಅವರು ಲೆಕ್ಕವಿಟ್ಟಿಲ್ಲ.

ಚಿಕ್ಕಂದಿನಿಂದಲೇ ಪರಿಸರದ ಬಗ್ಗೆ ಅಪಾರ ಕಾಳಜಿ ಹೊಂದಿದ್ದ ಈರಣ್ಣ ಅವರಿಗೆ ಶಾಲೆ ಓದುವಾಗಲೇ ಗಿಡಗಳನ್ನು ನೆಡುವ ಆಲೋಚನೆ ಬಂದಿತ್ತಂತೆ. ಮೊದ ಮೊದಲು ಗಿಡಮರಗಳ ಬೀಜಗಳನ್ನು ಬಯಲಲ್ಲಿ ಬಿತ್ತಿ ಬರುತ್ತಿದ್ದರು. ಆದರೆ ಬೀಜವು ಮೊಳಕೆಯೊಡೆದು ಕೆಲ ದಿನದಲ್ಲೇ ಅದು ಬಾಡಿ ಹೋಗುತ್ತಿತ್ತು. ಇದನ್ನು ಕಂಡ ಈರಣ್ಣ ಅವರು ಬೀಜಗಳಿಂದ ಗಿಡಮರಗಳನ್ನು ಬೆಳೆಸುವುದು ಬೇಡ, ನೇರವಾಗಿ ಸಸಿಗಳನ್ನು ನೆಡುವುದು ಉತ್ತಮ ಎಂದು ಮನಗಂಡು ಅಂದಿನಿಂದ ಇಂದಿನವರೆಗೂ ಅವಿರತವಾಗಿ ಸಸಿಗಳನ್ನು ನೆಡುತ್ತಾ, ಅವುಗಳನ್ನು ಪೋಷಿಸುತ್ತಾ, ಸಂರಕ್ಷಿಸುತ್ತಾ ಸಾಗಿದ್ದಾರೆ.



### ಅವರಿಲ್ಲ ಸಸಿ ನೆಡೋಕೆ ಹೋಗಿದ್ದಾರೆ ಸಾರ್!

ಅಚ್ಚರಿಯ ಸಂಗತಿ ಎಂದರೆ ಈರಣ್ಣ ಕೋಸಗಿ ಮೊಬೈಲ್ ಹೊಂದಿಲ್ಲ. ಮನೆಯಲ್ಲಿ ಒಂದು ಪೋನ್ ಇದೆ. ಅದು ಕೂಡ ಬೇಸಿಕ್ ಸೆಟ್ ಆಗಿದೆ. ಆದ್ದರಿಂದ ಈರಣ್ಣ ಕೋಸಗಿ ಅವರಿಗೆ ಕರೆ ಮಾಡಿದರೆ ಅದು ಮನೆಯಲ್ಲಿ ಇರುತ್ತದೆ. ಆದ್ದರಿಂದ ಅವರ ಮನೆಯವರು ಫೋನ್ ಎತ್ತಿ "ಅವರು ಮನೆಯಲ್ಲಿ ಇಲ್ಲ ಸಸಿ ನೆಡೋಕೆ ಹೋಗಿದ್ದಾರೆ ಎಂಬ ಉತ್ತರ ಮಡದಿ ರಾಜೇಶ್ವರಿಯವರಿಂದ ಸಾಮಾನ್ಯವಾಗಿ ಕೇಳಿ ಬರುತ್ತದೆ.





Downloaded From:www.kpscvaani.com




**ಸ್ವಾಭಿಮಾನಿ!**

ಇವರ ಸೇವೆಯನ್ನು ಪರಿಗಣಿಸಿ ಹಲವಾರು ಸಂಘ-ಸಂಸ್ಥೆಗಳು ಪ್ರಶಸ್ತಿ-ಪುರಸ್ಕಾರ ನೀಡಲು ಮುಂದೆ ಬಂದಾಗ, ನಾನು ಪ್ರಶಸ್ತಿ ಪುರಸ್ಕಾರಗಳಿಗಾಗಿ ಸೇವೆ ಮಾಡುತ್ತಿಲ್ಲ. ನಾನು ಹಸಿರುಗಾಗಿ ಸೇವೆ ಮಾಡುತ್ತಿದ್ದೇನೆ ಎಂದು ನಯವಾಗಿ ಪ್ರಶಸ್ತಿ ಸನ್ಮಾನಗಳನ್ನು ನಿರಾಕರಿಸುತ್ತಾರೆ.

ಹಸಿರು ಕಾರ್ಯದಲ್ಲಿ ನೆರವು-ಸಹಾಯ-ಸಹಕಾರ ಬಯಸದ ಈರಣ್ಣ ಕೋಸಗಿ ತನ್ನ ಉಳಿತಾಯದ ಹಣದಿಂದಲ್ಲೇ ಖರ್ಚು ನಿಭಾಯಿಸುತ್ತಾರೆ. ಜನರು, ಸಂಘ-ಸಂಸ್ಥೆಗಳು ಕೊಡಮಾಡುವ ಹಣಕ್ಕಾಗಿ ಎಂದೂ ಕೈ ಚಾಚಿದವರಲ್ಲ. ಹಾಗೊಮ್ಮೆ ಹಣ ಬಲವಂತದಿಂದ ಪಡೆದರೂ ಅದನ್ನು ಸಸಿ ಕೊಳ್ಳುವುದಕ್ಕೆ ಖರ್ಚು ಮಾಡುತ್ತಾರೆ. ಹೀಗೆ ತೀರಾ ಸ್ವಾಭಿಮಾನಿಯಾದ ಈರಣ್ಣ ಇಂದಿಗೂ ತಮ್ಮ ತನವನ್ನು ಉಳಿಸಿಕೊಂಡಿದ್ದಾರೆ.

**ಬೆಳಗ್ಗೆಯಿಂದಲೇ ಪರಿಸರ ರಕ್ಷಣೆ ಆರಂಭ**

ಅತಿ ನಿದ್ರೆ ಮಾಡದೇ ಯತಿ ನಿದ್ರೆ ಮಾಡುವ ಪರಿಸರ ಪ್ರೇಮಿ ಈರಣ್ಣ ಅವರ ಹಸಿರು ಸೇವೆ ಬೆಳಗ್ಗೆ 6.30ರಿಂದಲೇ ಆರಂಭವಾಗುತ್ತದೆ. ರಾತ್ರಿ ಬೇಗ ಅಂದರೆ ಎಂಟು ಗಂಟೆ ಹೊತ್ತಿಗೆ ಮಲಗುತ್ತಾರೆ. ಬೆಳಿಗ್ಗೆ ನಾಲ್ಕು ಗಂಟೆಗೆ ಏಳುತ್ತಾರೆ. ನಿತ್ಯಕರ್ಮ ಮುಗ್ಗಿಸಿಕೊಂಡು ಗುದ್ದಲಿ, ಸಲಿಕೆ, ಸಸಿಗಳನ್ನು ತೆಗೆದುಕೊಂಡು ಹೊರಡುತ್ತಾರೆ. ಹತ್ತು ಗಂಟೆವರೆಗೆ ಸಸಿ ನೆಡುವ ಕೆಲಸವನ್ನು ಮಾಡಿದ ನಂತರ ಮನೆಯಂಗಳದ, ದೇವಸ್ಥಾನದ ಆವರಣದ ಸಸಿಗಳಿಗೆ ನೀರುಣಿಸುತ್ತಾರೆ. ಅನಂತರ ತಮ್ಮ ಜೀವನೋಪಾಯದ ಕಾರ್ಯಗಳಲ್ಲಿ ತೊಡಗುತ್ತಾರೆ. ಈ ಮಧ್ಯೆ ಅಲ್ಲಿ ಗಿಡ ಬಿದ್ದುಹೋಗಿದೆ ಎಂದು ಯಾರದರೂ ಹೇಳಿದರೆ ತಕ್ಷಣ ಹೋಗಿ ಅದನ್ನು ಸರಿ ಪಡಿಸುವ ಕಾಯಕವನ್ನು ಮಾಡುತ್ತಾರೆ. ಒಟ್ಟಿನಲ್ಲಿ ಹಸಿರುಗಾಗಿ ಸದಾ ಸಿದ್ಧರಾಗಿರುತ್ತಾರೆ.

ನೆಲ ಅಗೆಯುವ ಗುದ್ದಲಿ, ಸಲಿಕೆ, ತೇಪೆ, ಸಸಿ ಪಾಕೇಟ್ ಕತ್ತರಿಸುವ ಬ್ಲೇಡ್, ನಾಲ್ಕೈದು ಸಸಿಗಳನ್ನು ತಮ್ಮ ಸೈಕಲ್‌ನಲ್ಲಿ ಇಟ್ಟುಕೊಂಡು ಪರಿಸರ ಸಮಾಜ ಸೇವೆಗೆ ಹೊರಡುತ್ತಾರೆ. ಈಗೀಗ ದೂರದ ಸ್ಥಳದಲ್ಲಿ ಸಸಿಗಳನ್ನು ನೆಡಲು ಹೋಗುವುದಕ್ಕೆ ಸ್ನೇಹಿತನ ದ್ವಿಚಕ್ರವಾಹನವನ್ನು ಮತ್ತು ಹೆಚ್ಚು ಹೆಚ್ಚು ಸಸಿಗಳಿದ್ದರೆ ಆಟೋವನ್ನು ಅವಲಂಬಿಸುತ್ತಾರೆ.

ಈರಣ್ಣ ಅವರು ಪ್ರತಿನಿತ್ಯವು ಹಸಿರು ಕಾಯಕವನ್ನು ಮಾಡುತ್ತಿದ್ದು, ವಿಶೇಷವೆಂದರೆ ಹಸಿರುಗಾಗಿ ದಿನದ ಇಪ್ಪತ್ನಾಲ್ಕು ಗಂಟೆಯು ಸಿದ್ಧರಿರುತ್ತಾರೆ. ಒಂದು ದಿನವೂ ವಿಶ್ರಾಂತಿ ಮಾಡದೇ ಅನುದಿನವೂ ಪರಿಸರ ಸಂರಕ್ಷಣೆ ಮಾಡುತ್ತಿದ್ದಾರೆ. ಹಸಿರು ಕಾರ್ಯ ಮಾಡುವಾಗ ರಾತ್ರಿಯಾದರೂ ಕೆಲಸ ಮುಗಿಸಿಯೇ ಹೊರಡುತ್ತಾರೆ. ಆಗಲೇ ಅವರಿಗೆ ತೃಪ್ತಿ.

ಪರಿಸರದ ಮಹತ್ವವನ್ನು ಅರಿತ ಈರಣ್ಣ ಕೋಸಗಿ ಅವರು ಸಸಿ ನೆಡುವುದನ್ನು ರಾಯಚೂರು ನಗರ ಸೇರಿದಂತೆ ಗ್ರಾಮೀಣ ಪ್ರದೇಶಗಳಲ್ಲೂ ವಿಸ್ತರಿಸಿಕೊಂಡಿದ್ದಾರೆ. ರಾಯಚೂರು ನಗರದ ವಿವಿಧ ಬಡಾವಣೆ, ಶಾಲೆ-ಕಾಲೇಜು, ದೇವಸ್ಥಾನ, ಮಸೀದಿ, ಚರ್ಚ್, ವಿವಿಧ ಕಛೇರಿಗಳ ಆವರಣ ಸೇರಿದಂತೆ ನಗರದ ಹೊರವಲಯದ ಗುಡ್ಡಗಾಡು ಪ್ರದೇಶಗಳಲ್ಲೂ ಸಸಿಗಳನ್ನು ನೆಟ್ಟು ಪೋಷಿಸುತ್ತಿದ್ದಾರೆ. ಇನ್ನು ರಾಯಚೂರು ಗ್ರಾಮೀಣ ಪ್ರದೇಶಗಳಾದ ಮಮದಾಪುರ, ಮರ್ಚೆಡ್, ಹೊಸೂರು, ದಿನ್ನಿ, ವಡವಾಟಿ, ಜಾಲಿಬೆಂಚಿ, ಕಟ್ಲಕೂರು, ಮನ್ಸಲಾಪುರ ಸೇರಿದಂತೆ ಅನೇಕ ಹಳ್ಳಿಗಳಿಗೆ ತೆರಳಿ ಅನೇಕ ಸಸಿಗಳನ್ನು ನೆಟ್ಟಿದ್ದಾರೆ. ಅವುಗಳೆಲ್ಲ ಈಗ ಮರಗಳಾಗಿ ಬೆಳೆದಿವೆ.

**ಗುಡ್ಡಗಾಡು ಪ್ರದೇಶದಲ್ಲೂ ಹಸಿರು ಕಾರ್ಯ**

ರಾಯಚೂರು ನಗರದ ಆಕಾಶವಾಣಿ ಕೇಂದ್ರದ ಹಿಂದುಗಡೆ ಇರುವ ಗುಡ್ಡಗಾಡು ಪ್ರದೇಶದಲ್ಲಿ ನೂರಾರು ಸಸಿಗಳನ್ನು ನೆಟ್ಟಿದ್ದಾರೆ. ಅರಣ್ಯ ಪ್ರದೇಶವಾದ ಇದರಲ್ಲಿ ನೆಟ್ಟ ಸಸಿಗೆ ನೀರುಣಿಸುತ್ತಾರೆ. ಅರಣ್ಯ ಪ್ರದೇಶದಲ್ಲಿ ಅರಣ್ಯ ಇಲ್ಲದಿರುವುದನ್ನು ಕಂಡು, ಬೇಸರಗೊಂಡು ತಾವೇ ಒಂದು ಅರಣ್ಯ ಬೆಳೆಸೋಣ ಎಂದು ದೃಢ ನಿರ್ಧಾರ ಕೈಗೊಂಡು ಸಸಿಗಳನ್ನು ನೆಟ್ಟು ಪೋಷಿಸುತ್ತಿದ್ದಾರೆ. ಅರಣ್ಯ ಜಾಗವನ್ನು ಒತ್ತುವರಿ ಮಾಡುತ್ತಿರುವುದನ್ನು ತೀವ್ರವಾಗಿ ವಿರೋಧಿಸುತ್ತಾರೆ ಈರಣ್ಣ ಕೋಸಗಿ.

**ನೀರಿಗಾಗಿ ಚಿಲುಮೆ ತೋಡಿದರು**

ನೆಟ್ಟ ಸಸಿಗಳಿಗೆ ನೀರುಣಿಸಲು



Downloaded From:www.kpscvaani.com

ಗುಡ್ಡಗಾಡು ಪ್ರದೇಶದಲ್ಲೇ ಭೂಮಿ ಅಗೆದು ಚಿಲುಮೆಯೊಂದನ್ನು ಮಾಡಿ, ಆ ಚಿಲುಮೆಯಿಂದ ಸಸಿಗಳಿಗೆ ನೀರು ಹಾಕುತ್ತಿದ್ದರು. ಬೇಸಿಗೆಯಲ್ಲಿ ಪ್ರಾಣಿ, ಪಕ್ಷಿಗಳು ತಮ್ಮ ಬಾಯಾರಿಕೆಯನ್ನು ಈ ಚಿಲುಮೆಯಿಂದ ತಣಿಸಿಕೊಂಡಿರುವುದನ್ನು ಕಂಡು ಸಂತಸ ಪಟ್ಟಿದ್ದಾರೆ. ಆದರೆ ರಾಯಚೂರಿನಲ್ಲಿ ಕಳೆದ ಎರಡು ವರ್ಷಗಳ ಭೀಕರ ಬರದಿಂದಾಗಿ ನೀರು ಇಲ್ಲದಂತಾಗಿ, ನೆಟ್ಟ ಸಸಿಗಳೆಲ್ಲಾ ಒಣಗಿ ಹೋಗುತ್ತಿದ್ದವು. ಆಗ ಈರಣ್ಣ ಜಗ್ಗದೇ ಒಂದು ಗುಂಡಿಯನ್ನು ತೋಡಿ, ನೀರಿನ ಟ್ಯಾಂಕನ್ನು ತರಿಸಿ, ತೋಡಿದ ಗುಂಡಿಯಲ್ಲಿ ನೀರು ಸುರಿಯುತ್ತಾರೆ. ಆ ನೀರನ್ನು ದಿನವೂ ಸಸಿಗಳಿಗೆ ಹಾಕುತ್ತಾರೆ. ಆದರೆ ಬರುಬರುತ್ತಾ ನೀರಿನ ಅಭಾವ ಹೆಚ್ಚಾಗಿ ನೀರಿನ ಟ್ಯಾಂಕರ್ ಸಿಗದೇ ಹಲವು ಗಿಡಗಳು ಒಣಗಿವೆ. ನೂರಾರು ಸಂಖ್ಯೆಯ ಗಿಡಗಳಲ್ಲಿ ಈಗ ಕೆಲವಷ್ಟೇ ಉಳಿದಿರುವುದು ಈರಣ್ಣ ಅವರಿಗೆ ಬೇಸರ ತಂದಿದೆ. ಆದರೂ ಗುಡ್ಡವನ್ನು ಹಸಿರು ಗುಡ್ಡವನ್ನಾಗಿ ಮಾಡಲು ಅವರು ಈಗಲೂ ಸಸಿಗಳನ್ನು ನೆಡುತ್ತಿದ್ದಾರೆ.

### ಸಸಿಗಳ ನರ್ಸರಿ

ನೇರವಾಗಿ ಸಸಿಗಳನ್ನು ತಂದು ನೆಡುವ ಬದಲು ನಾನೇ ಏಕೆ ನರ್ಸರಿ ಮಾಡಬಾರದು ಅಂದುಕೊಂಡು ಮೊದಲಿಗೆ ಮನೆ ಮಹಡಿಯ ಮೇಲೆ 500 ಸಸಿಗಳ ನರ್ಸರಿ ಮಾಡುತ್ತಿದ್ದರು. ಇದರಿಂದ ಮನೆಯ ಮೇಲ್ಛಾವಣಿಯು ತೇವಾಂಶದಿಂದ ಕೂಡಿ, ಬಿರುಕು ಮೂಡಲು ಶುರುವಾಯಿತು. ಇದಕ್ಕೆ ಪರಿಹಾರ ಕಂಡುಕೊಳ್ಳಲು ವಿವಿಧ ಶಾಲೆಗಳಿಗೆ ಹೋಗಿ ಅಲ್ಲಿ ವಿದ್ಯಾರ್ಥಿಗಳಿಂದ ಸಸಿಯ ಪುಟ್ಟ ಚೀಲಗಳಿಗೆ ಮಣ್ಣು ತುಂಬಿಸಿ, ಬೀಜ ನೆಡೆಸಿ ಕೊನೆಗೆ ನೀರು ಹಾಕಿಸಿ ನರ್ಸರಿಯನ್ನು ಮಾಡುವ ತರಬೇತಿ ನೀಡಿದ್ದಾರೆ. ರಾಯಚೂರಿನ ವಿವಿಧ ಹಳ್ಳಿಗಳಿಗೆ ಹೋಗಿ, ಅಲ್ಲಿ ಶಾಲೆಗಳಿಗೆ ತೆರಳಿ ನೂರಾರು ಸಸಿಗಳ ಬೀಜ ಬಿತ್ತನೆ ಮಾಡಿಸಿದ್ದಾರೆ. ನೆಟ್ಟ ಬೀಜಗಳು ಮೊಳಕೆಯೊಡೆದು, ಸಸಿಯಾದ ನಂತರ ಅವುಗಳನ್ನು ಮನೆಮುಂದೆ, ಹೊಲ ಗದ್ದೆಗಳಲ್ಲಿ ನೆಡುವಂತೆ ವಿದ್ಯಾರ್ಥಿಗಳಿಗೆ ತಾಕೀತು ಮಾಡಿದ್ದಾರೆ.

### ಬೀಜ ಮತ್ತು ಮಣ್ಣು ಸಂಗ್ರಹ

ಈರಣ್ಣ ಅವರು ನರ್ಸರಿಗೆ ಬೇಕಾದ ಬೀಜ ಮತ್ತು ಮಣ್ಣನ್ನು ತಾವೆ ಸಂಗ್ರಹಿಸುತ್ತಾರೆ. ತಾವು ಬೆಳೆಸಿದ ಗಿಡಮರಗಳಲ್ಲೇ ಬೀಜಗಳು ಲಭಿಸುತ್ತವೆ. ಬೀಜಗಳನ್ನು ಗಿಡಮರಗಳಿಂದ ಕೆಳಗೆ ಬಿದ್ದ ಬೀಜಗಳನ್ನು ಚೀಲದಲ್ಲಿ ಸಂಗ್ರಹಿಸಿಕೊಂಡು ಬಂದು ಅವುಗಳನ್ನು ಸಂರಕ್ಷಿಸಿ ನರ್ಸರಿಯಲ್ಲಿ ಬೆಳೆಸುತ್ತಾರೆ. ಅಲ್ಲದೆ ಸಸಿಗಳ ನರ್ಸರಿಗೆ ಮಣ್ಣು ತುಂಬಲು ಬೇಕಾದ ಪುಟ್ಟ ಚೀಲಗಳನ್ನು ಈರಣ್ಣ ಅವರು ತಾವೇ ತಯಾರಿಸುತ್ತಾರೆ. ಮಾರುಕಟ್ಟೆಯಿಂದ ಅಕ್ಕಿ, ಜೋಳ, ಸಿಮೆಂಟ್ ಚೀಲಗಳನ್ನು ಕೊಂಡು ತಂದು, ಅವುಗಳನ್ನು ಕತ್ತರಿಸಿ, ಪಾಕೆಟ್ ಆಕಾರದಲ್ಲಿ ತಾವೇ ಕಯ್ಯಾರೆ ಹೊಲಿಯುತ್ತಾರೆ.

### ಸಸಿಗಳಿಗೆ ರಕ್ಷಣಾ ಕವಚ

ಇಷ್ಟು ಕಷ್ಟಪಟ್ಟು ನೆಟ್ಟ ಸಸಿಗಳನ್ನು ಆಡು, ದನಕರುಗಳು ತಿನ್ನುತ್ತವೆ. ತಿನ್ನದೇ ಇರುವ ಸಸಿಗಳನ್ನು ಹಾಕಿದರೂ ದನಕರುಗಳು ಬಂದು ನೆಟ್ಟ ಸಸಿಗೆ ಬಂದು ಮೈ ತಿಕ್ಕುತ್ತವೆ. ಇದ್ದರಿಂದ ಗಿಡ ಹಾಳಾಗುತ್ತವೆ. ದಾರಿಹೋಕರು ಸಹ ಸುಮ್ಮನೆ ಹೋಗದೆ ಸಸಿಗಳನ್ನು ಎಳೆದಾಡುವುದು, ಎಲೆಗಳನ್ನು ಕಿತ್ತುವುದು ಮಾಡುತ್ತಾರೆ. ಇವುಗಳಿಂದ ರಕ್ಷಣೆ ಪಡೆಯಲು ಟ್ರಿ ಗಾರ್ಡ್ ಅಂದರೆ ಸಸಿಗೆ ರಕ್ಷಣಾ ಕವಚ ಅಳವಡಿಸುವುದು ಸೂಕ್ತ. ಈರಣ್ಣ ಕೋಸಗಿ ಅವರು ತಾವು ನೆಟ್ಟ ಅನೇಕ ಸಸಿಗಳಿಗೆ ಕಬ್ಬಿಣದ ಜಾಲಿಯನ್ನು ಅಳವಡಿಸಿದ್ದಾರೆ. ಇದರಿಂದ ಸಸ್ಯಗಳು ಬೆಳೆದು ಗಿಡಮರಗಳಾಗಿ ನಿಂತಿವೆ.

ಈರಣ್ಣ ಅವರದು ಪುಟ್ಟ ಮನೆ, ಇದರಿಂದ ಅರಣ್ಯ ಇಲಾಖೆಯಿಂದ ತಂದ ನೂರಾರು ಸಸಿಗಳನ್ನು ಇಡಲು ಜಾಗವಿಲ್ಲ. ಹೀಗಾಗಿ ಈರಣ್ಣ ಅವರ ಮನೆಯಂಗಳದಲ್ಲಿ ಕೆಲವು ಸಸಿಗಳನ್ನು ಇಟ್ಟಿದ್ದಾರೆ. ಇದರಿಂದ ಮನೆಗೆ ಬಂದ ಅತಿಥಿಗಳನ್ನು ಅವುಗಳೇ ಸ್ವಾಗತಿಸುತ್ತವೆ. ಇನ್ನುಳಿದ ಸಸಿಗಳನ್ನು ಮನೆಮುಂದೆ ಓಣಿಯಲ್ಲಿ ಇರುವ ದೇವಸ್ಥಾನದ ಪುಟ್ಟ ಆವರಣದಲ್ಲಿ ಇಟ್ಟಿರುತ್ತಾರೆ. ಇವುಗಳು ಮುಗಿದ ನಂತರ ಮತ್ತೆ ಸಸಿಗಳನ್ನು ತರಲು ಸಿದ್ಧರಾಗುತ್ತಾರೆ.

### ಅರಣ್ಯ ಇಲಾಖೆಯ ಸಹಕಾರ

ಈರಣ್ಣ ಕೋಸಗಿ ಅವರು ಸಸಿಗಳನ್ನು ಅರಣ್ಯ ಇಲಾಖೆಯ ಸಹಕಾರದಿಂದ ತರುತ್ತಾರೆ. ಸಹಾಯಧನದ ಅಡಿಯಲ್ಲಿ ಕಡಿಮೆ ದರದಲ್ಲಿ ಸಸಿಗಳನ್ನು ಖರೀದಿಸಿ ತಂದರೆ ಕೆಲವು ಸಲ ಅರಣ್ಯ ಇಲಾಖೆಯ ಸಿಬ್ಬಂದಿ ತಮ್ಮ ಲೆಕ್ಕದಲ್ಲಿ ಅಂದರೆ ಅವರೇ ವೆಚ್ಚ ಭರಿಸಿ ಸಸಿಗಳನ್ನು ಕೊಡುತ್ತಾರೆ. ಈರಣ್ಣ ಕೋಸಗಿ ಅಂದರೆ ಅರಣ್ಯ ಇಲಾಖೆಯ ಎಲ್ಲಾ ಸಿಬ್ಬಂದಿಗೆ ಚಿರಪರಿಚಿತರು. ಇವರ ಪ್ರಕೃತಿ ಸೇವೆಯನ್ನು ಕಂಡು ಅವರೂ ಬೆರಗಾಗಿದ್ದಾರೆ. "ನಾವು ನಮ್ಮ ಇಲಾಖೆಯ ಕರ್ತವ್ಯವೆಂದು ಮಾಡುತ್ತೇವೆ. ಆದರೆ ಈರಣ್ಣ ಅವರು ನಮ್ಮಂತೆ ಕೆಲಸ ಮಾಡುತ್ತಿರುವುದು ಶ್ಲಾಘನೀಯ" ಎನ್ನುತ್ತಾರೆ.

ಇನ್ನು ಹೆಚ್ಚು ಸಸಿಗಳನ್ನು ನೆಡುವ ಸಲುವಾಗಿ 'ಒಂದು ಕರೆ, ಒಂದು ಸಸಿ' ಅಭಿಯಾನವನ್ನು ಹಮ್ಮಿಕೊಂಡರು. ಈ ಅಭಿಯಾನದಲ್ಲಿ ಸಾರ್ವಜನಿಕರು ಕೋರಿದ ಜಾಗದಲ್ಲಿ ಸ್ವತಃ ತಾವೇ ಹೋಗಿ ಸಸಿಯನ್ನು ನೆಟ್ಟುಬಂದಿದ್ದಾರೆ. ಕೋರಿಕೆ ಸಲ್ಲಿಸಿದ್ದ ಸಾರ್ವಜನಿಕರೇ ಈ ಗಿಡಗಳನ್ನು ಪೋಷಣೆ ಮಾಡುತ್ತಿರುವುದರಿಂದ ಸಸಿಗಳು ನಳನಳಿಸುತ್ತಿವೆ.

### ಕೃತಕ ಗೂಡುಗಳ ನಿರ್ಮಾಣ

ಹಸಿರಿನ ಜೊತೆಗೆ ಪಕ್ಷಿಗಳ ಬಗ್ಗೆಯೂ ಒಲವನ್ನು ಹೊಂದಿರುವ ಈರಣ್ಣ ಕೋಸಗಿ ಅವುಗಳಿಗಾಗಿ ಕೃತಕ ಗೂಡುಗಳನ್ನು ಕಟ್ಟಿಕೊಟ್ಟಿದ್ದಾರೆ. ದಿನೇ ದಿನೇ ಗಿಡಮರಗಳ ನಾಶದಿಂದಾಗಿ ಪಕ್ಷಿಗಳಿಗೆ ವಾಸಿಸಲು ಗೂಡುಗಳು ಇಲ್ಲದಂತೆ ಆಗುತ್ತಿದೆ. ಇದನ್ನು ಅರಿತ ಈರಣ್ಣ ಪುಟ್ಟ ಗಡಿಗೆಗಳನ್ನು ತಂದು, ಕೊರೆದು ಗೂಡುಗಳಂತೆ ಮಾಡಿ ಅವುಗಳನ್ನು ಗಿಡಮರಗಳಿಗೆ ಕಟ್ಟಿದ್ದಾರೆ. ಇವುಗಳಲ್ಲಿ ಪಕ್ಷಿಗಳು ತಮ್ಮ ಗೂಡನ್ನು ನಿರ್ಮಿಸಿಕೊಂಡಿವೆ.

### ನೀರಿನ ಸದ್ಬಳಕೆ ಮತ್ತು ಪ್ಲಾಸ್ಟಿಕ್ ದುಷ್ಪರಿಣಾಮದ ಬಗ್ಗೆ ಜಾಗೃತಿ

ನೀರು ಪೋಲಾಗುವುದನ್ನು ತಪ್ಪಿಸಲು ಒಡೆದ ಕುಡಿಯುವ ನೀರಿನ ಪೈಪು ಮತ್ತು ನೀರು ಸೋರುತ್ತಿರುವ ಬೀದಿ ನಳಗಳನ್ನು ತಮ್ಮ ಖರ್ಚಿನಲ್ಲೇ ದುರಸ್ತಿ ಮಾಡಿಸುವ ಮೂಲಕ ನೀರು ಪೋಲಾಗುವುದನ್ನು ತಪ್ಪಿಸುತ್ತಾರೆ.

ಪರಿಸರದ ಜ್ವಲಂತ ಸಮಸ್ಯೆಗಳಲ್ಲಿ ಒಂದಾದ ಪ್ಲಾಸ್ಟಿಕ್ ಭಸ್ಮಾಸುರನು ಇಂದು ಇಡೀ ಭೂಗೋಳವನ್ನೇ ನುಂಗುತ್ತಿದ್ದಾನೆ. ಪ್ಲಾಸ್ಟಿಕ್ ಭೂಮಿಗೆ ಸೇರಿ ಹಲವು



Downloaded From:www.kpscvaani.com



ಅವಾಂತರಗಳನ್ನು ಸೃಷ್ಟಿಸುತ್ತಿದೆ. ಪ್ಲಾಸ್ಟಿಕ್‌ನಿಂದ ಭೂಮಿಯಲ್ಲಿ ನೀರು ಇಂಗಲು ಸಾಧ್ಯವಾಗುತ್ತಿಲ್ಲ. ಪ್ಲಾಸ್ಟಿಕ್ ಸುಟ್ಟರೆ ಪರಿಸರ ಮಾಲಿನ್ಯವಾಗುತ್ತದೆ. ಹೀಗೆ ಪ್ಲಾಸ್ಟಿಕ್‌ನಿಂದಾಗುವ ದುಷ್ಪರಿಣಾಮಗಳ ಕುರಿತು ಅವರು ಉಪನ್ಯಾಸ ನೀಡುವುದರ ಮೂಲಕ ಜನರಲ್ಲಿ ಜಾಗೃತಿ ಮೂಡಿಸುತ್ತಿದ್ದಾರೆ.

ಈರಣ್ಣ ಕೋಸಗಿಯವರ ಕೌಟುಂಬಿಕ ವಿಚಾರ ಹೇಳಬೇಕೆಂದರೆ ಅವರಿಗೆ ಮದುವೆಯಾಗಿ ಇಬ್ಬರು ಮಕ್ಕಳಿದ್ದಾರೆ. ಒಬ್ಬ ಮಗ ವಿಶಾಲ್ ಒಂಬತ್ತನೇ ತರಗತಿಯಲ್ಲಿ ಓದುತ್ತಿದ್ದರೆ, ಮಗಳು ಪಲ್ಲವಿ ಪಿ.ಯು.ಸಿ. ದ್ವಿತೀಯ ವರ್ಷದಲ್ಲಿ ಓದುತ್ತಿದ್ದಾಳೆ. ಕುಟುಂಬ ಸಲಹಲು ಈರಣ್ಣ ಅವರು ಪುಟ್ಟ ಗೂಡಂಗಡಿ ಹೊಂದಿದ್ದಾರೆ. ಅಲ್ಲದೇ ಮನೆಯವರು ಟೈಲರಿಂಗ್ ಕಾರ್ಯ ಮಾಡುತ್ತಾರೆ. ಈರಣ್ಣ ಅಡುಗೆಯ ಆರ್ಡರ್ ತಗೆದುಕೊಳ್ಳುತ್ತಾರೆ. ತಾವೇ ಸ್ವತಃ ಅಡುಗೆ ಮಾಡುತ್ತಾರೆ. ಹಪ್ಪಳ, ಅಗರಬತ್ತಿ ತಯಾರಿಸುತ್ತಾರೆ. ಈರಣ್ಣ ಅವರ ಪರಿಸರ ಕಾಳಜಿಯ ಕಾರ್ಯಕ್ಕೆ ಮಡದಿ, ಮಕ್ಕಳು ಸಾಥ್ ನೀಡುತ್ತಿದ್ದಾರೆ. ದುಂದುವೆಚ್ಚ ಇಲ್ಲದ ಸಂಸಾರ ನಮ್ಮದಾಗಿದ್ದು, ಮನೆಯವರ ಬಗ್ಗೆ ಅಪಾರ ಗೌರವವಿದೆ ಎನ್ನುತ್ತಾರೆ ಮಡದಿ ಶ್ರೀಮತಿ ರಾಜೇಶ್ವರಿ. ನಮ್ಮಪ್ಪ ಸಾಲು ಮರದ ತಿಮ್ಮಕ್ಕನ ಸಾಲಿನಲ್ಲಿ ನಿಲ್ಲುತ್ತಾರೆ. ಅಪ್ಪನ ಹಸಿರು ಕಾರ್ಯದಲ್ಲಿ ನಾನೂ ತೊಡಗುವೆ ಎಂದು ಮಗ ವಿಶಾಲ್ ಹೇಳಿದರೆ ಮಗಳು ಪಲ್ಲವಿ ನಮ್ಮಪ್ಪನ ಕಾರ್ಯದಲ್ಲಿ ನಾವೆಲ್ಲರೂ ಕೈ ಜೋಡಿಸಿದರೆ ಮಾತ್ರ ಮತ್ತಷ್ಟು ಹಸಿರನ್ನು ನಾವು ಕಾಣಬಹುದು ಎನ್ನುತ್ತಾರೆ.

**ಸ್ನೇಹಿತರ ಸಾಥ್**

ಈ ಹಸಿರು ಕಾಯಕದಲ್ಲಿ ಅವರ ಸ್ನೇಹಿತರಾದ ಚಂದ್ರಶೇಖರ ಮತ್ತು ಈರಣ್ಣ ಬೆಂಗಾಲಿ ಅವರು ಪರಿಸರ ಪ್ರೇಮಿ ಈರಣ್ಣ ಕೋಸಗಿ ಅವರಿಗೆ ಸಾಥ್ ನೀಡುತ್ತಿದ್ದಾರೆ. ಮೂವರು ಒಟ್ಟಾಗಿ ತೆರಳಿ ಸಸಿಗಳನ್ನು ನೆಡುವುದಲ್ಲದೇ ನೆಟ್ಟ ಸಸಿಗಳ ಪೋಷಣೆಯನ್ನು ಮಾಡುವುದು, ನಗರ ಮತ್ತು ಗ್ರಾಮೀಣ ಶಾಲೆಗಳಿಗೆ ಹೋಗಿ ಸಸಿಗಳನ್ನು ನೆಡುವುದರ ಜೊತೆಗೆ ವಿದ್ಯಾರ್ಥಿಗಳಿಂದ ನರ್ಸರಿ ಮಾಡಿಸುವುದು ಮತ್ತು ಪರಿಸರದ ಮಹತ್ವವನ್ನು ಮಕ್ಕಳಿಗೆ ಮನವರಿಕೆ ಮಾಡಿಕೊಡುತ್ತಿದ್ದಾರೆ. ನಗರದಲ್ಲಿ ಅಷ್ಟೇ ಅಲ್ಲದೆ ಗ್ರಾಮೀಣ ಭಾಗಕ್ಕೆ ಹೋಗಲು ಕರೆ ಮಾಡಿದ ತಕ್ಷಣ ಬರುವ ಈರಣ್ಣ ಕೋಸಗಿ ಅವರ ಸ್ನೇಹಿತರಾದ ಆಟೋ ವೀರೇಶ್ ಮತ್ತು ಆಟೋ ಲಕ್ಷ್ಮಣ ಇವರ ಸಹಕಾರ ಮರೆಯುವಂತಿಲ್ಲ.

**ಸಸಿ ನೆಡುವ ಜೊತೆಗೆ "ಜನಮಿತ್ರ" ಎಂಬ ಸೇವಾ ಸಂಸ್ಥೆಯನ್ನು ಸ್ಥಾಪಿಸಿಕೊಂಡು ಇದರಡಿಯಲ್ಲಿ ಹತ್ತು ಹಲವು ಸಮಾಜ ಮುಖಿ ಕಾರ್ಯಕ್ರಮಗಳನ್ನು ಮಾಡುತ್ತಿದ್ದಾರೆ. ಉಚಿತ ಆರೋಗ್ಯ ಶಿಬಿರ, ರಕ್ತದಾನ, ಬಡ ಮಕ್ಕಳಿಗೆ ಉಚಿತ ಪಠ್ಯಪುಸ್ತಕಗಳ ವಿತರಣೆ, ಉಚಿತ ಕಸದ ಡಬ್ಬಿಗಳ ವಿತರಣೆ ಸೇರಿದಂತೆ ಅನೇಕ ಸಮಾಜಪರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದಾರೆ.**

ರಾಯಚೂರಿನಲ್ಲಿ ಹೇಳಿ ಕೇಳಿ ಎರಡು ವಿದ್ಯುತ್ ಉತ್ಪಾದನಾ ಘಟಕಗಳಿವೆ. ಒಂದು ಕೆ.ಪಿ.ಸಿ ಯಾದರೆ ಮತ್ತೊಂದು ವೈ.ಟಿ.ಪಿ.ಎಸ್. ಆಗಿದೆ. ಇದರಿಂದ ಬಿಸಿಲಿನ ಪ್ರಮಾಣ ತೀವ್ರ ಹೆಚ್ಚಾಗುತ್ತಿದ್ದು, ಪ್ರತಿ ಬೇಸಿಗೆಯಲ್ಲೂ 45 ಡಿಗ್ರಿ ಸೆಲ್ಸಿಯಸ್ ಇರುವುದು ಸಾಮಾನ್ಯವಾಗಿ ಬಿಟ್ಟಿದೆ. ಇದಕ್ಕೆ ಪರಿಹಾರವಾಗಿ ಗಿಡಮರಗಳನ್ನು ಬೆಳೆಸುವ ಮೂಲಕ ವಾತಾವರಣವನ್ನು ಬದಲಾವಣೆ ಮಾಡಲು ಈರಣ್ಣ ಅವರು ಪಣತೊಟ್ಟಿದ್ದಾರೆ.

ಆದರೆ ಕೆಲವು ಸಾರ್ವಜನಿಕ ಸ್ಥಳಗಳಾದ ಅಂಗಡಿ, ಕಛೇರಿಗಳ ಮುಂದೆ ಕಷ್ಟಪಟ್ಟು ನೆಟ್ಟ ಸಸಿಗಳಿಗೆ ಜನರು ನೀರು ಹಾಕದೆ, ಸರಿಯಾಗಿ ಪೋಷಣೆ ಮಾಡುತ್ತಿಲ್ಲ. ಇನ್ನು ಬೇರುಗಳು ನಮ್ಮ ಮನೆಯವರೆಗೆ ಬರುತ್ತವೆ ಎಂದು ಗಿಡಮರಗಳನ್ನು ನಿರ್ದಾಕ್ಷಿಣ್ಯವಾಗಿ ಕಡಿದು ಹಾಕುತ್ತಿರುವುದು ಈರಣ್ಣ ಅವರಿಗೆ ತುಂಬಾ ನೋವನ್ನು ತರಿಸಿದೆ.

ರಾಯಚೂರಿನ ಕೆಂಡದಂತಹ ಬಿಸಿಲಿಗೆ ಗಿಡ, ಮರಗಳ ನಾಶವೇ ಕಾರಣವಾಗಿದೆ. ಆದ್ದರಿಂದ ರಾಯಚೂರಿನ ಜನತೆ ಹಸಿರು ಕಡೆ ಒಲವನ್ನು ತೋರಿಸಬೇಕು, ಸಸಿಗಳನ್ನು ನೆಡಬೇಕು, ಇರುವ ಗಿಡ, ಮರಗಳನ್ನು ಸಂರಕ್ಷಣೆ ಮಾಡಬೇಕು. ಇಲ್ಲವಾದರೆ ನಮಗೆ ಮುಂದೆ ಉಳಿಗಾಲವಿಲ್ಲ ಎಂಬುದು ಈರಣ್ಣ ಕೋಸಗಿ ಅವರ ಕಳವಳವಾಗಿದೆ.

ಭೂಮಿ ಮನುಷ್ಯನಿಗೆ ಒಂದು ವರ. ಆದರೆ ಮನುಷ್ಯ ಭೂಮಿ ಮೇಲಿನ ಪರಿಸರವನ್ನು ನಾಶ ಮಾಡುತ್ತಾ ಹೋಗುತ್ತಿದ್ದಾನೆ. ಇದರಿಂದ ತನಗೂ, ತನ್ನ ಮುಂದಿನ ಪೀಳಿಗೆಗೂ ತೀರಾ ದ್ರೋಹವೆಸಗುತ್ತಿದ್ದಾನೆ. ಪರಿಸರವನ್ನು ರಕ್ಷಣೆ ಮಾಡಬೇಕೆಂಬ ಅರಿವು ಪ್ರತಿಯೊಬ್ಬರಲ್ಲಿ ಮೂಡಿ ಬರಬೇಕಾಗಿರುವುದು ಅವಶ್ಯವಾಗಿದೆ. ಈರಣ್ಣ ಕೋಸಗಿಯವರಂತಹ ಜೊತೆಗೆ ಪ್ರತಿಯೊಬ್ಬರು ಸಹಕರಿಸಿದರೆ ನಮ್ಮ ಪರಿಸರದ ಸಮತೋಲನವನ್ನು ಕಾಪಾಡಿಕೊಂಡು, ಭೂಮಿಯನ್ನು ಹಸಿರಾಗಿಸುವುದು ಅಷ್ಟೇನೂ ಕಷ್ಟವಾಗುವುದಿಲ್ಲ. ಇದಕ್ಕೆ ಸಾರ್ವಜನಿಕರು ಸಹಕರಿಸಬೇಕಷ್ಟೆ. **(ಈರಣ್ಣ ಕೋಸಗಿ ಅವರ ದೂರವಾಣಿ ಸಂಖ್ಯೆ – 9019755026)**



Downloaded From:www.kpscvaani.com

ವಿಶೇಷತೆ

# ಕರ್ನಾಟಕದ ಹೆಮ್ಮೆಯ ತಳಿ ದೇವಣಿ ಗೋತಳಿ

ಡಾ. ಪ್ರಕಾಶಕುಮಾರ ರಾಠೋಡ್
ಮತ್ತು ಡಾ. ಎನ್. ವಿಜಯಕುಮಾರ್


**ನಮ್ಮ ದೇಶದ ಅತ್ಯಮೂಲ್ಯ ಸಂಪತ್ತಾಗಿರುವ ದೇವಣಿ ಗೋತಳಿಯ ಸಂರಕ್ಷಣೆಯಲ್ಲಿ ಬೀದರ ಜಿಲ್ಲೆಯ ಜಾನುವಾರು ಸಂಶೋಧನೆ ಮತ್ತು ಮಾಹಿತಿ ಕೇಂದ್ರವು ತೊಡಗಿದೆ.**

ದೇವಣಿ ಸುಮಾರು 300 ವರ್ಷಗಳಷ್ಟು ಇತಿಹಾಸ ಹೊಂದಿರುವ "ದ್ವಿಉದ್ದೇಶಿತ" ದೇಶಿ ಗೋತಳಿ. ಡೊಂಗರಿಪಟ್ಟಿ, ಸುರ್ತಿ, ಡೆಕ್ಕನಿ ಎಂದೂ ಕರೆಯಲ್ಪಡುವ ಈ ಗೋತಳಿಯು ದುಡಿಮೆಗೆ, ಉಷ್ಣ ಸಹಿಷ್ಣತೆಗೆ, ರೋಗ ನಿರೋಧಕ ಶಕ್ತಿ ಮತ್ತು ಕಠಿಣ ಹವಾಮಾನಕ್ಕೆ ಹೊಂದಿಕೊಳ್ಳುವಿಕೆಗೆ ಹೆಸರುವಾಸಿಯಾಗಿದೆ. ದೇವಣಿ ತಳಿಯ ಎತ್ತುಗಳು ಭಾರಿ ಕೃಷಿ ಕೆಲಸಗಳಿಗೆ ಹೇಳಿ ಮಾಡಿಸಿದ ತಳಿಯಾಗಿದ್ದು, ಅರೆ ತೀವ್ರ ಕೃಷಿ ಪದ್ಧತಿಯಲ್ಲಿ ಕೂಡ ಸೂಕ್ತವಾದ ತಳಿಯಾಗಿದೆ. ಅಲ್ಲದೇ, ದೇವಣಿ ಹಸುಗಳು ಹಾಲು ಉತ್ಪಾದನೆಯಲ್ಲೂ ಕೂಡ ಉತ್ತಮವಾಗಿರುವುದರಿಂದ ವಿದೇಶಿ ತಳಿಯಾದ ಹೊಲಸ್ಟೇನ್ ಫ್ರೀಸಿಯನ್ (ಹೆಚ್.ಎಫ್) ನೊಡನೆ ಸಂಕರಣಗೊಳಿಸಿ "ಹೊಲ್ಡಿಯೋ" ಎಂಬ ಮಿಶ್ರತಳಿಯನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿಯೂ ಕೂಡ ಈ ಹಿಂದೆ ಪ್ರಯತ್ನಗಳಾಗಿವೆ.




Downloaded From:www.kpscvaani.com





ಈ ತಳಿ ಗೋವುಗಳ ದೇಹದ ಬಣ್ಣವು ಸಾಮಾನ್ಯವಾಗಿ ಕಪ್ಪು ಚುಕ್ಕೆಗಳುಳ್ಳ ಮತ್ತು ಬಿಳಿ ಬಣ್ಣದ್ದಾಗಿರುತ್ತದೆ. ದೇವಣಿ ತಳಿಯ ಗೋವುಗಳನ್ನು ದೇಹದ ಬಣ್ಣದ ಆಧಾರದ ಮೇಲೆ ಮೂರು ಪ್ರಬೇಧಗಳಲ್ಲಿ ವಿಂಗಡಿಸಲಾಗಿದೆ.

ಅವುಗಳಲ್ಲಿ 'ವನ್ನೇರಾ' ತಳಿಯು ಸಂಪೂರ್ಣ ಬಿಳಿ ಬಣ್ಣದ ದೇಹವನ್ನು ಮತ್ತು ಭಾಗಶಃ ಕಪ್ಪು ಮುಖವನ್ನು ಹೊಂದಿದ್ದರೆ, 'ಶೇವರಾ' ತಳಿಯು ಬಿಳಿ ದೇಹದ ಮೇಲೆ ಕಪ್ಪು ಚುಕ್ಕೆಗಳನ್ನು ಹೊಂದಿರುತ್ತವೆ. ಇನ್ನು ಮೂರನೇ ಪ್ರಬೇಧವಾದ 'ಬಾಲಂಕ್ಯ' ತಳಿಯ ದೇಹದ ಬಣ್ಣವು ಸಂಪೂರ್ಣವಾಗಿ ಬಿಳಿ ಬಣ್ಣದ್ದಾಗಿರುತ್ತದೆ. ಆದರೆ ಈ ತಳಿಯ ಕೆಲವು ಜಾನುವಾರುಗಳ ದೇಹದ ಕೆಳಭಾಗದಲ್ಲಿ ಕಪ್ಪು ಚುಕ್ಕೆಗಳಿರುತ್ತವೆ.

ಈ ಮೂರು ಪ್ರಬೇಧಗಳು ಒಂದೇ ರೀತಿ ಕಂಡರೂ ತುಲನಾತ್ಮಕವಾಗಿ ನೋಡಿದಾಗ ವನ್ನೇರಾ ಮತ್ತು ಬಾಲಂಕ್ಯ ಗಾತ್ರದಲ್ಲಿ ಒಂದಕ್ಕೊಂದು ಹೋಲುತ್ತವೆ. ಆದರೆ ಶೇವರಾ ದೇಹದ ಗಾತ್ರದಲ್ಲಿ ಸ್ವಲ್ಪ ಚಿಕ್ಕದಾಗಿದೆ.

ಈ ತಳಿಯ ಜಾನುವಾರುಗಳಿಗೆ ಹಣೆಯು ವಿಶಾಲವಾಗಿದ್ದು, ಎದ್ದು ಕಾಣುವಂತೆ ಇರುತ್ತದೆ. ಗಿರ್ ತಳಿಯಂತೆ ದೇವಣಿ ಗೋವಿಯ ಹಣೆಯು ಉಬ್ಬಿದಂತಿರುತ್ತದೆ. ಕಿವಿಗಳು ಕೂಡ ಗಿರ್ ತಳಿಯಂತಿದ್ದು, ಕಿವಿಯ ತುದಿಯು ಚೂಪಾಗಿದ್ದು, ಇಳಿ ಬಿದ್ದಿರುತ್ತದೆ. ಆದರೆ ಕೆಲವು ಗೋವುಗಳಲ್ಲಿ ಕಿವಿಯ ತುದಿ ಸ್ವಲ್ಪ ಮಡಚಿದ ಹಾಗೆ ಇರುತ್ತವೆ. ಪ್ರಕಾಶಮಾನ ಕಣ್ಣುಗಳು, ಸಣ್ಣ ಹಾಗೂ ಮೊಂಡಾದ ಕೊಂಬುಗಳಿರುತ್ತವೆ. ಬೆನ್ನಿನ ಮೇಲೆ ಉಬ್ಬು ಗಂಡುಗಳು ದೊಡ್ಡದಾಗಿರುತ್ತದೆ. ಆದರೆ ಹಸುಗಳಲ್ಲಿ ಅಷ್ಟೇನೂ ಎದ್ದು ಕಾಣುವುದಿಲ್ಲ. ಗಂಗೆದೊಗಲು ಮಧ್ಯಮ ಗಾತ್ರದ್ದಾಗಿದ್ದು, ಮಡಿಕೆಗಳೊಂದಿಗೆ ಭಾರವಾಗಿರುತ್ತದೆ. ಎದೆಯು ಆಳ ಮತ್ತು ಅಗಲವಾಗಿರುತ್ತದೆ. ಉದ್ದದ ಬಾಲವಿದ್ದು, ಬಾಲದ ಗುಚ್ಛ ಕಪ್ಪು ಬಿಳಿಯಾಗಿರುತ್ತದೆ. ಚರ್ಮವು ದಪ್ಪವಾಗಿದ್ದು, ದೇಹದ ಮೇಲೆ ಸಡಿಲಾಗಿ ಅಂಟಿಕೊಂಡಂತೆ ಇರುತ್ತದೆ. ನೇರ ಹಾಗೂ ಶಕ್ತಿಯುತ ಕಾಲುಗಳೊಂದಿಗೆ ಗೊರಸುಗಳು ಸಮ್ಮಿತೀಯವಾಗಿ ಇರಿಸದಂತೆ ಇದ್ದು, ಕಪ್ಪು ಬಣ್ಣದ್ದಾಗಿರುತ್ತವೆ. ಹೋರಿಗಳಲ್ಲಿ ಉತ್ತಮ ಗಾತ್ರದ ಕಪ್ಪು ವೃಷಣ ಚೀಲವಿರುತ್ತದೆ. ಹಸುಗಳಲ್ಲಿ ಕೆಚ್ಚಲು ಮಧ್ಯಮ ಗಾತ್ರದ್ದಾಗಿದ್ದು, ಅಷ್ಟೇನೂ ದೊಡ್ಡದಾಗಿರುವುದಿಲ್ಲ. ಕಪ್ಪು ಬಣ್ಣದ ಉದ್ದದ ನಾಲ್ಕು ತೊಟ್ಟುಗಳು ಕೊಳವೆಯಾಕಾರದಲ್ಲಿದ್ದು, ದುಂಡಗಿನ ತುದಿಯಿರುತ್ತದೆ. ಈ ತರಹದ ಗುಣಲಕ್ಷಣಗಳುಳ್ಳ ದೇವಣಿ ತಳಿಯ ಜಾನುವಾರುಗಳು ಬಲಿಷ್ಠ ದೇಹದೊಂದಿಗೆ ಶಕ್ತಿಯುತವಾಗಿ ಕಂಡುಬಂದರು ತುಂಬಾ ವಿಧೇಯ ಹಾಗೂ ಶಾಂತ ಸ್ವಭಾವವನ್ನು ಹೊಂದಿರುತ್ತವೆ.

**ದೇವಣಿ ತಳಿಯ ಮೂಲ ಮತ್ತು ಸ್ಥಳ**

ಕರ್ನಾಟಕದ ಬೀದರ, ಕಲಬುರಗಿ ಜಿಲ್ಲೆಯ ಕೆಲವು ತಾಲೂಕುಗಳಲ್ಲಿ ಮತ್ತು ಮಹಾರಾಷ್ಟ್ರ ರಾಜ್ಯದ ಮರಾಠವಾಡ ಭಾಗದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಈ ತಳಿಯ ಜಾನುವಾರುಗಳು ಹೆಚ್ಚಾಗಿ ಕಂಡುಬರುತ್ತವೆ. ಮಹಾರಾಷ್ಟ್ರದ ಲಾತೂರ ಜಿಲ್ಲೆಯ ದೇವಣಿ ತಾಲ್ಲೂಕು ಈ ತಳಿಯ

## ದೇಹದ ಅಳತೆ ಮತ್ತು ಉತ್ಪಾದನಾ ಕಾರ್ಯಕ್ಷಮತೆ

- ದೇಹದ ಉದ್ದವು ವಯಸ್ಕ ಗಂಡು ಜಾನುವಾರುಗಳಲ್ಲಿ 120 ರಿಂದ 135 ಸೆಂ. ಮೀ. (ಸರಾಸರಿ 129.59 ಸೆಂ. ಮೀ) ಹಾಗೂ ಹೆಣ್ಣುಗಳಲ್ಲಿ 110 ರಿಂದ 139 ಸೆಂ. ಮೀ. (ಸರಾಸರಿ 126.11 ಸೆಂ. ಮೀ) ಇರುತ್ತದೆ.
- ಎದೆಯ ಸುತ್ತಳತೆಯು ಗಂಡುಗಳಲ್ಲಿ 150 ರಿಂದ 180 ಸೆಂ. ಮೀ (ಸರಾಸರಿ 163.55 ಸೆಂ. ಮೀ) ಹಾಗೂ ಹೆಣ್ಣುಗಳಲ್ಲಿ 145 ರಿಂದ 165 ಸೆಂ. ಮೀ (ಸರಾಸರಿ 151.82 ಸೆಂ. ಮೀ) ಇರುತ್ತದೆ.
- ಕರುಗಳು ಹುಟ್ಟಿದಾಗ ಸರಾಸರಿಯಾಗಿ 20 ರಿಂದ 25 ಕೆ.ಜಿ ತೂಕವಿರುತ್ತದೆ.
- ವಯಸ್ಕ ಗಂಡು ಜಾನುವಾರಿನ ದೇಹದ ತೂಕವು 620 ರಿಂದ 680 ಕೆಜಿ ಹಾಗೂ ವಯಸ್ಕ ಹೆಣ್ಣು ಜಾನುಜವಾರು 432 ರಿಂದ 485 ಕೆ.ಜಿ ಇರುತ್ತದೆ.
- ದೇವಣಿ ತಳಿಯ ಹಸುಗಳು ಮಧ್ಯಮವಾಗಿ ಹಾಲು ನೀಡುತ್ತವೆ. ಹಾಲಿನ ಇಳುವರಿ ಪ್ರತಿ ಕರಾವಿಗೆ 636–1230 ಕೆ.ಜಿ, ಅಂದರೆ ಸರಾಸರಿ 868 ಕೆ.ಜಿ ಇಳುವರಿ ಇರುತ್ತದೆ.
- ಹಾಲುಣಿಸುವಿಕೆಯ ಅವಧಿ 169 ರಿಂದ 475 ದಿನಗಳವರೆಗೆ ಇದ್ದು, ಹಾಲಿನಲ್ಲಿ 4.3% ಕೊಬ್ಬು, 9.69% ಘನವಲ್ಲದ ಕೊಬ್ಬು (SNF) ಮತ್ತು 13.99% ರಷ್ಟು ಒಟ್ಟು ಘನವಸ್ತುಗಳಿರುತ್ತದೆ.


Downloaded From:www.kpscvaani.com

ಮೂಲವೆಂದು ತಿಳಿದು ಬಂದಿದೆ. ಈ ಕಾರಣಕ್ಕಾಗಿಯೇ ಈ ತಳಿಗೆ "ದೇವಣಿ" ಎಂದು ಹೆಸರು ಬಂದಿರಬಹುದು. ದುಡಿಮೆಗೆ, ಹಾಲು ಉತ್ಪಾದನೆಗೆ ಈ ತಳಿಯ ಗೋವುಗಳು ಈ ಪ್ರದೇಶಗಳಲ್ಲಿ ಜನಪ್ರಿಯವಾಗಿವೆ. ಗುಜರಾತನ "ಗಿರ್" ತಳಿ, ಮರಾಠವಾಡ ಭಾಗದ "ಡಾಂಗಿ" ತಳಿ ಮತ್ತು ಆಗಿನ ನಿಜಾಮ ಆಡಳಿತದ ಪ್ರದೇಶ (ಈಗಿನ ಕರ್ನಾಟಕದ ಬೀದರ ಮತ್ತು ಮಹಾರಾಷ್ಟ್ರದ ಉಸ್ಮಾನಾಬಾದ ಜಿಲ್ಲೆ)ದಲ್ಲಿನ ಸ್ಥಳಿಯ ಗೋವುಗಳ ಸಂಕರಣದಿಂದ ದೇವಣಿ ಗೋತಳಿ ಅಭಿವೃದ್ಧಿ ಹೊಂದಿರಬಹುದೆಂದು ನಂಬಲಾಗಿದೆ. ದೇವಣಿ ತಳಿಯ ಗೋವುಗಳ ತಲೆ, ಹಣೆ, ಕಿವಿ, ಕೊಂಬುಗಳನ್ನು ನೋಡಿದಾಗ ಗಿರ್‌ನ ಕೊಡುಗೆ ಎದ್ದುಕಾಣುತ್ತದೆ. ಅಂತೆಯೇ ಈ ತಳಿಯ ದೇಹದಾರ್ಢ್ಯತೆ, ವಿನ್ಯಾಸ, ಒರಟುತನ ಮಹಾರಾಷ್ಟ್ರದ ಡಾಂಗಿ ತಳಿಯನ್ನು ಹೋಲುತ್ತವೆ. ಈ ತಳಿಯ ಸಂತಾನೋತ್ಪತ್ತಿ ಪ್ರದೇಶವು ಮುಖ್ಯವಾಗಿ ಮಹಾರಾಷ್ಟ್ರದ ಲಾತೂರ ಉಸ್ಮಾನಾಬಾದ. ಕರ್ನಾಟಕದ ಬೀದರ, ಕಲಬುರಗಿ ಜಿಲ್ಲೆ ಹಾಗೂ ತೆಲಂಗಾಣದ ಮೇದಕ್, ಸಂಗಾರೆಡ್ಡಿ ಆಗಿದೆ. ಈ ಪ್ರದೇಶದಲ್ಲಿ ಫಲವತ್ತಾದ ಕಪ್ಪು ಮಣ್ಣು ಮತ್ತು ವರ್ಷಪೂರ್ತಿ ಉಷ್ಣಹವಾಮಾನ (ಚಳಿಗಾಲದ ಹೊರತುಪಡಿಸಿ) ಇರುತ್ತದೆ. 290 ರಿಂದ 440 ಸೆ ರಷ್ಟು ಉಷ್ಣತೆ ಹಾಗೂ ಕೇವಲ 75 ಸೆಂ. ಮೀ ರಿಂದ 89 ಸೆಂ. ಮೀ ನಷ್ಟು, ಮಳೆ ಬೀಳುವ ಈ ಬಯಲು ಪ್ರದೇಶದಲ್ಲಿ ಹೆಚ್ಚಾಗಿ ಜೋಳ, ಹತ್ತಿ, ಸೂರ್ಯಕಾಂತಿ, ಹಸರು, ಉದ್ದು, ಕಡಲೆ ಹಾಗೂ ಕಬ್ಬನ್ನು ಬೆಳೆಯಲಾಗುತ್ತದೆ.

ಈ ಭಾಗದ ಜನರು ಒಂದು ಅಥವಾ ಎರಡು ಹಸುಗಳ ಜೊತೆಗೆ ಒಂದು ಜೋಡಿ ಎತ್ತುಗಳು, ಕೆಲವು ಕರು/ಹೋರಿಗಳನ್ನು ಹೊಂದಿರುವವರೇ ಹೆಚ್ಚು. ಬೆಳಗಿನ ಸಮಯದಲ್ಲಿ ಹೊರಗೆ ಮೇಯಲು ಬಿಡುವ ಪದ್ಧತಿ ಜಾರಿಯಲ್ಲಿದ್ದು, ಮನೆಯ ಹತ್ತಿರದ ಬಯಲು ಪ್ರದೇಶಗಳಲ್ಲಿ ಕಟ್ಟಿ ಸಾಕಲಾಗುತ್ತದೆ. ಈ ತಳಿಯ ಹೋರಿಗಳಿಗೆ ಹೆಚ್ಚು ಬೇಡಿಕೆ ಇರುವುದರಿಂದ ಗಂಡು ಕರುಗಳಿಗೆ ವಿಶೇಷ ಆರೈಕೆ ನೀಡಲಾಗುತ್ತದೆ. ಎತ್ತು, ಗಂಡು ಕರುಗಳಿಗೆ ಹಾಗೂ ಹಾಲು ಹಿಂಡುವ ಹಸುಗಳಿಗೆ ಬೆಳೆ ಉಳಿಕೆಗಳನ್ನು, ಕಾಳು ಅಥವಾ ಎಣ್ಣೆ ಕಾಳಿನ ಹಿಂಡಿಗಳನ್ನು ನೀಡುವ ಪದ್ಧತಿಯಿದೆ. ಸಾಮಾನ್ಯವಾಗಿ ಗಂಡು ಕರುಗಳು 30 ತಿಂಗಳಿಗೆ ಬೀಜ ಕಸಿ ಮಾಡಿ ಮೂರು ವರ್ಷ ಪ್ರಾಯದ ನಂತರ ಸಾಗಾಟಕ್ಕೆ ಅಥವಾ ಇತರ ಹೊಲಗೆಲಸಗಳಿಗೆ ಬಳಸಲಾಗುತ್ತದೆ.

**ದುಡಿಯುವ ಸಾಮರ್ಥ್ಯ ಕಾರ್ಯಕ್ಷಮತೆ**

- ಈ ತಳಿಯ ಎತ್ತುಗಳು ಜೋಡಿಯಾಗಿ ಕಟ್ಟಿಗೆ ಚಕ್ಕಡಿಯ ಮೂಲಕ ಕಚ್ಚಾ/ಮಣ್ಣಿನ ರಸ್ತೆಯಲ್ಲಿ ಒಂದು ಟನ್ ವರೆಗಿನ ಭಾರವನ್ನು ಎಳೆಯುವ ಸಾಮರ್ಥ್ಯ ಹೊಂದಿರುತ್ತವೆ.
- ರಬ್ಬರ್ ಗಾಲಿ ಹೊಂದಿದ ಕಬ್ಬಣದಿಂದ ತಯಾರಿಸಿದ ಎತ್ತಿನಗಾಡಿಯ ಮೂಲಕ ಡಾಂಬರ ರಸ್ತೆಯಲ್ಲಿ 10–15 ಕಿಮಿವರೆಗೆ 3 ಟನ್‌ಗಳಷ್ಟು ಭಾರವನ್ನು ಎಳೆಯಬಲ್ಲವು.
- ಒಂದು ಜೋಡಿ ಎತ್ತುಗಳು ಮಧ್ಯಮ ಗಾತ್ರದ ಕುಂಟೆಯನ್ನು ಹೊತ್ತು ಕಂಡು ದಿನದ 7–8 ಗಂಟೆಗಳಲ್ಲಿ ಸುಮಾರು ಅರ್ಧ ಎಕರೆ ಜಮೀನನ್ನು ಉಳುಮೆ ಮಾಡಬಲ್ಲವು.
- ಈ ತಳಿಯ ಎತ್ತುಗಳು 5–6 ವರ್ಷ ವಯಸ್ಸಿಗೆ ತನ್ನ ಶ್ರೇಷ್ಠ ಕೆಲಸದ ಸಾಮರ್ಥ್ಯವನ್ನು ಪಡೆಯಲಿದ್ದು, 10–12 ವರ್ಷದ ವಯಸ್ಸಿನವರೆಗೆ ಅದೇ ಸಾಮರ್ಥ್ಯವನ್ನು ಪ್ರದರ್ಶಿಸಬಲ್ಲವು.
- ಒಂದು ಜೋಡಿ ದೇವಣಿ ಎತ್ತುಗಳನ್ನು ಭೂಮಿ ಹದಗೂಳಿಸಲು ಬಳಸಿದಲ್ಲಿ ಪ್ರತಿ ಘಂಟೆಗೆ 1614.6 ಚದರ ಮೀಟರನಷ್ಟು ಮತ್ತು 594.3 ಚದರ ಮೀಟರನ್ನು ಉಳುಮೆ ಮಾಡುವಷ್ಟು ಕಾರ್ಯಕ್ಷಮತೆಯನ್ನು ಹೊಂದಿವೆ.
- ಗಂಡು ಕರುಗಳನ್ನು 20 ತಿಂಗಳಿಗೆ ತಾಯಿಯಿಂದ ಬೇರ್ಪಡಿಸಿ, ಕೃಷಿ ಕೆಲಸಗಳಿಗೆ ತರಬೇತುಗೊಳಿಸಲಾಗುತ್ತದೆ. 30 ತಿಂಗಳ ಪ್ರಾಯಕ್ಕೆ ಬೀಜ ಕಸಿ ಮಾಡಿದ ನಂತರ, ಮೂರು ವರ್ಷ ಪ್ರಾಯವಾಗುವಾಗ ಹೊಲದಲ್ಲಿ ದುಡಿಮೆಗಾಗಿ ಬಳಸಲ್ಪಡುತ್ತವೆ.

**ದೇವಣಿ ತಳಿ ಸಂವರ್ಧನೆ**

ದೇವಣಿ ತಳಿಯ ಹೋರಿಯನ್ನು ಪರಿಚಯಿಸುವ ಮೂಲಕ ರೈತರಲ್ಲಿನ ಸ್ಥಳಿಯ/ಜವಾರಿ/ಯಾವುದೇ ತಳಿಗೆ ಸೇರಿದ ದನಗಳನ್ನು ಉನ್ನತೀಕರಿಸಬಹುದು, ಈ ತರಹದ ಪ್ರಯತ್ನಗಳನ್ನು ಈಗಾಗಲೇ ಮಹಾರಾಷ್ಟ್ರ, ಕರ್ನಾಟಕ ಹಾಗೂ ತೆಲಗಾಂಣದಲ್ಲಿ ನಡೆಯುತ್ತಲಿವೆ. ಉತ್ತಮವಾದ ದೇವಣಿ ತಳಿಯ ಹೋರಿಯ ವೀರ್ಯವನ್ನು ಬಳಸಿಕೊಂಡು, ಕೃತಕ ಗರ್ಭಧಾರಣೆ ಕೈಗೊಳ್ಳಲಾಗುತ್ತಿದೆ.

ದೇವಣಿ ತಳಿಯು ನಮ್ಮ ದೇಶದ ಅತ್ಯಮೂಲ್ಯ ಸಂಪತ್ತು ಮತ್ತು ಅನುವಂಶಿಕ ಸಂಪನ್ಮೂಲವಾಗಿರುವುದರಿಂದ ಸಂರಕ್ಷಿಸುವುದು ಅತ್ಯವಶ್ಯಕವಾಗಿದೆ. ಈ ಕಾರಣದಿಂದ ದೇವಣಿ ತಳಿ ಸಂವರ್ಧನ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಕ್ಷೇತ್ರಮಟ್ಟದಲ್ಲಿ ರೈತರಲ್ಲಿನ ದೇವಣಿ ತಳಿಯ ಹಿಂಡುಗಳನ್ನು ಸಂರಕ್ಷಿಸುವುದು ಅತ್ಯವಶ್ಯಕವಾಗಿದೆ. ಹಾಗೆಯೇ ಸಂತಾನೋತ್ಪತ್ತೆಯ ಬೇಡಿಕೆಯನ್ನು ಪೂರೈಸಲು ಶ್ರೇಷ್ಠ ದೇವಣಿ ಹೋರಿ/ಹಸುಗಳ ಸಂಖ್ಯೆಯನ್ನು ದೇವಣಿ ತಳಿ ಸಂವರ್ಧನೆ ಕೇಂದ್ರಗಳ ಮೂಲಕ ವೃದ್ಧಿಗೊಳಿಸುವ ಅಗತ್ಯತೆ ಇದೆ.

ಮಹಾರಾಷ್ಟ್ರದಲ್ಲಿ ಎರಡು ಮತ್ತು ತೆಲಂಗಾಣದಲ್ಲಿ ಮೂರು ದೇವಣಿ ತಳಿಯ ಸಂವರ್ಧನೆ ಕೇಂದ್ರಗಳಿದ್ದರೆ, ಕರ್ನಾಟಕಲ್ಲಿ ಒಂದೇ ಒಂದು ಈ ದೇವಣಿ ತಳಿಯ ಸಂವರ್ಧನೆ ಕೇಂದ್ರವಿದೆ. ದೇವಣಿ ತಳಿಯ ಜಾನುವಾರಿನ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಸಹ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು ಜಾನುವಾರು ಸಂಶೋಧನೆ ಹಾಗೂ ಮಾಹಿತಿ ಕೇಂದ್ರ (ದೇವಣಿ) ಕಟ್ಟಿತುಗಾಂವ, ಹಳ್ಳಿಖೇಡ (ಬಿ), ಬೀದರ–ಕಲಬುರಗಿ ರಾಜ್ಯ ಹೆದ್ದಾರಿ, ಬೀದರ–585415, ಮೊಬೈಲ್–9900926525 ಇವರನ್ನು ಸಂಪರ್ಕಿಸಬಹುದು.



Downloaded From:www.kpscvaani.com



ಸ್ಥಳೀಯವಾಗಿ ಸಿಗುವ ವಸ್ತುಗಳಿಂದಲೇ ಪರಿಸರ ಸ್ನೇಹಿ ಉದ್ಯಮವನ್ನು ಆರಂಭಿಸುವ ಮೂಲಕ ನಾಲ್ಕಾರು ಜನರಿಗೆ ಉದ್ಯೋಗ ಒದಗಿಸುವ ಜೊತೆಗೆ ಪರಿಸರಕ್ಕೂ ಕೊಡುಗೆ ನೀಡುತ್ತಿದ್ದಾರೆ.



## ಪರಿಸರ ಸ್ನೇಹಿ ಉದ್ಯಮದಲ್ಲಿ

# ಸ್ವಾವಲಂಬಿ ಜೀವನ ಕಂಡುಕೊಂಡ ಪದವೀಧರೆ

● ಗಣಪತಿ ಹಾಸ್ಪುರ



ಸಾಮಾನ್ಯವಾಗಿ ಈ ದಿನಮಾನದಲ್ಲಿ ಉನ್ನತ ಶಿಕ್ಷಣ ಕಲಿತವರಾಗಲೀ, ಅಥವಾ ತುಸು ತಿಳುವಳಿಕೆ ಉಳ್ಳವರಾಗಲೀ ಸುಖಾಸುಮ್ಮನೆ ಕುಳಿತು ಕಾಲಹರಣ ಮಾಡುವವರು ತೀರಾ ವಿರಳ. ಯಾವುದಾದರೂ ನೌಕರಿಯೋ, ಸ್ವ–ಉದ್ಯೋಗದಲ್ಲಿಯೋ ತೊಡಗಿಕೊಂಡು ಸ್ವಾವಲಂಬಿ ಜೀವನ ನಡೆಸುವವರೇ ಹೆಚ್ಚು. ಅದರಲ್ಲಿಯೂ ಇವರೆಲ್ಲಾ ಪರಸ್ಥಳದಲ್ಲಿ ನೆಲೆಸಿ ತಮ್ಮ ಸ್ವ– ಕಾರ್ಯವನ್ನು ನಡೆಸುವವರೇ ಹೆಚ್ಚು ಎಂದರೂ ತಪ್ಪಾಗಲಾರದು. ಆದರೆ, ಇಲ್ಲೊಬ್ಬ ಗೃಹಿಣಿಯೊಬ್ಬರು ತಮ್ಮೂರಿನಲ್ಲಿಯೇ "ಪರಿಸರ ಸ್ನೇಹಿ ಉದ್ಯಮ" ಆರಂಭಿಸಿ, ನಾಲ್ಕಾರು ಜನರಿಗೆ ಕೆಲಸವನ್ನು ನೀಡಿರುವುದು ವಿಶೇಷ.

ನಿಜ, ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲೂಕಿನ ಬಾಳೇಗದ್ದೆಯ ಸೀಮಾ ವಿವೇಕ ಹೆಗಡೆ ಅವರೇ ಈ ಉದ್ಯಮದ ಮುಖ್ಯಸ್ಥೆ. ಎಂ.ಬಿ.ಎ. ಪದವೀಧರೆ ಆಗಿರುವ ಈಕೆ, ಸಿಲಿಕಾನ್ ಸಿಟಿಯೆಂದೇ ಖ್ಯಾತಿಯಾಗಿರುವ ಬೆಂಗಳೂರಿನ ಮಹಾ ನಗರಿಯಲ್ಲಿ ನೌಕರಿಯನ್ನು ಮಾಡುತ್ತಿದ್ದರು. ಆ ಸಮಯದಲ್ಲಿ ಕಂಕಣ ಭಾಗ್ಯ ಕೂಡಿ ಬಂದಿದ್ದರಿಂದ ವಿವಾಹದ ಬಳಿಕ ಶಿರಸಿಯಲ್ಲಿ ನೆಲೆಸುವುದು ಅನಿವಾರ್ಯವಾಯಿತು. ಶಿರಸಿಯಂತ ಷಹರದಲ್ಲಿ ಇವರು ಕಲಿತ ಶಿಕ್ಷಣಕ್ಕೆ ಅನುಗುಣವಾಗಿ ಉದ್ಯೋಗ ಸಿಗುವುದು ಕಷ್ಟವಾದರೂ ಸಹಾ, ಸಿಕ್ಕ ಅವಕಾಶವನ್ನು ಸದ್ಬಳಕೆ ಮಾಡಿಕೊಂಡ ಬಾಳೇಗದ್ದೆಯ ಗೃಹಿಣಿ ಸೀಮಾ ಹೆಗಡೆ ಕೆಲವು ಕಾಲ ಟಿ. ಎಸ್. ಎಸ್. ನಲ್ಲಿ ಕೆಲಸವನ್ನು ಮಾಡಿದರು.

ಆದರೆ ಇವರಿಗೆ ಬೇರೆ ಏನಾದರೂ ಮಾಡಬೇಕೆಂಬ ಹಂಬಲ.... ಮನದಲ್ಲಿ



Downloaded From:www.kpscvaani.com



ಟಿಸಿಲೊಡೆದಿತ್ತು. ಹಾಗಂತ ಏನು ಮಾಡಬೇಕೆಂಬುದೇ ಅರ್ಥವಾಗುತ್ತಿರಲಿಲ್ಲ. ಆಮೇಲೆ ಪತಿ ವಿವೇಕ ಹೆಗಡೆ ಅವರಲ್ಲಿ ಮನದ ಇಚ್ಛೆಯನ್ನು ತೆರೆದಿಟ್ಟರು. "ನೀನೆ ಒಂದು ಉದ್ಯೋಗ ಆರಂಭಿಸು, ಒಂದಿಷ್ಟು ಜನರಿಗೆ ಕೆಲಸ ನೀಡಿದಂತೆಯೂ ಆಗುತ್ತೆ...." ಎನ್ನುವ ಮಾತೇ ನನ್ನ ಈ "ಪರಿಸರ ಸ್ನೇಹಿ ಉದ್ಯಮ" ಆರಂಭಿಸಲು ಪ್ರೇರಣೆ ಎಂದು ಸೀಮಾ ಹೆಗಡೆ ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ.

ಬಾಳೇಗದ್ದೆಯ ಗೃಹಿಣಿ ಸೀಮಾ ಹೆಗಡೆ ಅವರಿಗೆ ಉದ್ಯಮ ಆರಂಭಿಸುವುದು ಸುಲಭವೇನು ಆಗಿರಲಿಲ್ಲ. ಸ್ಥಳೀಯವಾಗಿ ಸಿಗುವ ವಸ್ತುಗಳನ್ನೇ ಉಪಯೋಗಿಸಿಕೊಂಡು, ಮಾರುಕಟ್ಟೆಯಲ್ಲಿ ನಿರಂತರ ಬೇಡಿಕೆ ಇರುವ ಪರಿಕರವನ್ನು ಸಿದ್ಧಪಡಿಸುವ ಉದ್ಯಮವನ್ನು ಆರಂಭಿಸಬೇಕೆಂಬುದೇ ಇವರ ಇಚ್ಛೆಯಾಗಿತ್ತು. ಆಮೇಲೆ ಯೋಚಿಸಿ ಕಾರ್ಯರೂಪಕ್ಕೆ ಇಳಿಸಿದ್ದೇ ಈ ಅಡಿಕೆ ಹಾಳೆಯಿಂದ "ಪ್ಲೇಟ್ ತಯಾರಿಸುವ" ಉದ್ಯಮ.

ಗ್ರಾಮೀಣ ಪ್ರದೇಶದಲ್ಲಿ ಉದ್ಯಮ ಆರಂಭಿಸುವುದು ಹರಸಾಹಸದ ಕೆಲಸ. ವಿದ್ಯುತ್ ಸಮಸ್ಯೆ, ಗ್ಯಾಸ್ ಸಕಾಲದಲ್ಲಿ ಸಿಗದೇ ಇರುವುದು, ಸಾಗಾಟ ವೆಚ್ಚ, ಹೀಗೆ ವಿವಿಧ ಸಮಸ್ಯೆಗಳಿಂದಾಗಿ ಉದ್ಯಮ ನಡೆಸುವುದು ತುಸು ಕಷ್ಟ. ಆದರೆ ತಾಳ್ಮೆ, ಛಲ, ಸಾಧಿಸಬೇಕೆಂಬ ಸಾಹಸ ಪ್ರವೃತ್ತಿ ಇದ್ದರೆ ಕೈಗೊಂಡ ಸ್ವ-ಉದ್ಯೋಗವನ್ನು ಚೆನ್ನಾಗಿಯೇ ನಡೆಸಲು ಸಾಧ್ಯ ಎಂಬುದನ್ನು ಸೀಮಾ ಹೆಗಡೆ ಅವರು ಮಾಡಿ ತೋರಿಸಿದ್ದಾರೆ.

ಇವರು ಪತಿಯ ಸಹಕಾರದಿಂದ "ಮುಖ್ಯಮಂತ್ರಿಯ ಉದ್ಯೋಗ ಸೃಷ್ಠಿ ಯೋಜನೆ"ಯ ಅಡಿಯಲ್ಲಿ ಎಪ್ರಿಲ್ 6, 2019 ರಂದು ಸುಮಾರು ಹತ್ತು ಲಕ್ಷ ಬಂಡವಾಳ ತೊಡಗಿಸಿ ಶಿರಸಿ-ಹುಲೇಕಲ್ ಮಾರ್ಗದ ಬಾಳೇಗದ್ದೆಯಲ್ಲಿ ಅಡಿಕೆ ಹಾಳೆಯಿಂದ ತಯಾರಿಸುವ ಪ್ಲೇಟ್ ಉದ್ಯಮವನ್ನು ಆರಂಭಿಸಿದರು. ಈ ಘನ ಕಾರ್ಯಕ್ಕೆ ಬೆಂಗಳೂರಿನಿಂದ ಹೈಡ್ರೋಲಿಕ್ ಮಿಷನ್ ಅನ್ನು ತರಿಸಿಕೊಂಡಿರುವ ಇವರು, ಪ್ರಸ್ತುತ ಇದರಿಂದ ಐದು ಬಗೆಯ ಪ್ಲೇಟ್‌ನ್ನು ಸಿದ್ಧಪಡಿಸುತ್ತಿದ್ದಾರೆ. ಐವರು ಕಾರ್ಮಿಕರಿಗೆ ನಿರಂತರ ಕೆಲಸ ನೀಡುತ್ತಿರುವ ಸೀಮಾ ಹೆಗಡೆ ತಮ್ಮ ಉದ್ಯಮಕ್ಕೆ ಬೇಕಾಗುವ ಕಚ್ಚಾ ವಸ್ತು (ಅಡಿಕೆ ಹಾಳೆ) ವನ್ನು ಹಾಳೆಯೊಂದಕ್ಕೆ ಒಂದೂವರೆ ರೂಪಾಯಿಯಂತೆ ಖರೀದಿಸುತ್ತಾರೆ. ಈ ಕಚ್ಚಾ ಪರಿಕರವನ್ನು ಸ್ಥಳೀಯರಿಂದ (ಬಾಳೇಗದ್ದೆ, ಕೊಳಗಿಬೀಸ್, ಹಾರೇ ಹುಲೇಕಲ್ ಅಲ್ಲದೇ ಚನ್ನಗಿರಿ, ತುಮಕೂರು ಮುಂತಾದ ದೂರದ ಊರುಗಳಿಂದಲೂ ತರಿಸಿಕೊಳ್ಳುತ್ತಾರೆ.

ಬಹುತೇಕ ಅಡಿಕೆ ಬೆಳೆಯುವ ಕೃಷಿಕರು 'ಅಡಿಕೆ' ಮಾರಾಟ ಮಾಡಿ ಜೀವನ ನಡೆಸುತ್ತಿದ್ದಾರೆ. ಅದೇ ತಮ್ಮ ತೋಟದಲ್ಲಿ ಸುಲಭವಾಗಿ ಸಿಗುವ 'ಹಾಳೆ'ಯನ್ನು ತೋಟದ ಮುಚ್ಚಿಗೆಗೋ.... ಬಚ್ಚಲು ಮನೆಯಲ್ಲಿ ಬೆಂಕಿ ಹೊತ್ತಿಸುವ ಸಲುವಾಗಿ ಬಳಸುವುದೇ ಹೆಚ್ಚು. ಆದ್ರೆ ಇತ್ತೀಚಿನ ದಿನದಲ್ಲಿ ಅಡಿಕೆ ಹಾಳೆಯಿಂದ ಸಿದ್ಧಪಡಿಸಿದ ಪ್ಲೇಟ್‌ಗಳಿಗೆ ಮಾರುಕಟ್ಟೆಯಲ್ಲಿ ಉತ್ತಮ ಬೇಡಿಕೆ ಇದೆ. ಅಡಿಕೆ ಕೃಷಿಕರ ಉತ್ಪನ್ನಗಳ ಮೌಲ್ಯ ವರ್ಧನೆಯೇ ಒಂದು ಖಾಯಂ ಉದ್ಯಮ ಎಂದು ಅನ್ನಿಸಿದ್ದರಿಂದ ಹಾಗೂ ಸುಮ್ಮನೆ ವ್ಯರ್ಥವಾಗಿ ಹೋಗುವ ಅಡಿಕೆ ಹಾಳೆಯನ್ನು ಸದ್ಬಳಕೆ ಮಾಡಿ, ಅಡಿಕೆ ಬೆಳೆಗಾರರು ಸಹಾ ಸಂತೃಪ್ತಿ ಪಡಬೇಕು ಎನ್ನುವ ಉದ್ದೇಶದಿಂದ ಈ ಉದ್ಯಮವನ್ನು ಸೀಮಾ ಅವರು ಗ್ರಾಮೀಣ ಪ್ರದೇಶದಲ್ಲಿಯೇ ಆರಂಭಿಸಿದ್ದಾರೆ.

ಇನ್ನು ಅಡಿಕೆ ಕೃಷಿಕರಿಗೆ ವರುಷವಿಡೀ ಕೆಲಸವೇನು ಇರುವುದಿಲ್ಲ. ಅದರಲ್ಲಿಯೂ ಮಳೆಗಾಲದ ಸಮಯದಲ್ಲಿ ಹೆಂಗಳೆಯರಿಗೆ ಇದೊಂದು ಸುಸ್ಥಿರವಾದ ಉದ್ಯೋಗ ಕೂಡ ಹೌದು. ಇದು ಹಳ್ಳಿಯ ಹೆಂಗಳೆಯರಿಗೆ ಜೀವನೋಪಾಯಕ್ಕೆ ಸಹಕಾರಿಯಾಗುವ ಕೆಲಸವೂ ಆಗಿದೆ. ಮಾತ್ರವಲ್ಲ, ಇದು ಮಣ್ಣಿನಲ್ಲಿ ಕರಗುವ ಪರಿಕರವಾಗಿರುವುದರಿಂದ ಮಾರುಕಟ್ಟೆಯಲ್ಲಿ ಉತ್ತಮ ಬೇಡಿಕೆ ಇರುವ ಜೊತೆಗೆ ಪರಿಸರ ನೈರ್ಮಲ್ಯವನ್ನು ತಡೆಯುವ "ಪರಿಸರ ಸ್ನೇಹಿ" ಪರಿಕರವಾಗಿದೆ. ಸೀಮಾ ಅವರನ್ನು ಮೊಬೈಲ್ ಸಂಖ್ಯೆ 7019210691 ಮೂಲಕ ಸಂಪರ್ಕಿಸಬಹುದು.

**ಒಂದು ಹಾಳೆಯಿಂದ ಬೇರೆ ಬೇರೆ ಸೈಜಿನ ಮೂರು ಬಗೆಯ ಪ್ಲೇಟ್‌ಗಳನ್ನು ಸಿದ್ಧ ಮಾಡಬಹುದು. ನಮ್ಮಲ್ಲಿ ಐದು ತರದ ಹಾಳೆ ಪ್ಲೇಟ್‌ನ್ನು ತಯಾರು ಮಾಡುತ್ತಿದ್ದೇವೆ. ಸುತ್ತಮುತ್ತಲಿನ ವಿವಿಧ ಕಾರ್ಯಕ್ರಮಗಳಿಗೆ ಸ್ಥಳೀಯರು ಈ ಹಾಳೆ ಪ್ಲೇಟ್‌ನ್ನು ಒಯ್ಯುತ್ತಾರೆ. ಶಿರಸಿಯ ಟಿ. ಎಸ್. ಎಸ್. ನ ಸೂಪರ್ ಮಾರುಕಟ್ಟೆಯಲ್ಲಿಯೂ ಲಭ್ಯವಿದೆ. ಅಲ್ಲದೇ, ಹುಬ್ಬಳ್ಳಿ, ಬೆಂಗಳೂರು.... ಮುಂತಾದ ಷಹರಗಳಿಗೆ ಅವರ ಬೇಡಿಕೆಗೆ ಅನುಗುಣವಾಗಿ ಅಡಿಕೆ ಪ್ಲೇಟ್‌ನ್ನು ಕಳಿಸುತ್ತಿದ್ದೇವೆ. ಅವರಿಂದ ಉತ್ತಮವಾದ ಸ್ಪಂದನೆ, ಪ್ರತಿಕ್ರಿಯೆ ಬರುತ್ತಿರುವುದರಿಂದ ಈ ಉದ್ಯಮದಲ್ಲಿ ಇನ್ನಷ್ಟು ಭದ್ರ ಬುನಾದಿಯನ್ನು ಹಾಕಿಕೊಂಡು ಮುನ್ನಡೆಸಿಕೊಂಡು ಹೋಗಬಹುದು ಎಂಬ ಆತ್ಮವಿಶ್ವಾಸ ಮೂಡಿದೆ.**

**-ಸೀಮಾ ಹೆಗಡೆ. ಉದ್ಯಮಿ**



Downloaded From:www.kpscvaani.com



# ಸ್ವತಂತ್ರ ರಾಜ್ಯದ ಕನಸು ಕಂಡ ಬಿದನೂರಿನ ದೊಂಡಿಯಾ ವಾಘ್



ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಬ್ರಿಟಿಷರ ವಿರುದ್ಧ ಹೋರಾಡಿದ ದೊಂಡಿಯಾ ವಾಘ್ ಅಚ್ಚಳಿಯದೇ ಉಳಿದ ವೀರವಂತ.

ಎನ್. ಜಗನ್ನಾಥ ಪ್ರಕಾಶ್

ದೊಂಡಿಯಾ ವಾಘ್ ಹಿಂದೆ ಬಿದನೂರು ಪ್ರಾಂತ್ಯದ ಭಾಗವಾಗಿದ್ದ ಚೆನ್ನಗಿರಿಯವನು. ಸಾಹಸಿ ಮನೋಭಾವದ ದೊಂಡಿಯ ಭೀಮ ಬಲವುಳ್ಳವನಾಗಿದ್ದ. ಜತೆಗೆ ಉತ್ತಮ ಕುದುರೆ ಸವಾರ.

ಧೀರ ಹಾಗೂ ಕುಶಾಗ್ರಮತಿಯಾಗಿದ್ದ ದೊಂಡಿಯ ವಾಘ್ ಆಗ ಮೈಸೂರು ಸಂಸ್ಥಾನದ ಅಧಿಪತಿ ಹೈದರಾಲಿ ಸೈನ್ಯಕ್ಕೆ ಸೇರಿದ್ದ. ಬಿದನೂರು ಪ್ರಾಂತ್ಯದ ಭಾಗವಾಗಿದ್ದ ಚೆನ್ನಗಿರಿಯನ್ನು ಒಳಗೊಂಡ ಬಿದನೂರು ಸೀಮೆಯನ್ನು ವಶಮಾಡಿಕೊಂಡ ಹೈದರಾಲಿ ಯುದ್ಧದಲ್ಲಿ ದೊಂಡಿಯಾ ತೋರಿದ ಅಪ್ರತಿಮ ಸಾಹಸವನ್ನು ಗಮನಿಸಿ ಮೈಸೂರು ಸೇನೆಗೆ ಸೇರಿಸಿಕೊಂಡಿದ್ದ.

ಆತ ಬಹುಬೇಗ ತನ್ನ ಯುದ್ಧ ಕೌಶಲದಿಂದ ಪ್ರಸಿದ್ಧಿಯನ್ನು ಪಡೆಯುವಲ್ಲಿ ಸಫಲನಾಗಿದ್ದ. ಬ್ರಿಟಿಷ್ ಸೇನಾಧಿಕಾರಿ ಕಾರ್ನ್‌ವಾಲೀಸ್ ಯುದ್ಧವನ್ನು ಹೈದರಾಲಿಯ ಮೇಲೆ ಹುಡಿದಾಗ ದೊಂಡಿಯಾ ಸೈನ್ಯ ಬಿಟ್ಟು ಧಾರವಾಡ ಪ್ರಾಂತ್ಯಕ್ಕೆ ಹೋಗಿ ತನ್ನದೇ ಪ್ರಾಂತ್ಯ ರಚಿಸಲು ತಯಾರಿ ನಡೆಸುತ್ತಿದ್ದ. ಅದು 1794ರ ಸುಮಾರು. ಆಗ ಟಿಪ್ಪುಸುಲ್ತಾನ್ ಮೈಸೂರು ರಾಜ್ಯದ ಚುಕ್ಕಾಣಿ ಹಿಡಿದಿದ್ದ.

ಧೀರ ದೊಂಡಿಯಾನನ್ನು ಬಲ್ಲವನಾಗಿದ್ದ ಟಿಪ್ಪುಸುಲ್ತಾನ್ ದೊಂಡಿಯಾಗೆ ಉನ್ನತ ಪದವಿ ನೀಡುವ ಆಮಿಷ ತೋರಿ ವಾಪಸ್ ಶ್ರೀರಂಗಪಟ್ಟಣ ಸೇನೆಗೆ





Downloaded From:www.kpscvaani.com

ಸೇರಿಸಿಕೊಂಡನಾದರೂ ಆತನ ಷರತ್ತು ದೊಂಡಿಯಾಗೆ ಒಪ್ಪಿಗೆಯಾಗಲಿಲ್ಲ.

ಮತಾಂತರ ಹುನ್ನಾರವನ್ನು ತಿರಸ್ಕರಿಸಿದ್ದಕ್ಕೆ ಟಿಪ್ಪು ದೊಂಡಿಯಾನನ್ನು ಸೆರೆವಾಸಕ್ಕೆ ತಳ್ಳಲ್ಪಟ್ಟ. ಆಂಗ್ಲರು ಟಿಪ್ಪುವನ್ನು ಸೋಲಿಸಿದ ಮೇಲೆ ಜೈಲುವಾಸಿಗಳನ್ನು ಬಿಡುಗಡೆ ಮಾಡಿದಾಗ ದೊಂಡಿಯಾ ಕೂಡ ಹೊರಬಂದ. ದೊಂಡಿಯಾ ತನ್ನೂರು ಬಿದನೂರಿಗೆ ವಾಪಸ್ ಬಂದು, ತನ್ನ ಹಳೆಯ ಉದ್ದೇಶವಾಗಿದ್ದ ಪ್ರತ್ಯೇಕ ಸ್ವತಂತ್ರ ಪ್ರಾಂತ್ಯ ನಿರ್ಮಾಣಕ್ಕೆ ಎಲ್ಲಾ ಸಿದ್ಧತೆ ನಡೆಸಲು ಆರಂಭಿಸಿದನು. ಚದುರಿ ಹೋಗಿದ್ದ ಸೈನಿಕರನ್ನು ಒಟ್ಟುಗೂಡಿಸಿ ಅವರನ್ನು ಬ್ರಿಟಿಷರ ವಿರುದ್ಧ ಯುದ್ಧಕ್ಕೆ ದೊಂಡಿಯಾ ಅಣಿಗೊಳಿಸುತ್ತಿರುವ ವಾರ್ತೆ ಬ್ರಿಟಿಷರಿಗೆ ತಲುಪಲು ತಡವಾಗಲಿಲ್ಲ.

ಬಿದನೂರಿನ ಆಸುಪಾಸಿನಲ್ಲಿದ್ದ ಸಣ್ಣಪುಟ್ಟ ಸಾಮಂತ ರಾಜ್ಯಗಳ ಮೇಲೆ ದಾಳಿ ಮಾಡಿ ಸಂಪತ್ತು ಕೊಳ್ಳೆ ಹೊಡೆದು ಸ್ವಂತ ಸೈನ್ಯವನ್ನು ಸಿದ್ಧಗೊಳಿಸುವುದು ದೊಂಡಿಯಾ ವಾಘ್‌ನ ಇರಾದೆಯಾಗಿತ್ತು. ಬ್ರಿಟಿಷರ ಮೇಲೆ ಮುಗಿಬೀಳಲು ದೊಂಡಿಯಾ ತಯಾರಿ ನಡೆಸುತ್ತಿರುವುದು ಗೊತ್ತಿರುವ ವಿಷಯವಾಗಿತ್ತು. ತನ್ನದೇ ರಾಜ್ಯ ಕಟ್ಟುವ ದೊಂಡಿಯಾ ಉದ್ದೇಶವನ್ನು ಅರಿಯಲು ಬ್ರಿಟಿಷರಿಗೆ ಬಹಳ ಸಮಯ ಹಿಡಿಯಲಿಲ್ಲ.

ಅನೇಕ ದುರ್ಗಗಳನ್ನು ವಶಪಡಿಸಿಕೊಂಡಿದ್ದ ದೊಂಡಿಯಾ ವಿರುದ್ಧ ಕಾರ್ಯಾಚಾರಣೆ ಮಾಡಲು ಬ್ರಿಟಿಷರು ಕಳುಹಿಸಿದ್ದು ಜೇಮ್ಸ್ ಡಾಲ್ ರಿಂಪಲ್ ಎಂಬ ಸೈನ್ಯಾಧಿಕಾರಿಯನ್ನು. ಈತ ಚಿತ್ರದುರ್ಗದಿಂದ ದಾಳಿ ಶುರುವಿಟ್ಟು ದೊಂಡಿಯಾಗೆ ಸೇರಿದ್ದ ಅನೇಕ ದುರ್ಗಗಳನ್ನು ವಶಮಾಡಿಕೊಳ್ಳುತ್ತಾ ಬಂದ. ಕೆಲವು ದೊಂಡಿಯಾ ಸೈನಿಕರು ಅವನಿಗೆ ಕೈಸೆರೆಯಾದರು.

ಬ್ರಿಟಿಷರು ದೊಂಡಿಯಾ ವಾಘ್ ಸೇನೆಯನ್ನು ಬೆದರಿಸಲು ಸೆರೆಸಿಕ್ಕ ಸೈನಿಕರನ್ನು ಬಹಿರಂಗ ಸ್ಥಳಗಳಲ್ಲಿ ಗಲ್ಲಿಗೇರಿಸುವ ಕೃತ್ಯ ಎಸಗಿದರು. ದೊಂಡಿಯಾ ಎದೆಗುಂದಲಿಲ್ಲ, ಆದರೆ ಆತನ ಸೈನಿಕರು ಯುದ್ಧದಲ್ಲಿ ಮುಂದುವರೆಯಲು ಹಿಂಜರಿದರು.

ತುಂಗಭದ್ರಾ ನದಿಯುದ್ದಕ್ಕೂ ದೊಂಡಿಯಾ ವಶದಲ್ಲಿದ್ದ ದುರ್ಗ ಸ್ಥಳಗಳನ್ನು ಬ್ರಿಟಿಷರು



**ಯುದ್ಧದಲ್ಲಿ ಸೆರೆಸಿಕ್ಕ ದೊಂಡಿಯಾನ ಸೈನಿಕರನ್ನು ಬ್ರಿಟಿಷರು ಬಹಿರಂಗವಾಗಿ ಗಲ್ಲಿಗೇರಿಸುವ ಮೂಲಕ ದೊಂಡಿಯಾನನ್ನು ಮಾನಸಿಕವಾಗಿ ಕುಗ್ಗಿಸಲು ಪ್ರಯತ್ನ ಪಟ್ಟರು. ಆದರೆ ದೊಂಡಿಯಾ ಇದ್ಯಾವುದಕ್ಕೂ ಎದೆಗುಂದದೆ ಕೊನೆಯ ತನಕವೂ ವೀರಾವೇಶದಿಂದ ಹೋರಾಡಿಯೇ ವೀರ ಮರಣ ಹೊಂದಿದ.**

ತಮ್ಮದಾಗಿಸಿಕೊಂಡರು. ತನ್ನ ಕೋಟೆಗಳು ಕೈಬಿಟ್ಟಾಗ ದೊಂಡಿಯಾ ತುಂಗಭದ್ರಾ ನದಿ ದಾಟಿ ಉತ್ತರ ಕರ್ನಾಟಕ ಪ್ರಾಂತ್ಯಕ್ಕೆ ಕಾಲಿಟ್ಟವನೇ ಮರಾಠ ನಾಯಕರುಗಳ ನೆರವಿನಿಂದ ಆ ಪ್ರಾಂತ್ಯದ ಬ್ರಿಟಿಷರ ವಿರುದ್ಧ ಮನೋಭಾವದ ಜನರನ್ನು ಸೇರಿಸಿ ಚಲ್ಲಾಪಿಲ್ಲಿಯಾಗಿದ್ದ ತನ್ನ ಸೈನ್ಯವನ್ನು ಮತ್ತೆ ಕಟ್ಟಿ ಬ್ರಿಟಿಷರನ್ನು ಎದುರಿಸಲು ಪುನಃ ಪ್ರಯತ್ನ ಮಾಡಲು ಮೊದಲಾದನು.

ಈ ಸಂದರ್ಭ ಬ್ರಿಟಿಷರ ವಿರುದ್ಧ ಅಸಂತುಷ್ಟರಾಗಿದ್ದ ಸಣ್ಣಪುಟ್ಟ ರಾಜರನ್ನು ಪಾಳೆಯಗಾರರನ್ನು ಒಗ್ಗೂಡಿಸಿ ಬ್ರಿಟಿಷರ ಮೇಲೆ ಮತ್ತೆ ಯುದ್ಧಕ್ಕೆ ಸಿದ್ಧನಾದ ದೊಂಡಿಯಾ ವಾಘ್‌ನ ಶಕ್ತಿ ಸಾಮರ್ಥ್ಯಗಳು ಅಷ್ಟರಲ್ಲಾಗಲೇ ಬ್ರಿಟಿಷರಿಗೆ ಪರಿಚಯವಾಗಿತ್ತು.

ದೊಂಡಿಯಾ ಬ್ರಿಟಿಷರಿಗೆ ಸುಲಭವಾಗಿ ಸಿಗುವುದಿಲ್ಲವೆಂಬುದು ಬ್ರಿಟಿಷ್ ಸೈನ್ಯಕ್ಕೆ ತಿಳಿದಿತ್ತು. ಮಲಪ್ರಭ-ತುಂಗಭದ್ರಾ ನದಿಗಳ ನಡುವಣ ಉತ್ತರ ಕರ್ನಾಟಕವನ್ನು ಕಾರ್ಯಕ್ಷೇತ್ರ ಮಾಡಿಕೊಂಡ ದೊಂಡಿಯಾಗೆ ಮರಾಠ ನಾಯಕರು ಸರಿಯಾಗಿ ಕೈಜೋಡಿಸಲಿಲ್ಲ. ಈ ಭಾಗದಲ್ಲಿ ವಾಘ್ ಪ್ರಬಲನಾದರೆ ತಮ್ಮ ಅಧಿಪತ್ಯಕ್ಕೆ ಕುಂದಾಗುವುದೆಂಬ ಭೀತಿ ಅವರಲ್ಲಿ ಮೂಡಿತ್ತು.

ಬ್ರಿಟಿಷ್ ಸೈನ್ಯ ದೊಂಡಿಯಾ ವಾಘ್‌ನನ್ನು ಸತತವಾಗಿ ಹಿಂಬಾಲಿಸುತ್ತಲೇ ಇತ್ತು. ನಿಜಾಂ ರಾಜ್ಯದ ಕೋಣಗಲ ಎಂಬಲ್ಲಿ ದೊಂಡಿಯಾ ಶಿಬಿರ ಹೂಡಿದ್ದಾಗ, ಸೈನ್ಯ ಎಲ್ಲಡೆಯಿಂದ ಮುತ್ತಿಗೆ ಹಾಕಿತು. ದೊಂಡಿಯಾ ಧೈರ್ಯವಾಗಿ ಸೇನೆಯನ್ನು ಎದುರಿಸಲು ಮುಂದಾದ. ಆದರೆ ವೈರಿ ಸೈನ್ಯದ ಕೈ ಮೇಲಾಗಿ ಕೊನೆಗೆ ಗುಂಡೇಟಿಗೆ ಬಲಿಯಾದ.

ಬ್ರಿಟಿಷರ ವಿರುದ್ಧ ಪ್ರಬಲ ಪ್ರತಿರೋಧ ತೋರಿದ ದೊಂಡಿಯಾ ವಾಘ್ ತನ್ನ ಪುಟ್ಟ ಸೈನ್ಯದೊಂದಿಗೆ ಬೇರೆಯವರ ನೆರವಿಲ್ಲದೆ ಏಕಾಂಗಿಯಾಗಿ ಹೋರಾಟ ನಡೆಸಿದ್ದು ಆತನ ಯುದ್ಧ ಕೌಶಲ ಹಾಗೂ ಧೈರ್ಯ ಸಾಹಸಗಳನ್ನು ಕರ್ನಲ್ ವೆಲ್ಲೆಸ್ಲಿ ತನ್ನ ಜೀವನ ಚರಿತ್ರೆಯಲ್ಲಿ ಉಲ್ಲೇಖಿಸಿದ್ದಾರೆ.

ಸ್ವತಂತ್ರ ರಾಜ್ಯದ ಕನಸು ಕಂಡ ಬಿದನೂರಿನ ದೊಂಡಿಯಾ ವಾಘ್ ಕನ್ನಡ ನಾಡಿನಲ್ಲಿ ಕೆಲವು ತಿಂಗಳುಗಳ ಕಾಲ ಬ್ರಿಟಿಷರನ್ನು ಕಾಡಿದ್ದು, ಕೊನೆಗೆ ಅವರ ಕುಟಿಲತೆಗೆ ಪ್ರಾಣ ಕಳೆದುಕೊಂಡಿದ್ದು ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಅಚ್ಚಳಿಯದೆ ಉಳಿದಿದೆ. ■



Downloaded From:www.kpscvaani.com

### ಪ್ರವಾಸೋದ್ಯಮ ಇಲಾಖೆಯಿಂದ

# ರೇಷ್ಮೆ ಪ್ರವಾಸ ಯೋಜನೆ



**ರೇಷ್ಮೆನಗರಿ ಖ್ಯಾತಿಯನ್ನು ಇನ್ನೂ ಉತ್ತುಂಗಕ್ಕೇರಿಸಲು ರಾಮನಗರ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ರೇಷ್ಮೆ ಪ್ರವಾಸ ಯೋಜನೆಯನ್ನು ಸರ್ಕಾರವು ಪ್ರಾರಂಭಿಸಲಿದೆ.**

ಪಿ.ವಿ.ರಿಷಿಕೇಶ್

ರೈತನ ಆರ್ಥಿಕ ಸಬಲೀಕರಣಕ್ಕೆ ಒಂದು ಪ್ರಮುಖ ಬೇಸಾಯವಾಗಿರುವ ರೇಷ್ಮೆ ಕೃಷಿಯನ್ನು ಆಕರ್ಷಿಸಲು ಪ್ರವಾಸಿಗರಿಗೆ ರೇಷ್ಮೆ ಪ್ರವಾಸ ಮಾಡಿಸುವ ನಿಟ್ಟಿನಲ್ಲಿ ಕ್ರಿಯಾ ಯೋಜನೆಯನ್ನು ಸರ್ಕಾರವು ಸಿದ್ಧಪಡಿಸಿದ್ದು, ಅದಕ್ಕಾಗಿ ರಾಮನಗರದಲ್ಲಿ 75 ಕೋಟಿ ರೂ ವೆಚ್ಚದಲ್ಲಿ ಹೈಟೆಕ್ ರೇಷ್ಮೆ ಮಾರುಕಟ್ಟೆ ನಿರ್ಮಾಣಗೊಳ್ಳಲಿದೆ.

ರಾಮನಗರ ಜಿಲ್ಲೆಯು ರಾಜ್ಯಕ್ಕೆ ರೇಷ್ಮೆ ನಗರಿ ಎಂದೇ ಪ್ರಖ್ಯಾತಿ ಪಡೆದುಕೊಂಡಿದೆ. ವಿಶ್ವ ಪ್ರಸಿದ್ಧ ರೇಷ್ಮೆ ಸೀರೆಗಳು, ಬಟ್ಟೆಗಳು ಇಲ್ಲಿ ಉತ್ಪಾದನೆಯಾಗುತ್ತವೆ. ಈ ಜಿಲ್ಲೆಯಲ್ಲಿ ಕೃಷಿ ಇಲಾಖೆಯಷ್ಟೇ, ರೇಷ್ಮೆ ಇಲಾಖೆಯು ಪ್ರಮುಖ ಪಾತ್ರವಹಿಸುತ್ತದೆ. ಈ ಸಿಲ್ಕ್ ನಾಡಿನಲ್ಲಿ ರೇಷ್ಮೆಯು ಪ್ರಮುಖ ಬೆಳೆಯಾಗಿ ಪರಿಗಣಿಸಲಾಗಿದೆ.

ರೇಷ್ಮೆ ಉತ್ಪನ್ನಗಳನ್ನು ಒಳ್ಳೆಯ ಬೆಲೆಗೆ ಕೊಳ್ಳಬೇಕೆನಿಸಿರುವ ಪ್ರವಾಸಿಗರಿಗೆ, ರಾಮನಗರದ ರೇಷ್ಮೆ ಮಾರುಕಟ್ಟೆ ಒಳ್ಳೆಯ ಜಾಗ. ರೇಷ್ಮೆಗೆ ಅತಿ ದೊಡ್ಡ ಮಾರುಕಟ್ಟೆ ಹೊಂದಿರುವ ರಾಮನಗರವನ್ನು, ರೇಷ್ಮೆ ನಗರ, ರೇಷ್ಮೆ ಸೀಮೆ ಎಂದೂ ಕರೆಯುತ್ತಾರೆ.

ರೇಷ್ಮೆನಾಡು ರಾಮನಗರ ಜಿಲ್ಲೆಯ ರೈತರು, ರೇಷ್ಮೆ ಉದ್ಯಮದಲ್ಲಿ ತೊಡಗಿರುವವರು ಇದೀಗಾ "ರೇಷ್ಮೆ ಪ್ರವಾಸೋದ್ಯಮ" ಕ್ಕೆ ಮುಂದಾಗಿದ್ದಾರೆ. ಸರಕಾರವು ಸಹ ರಾಮನಗರದಲ್ಲಿ 75 ಕೋಟಿ ವೆಚ್ಚದಲ್ಲಿ ಹೈಟೆಕ್ ರೇಷ್ಮೆ ಮಾರುಕಟ್ಟೆ ನಿರ್ಮಾಣಕ್ಕೆ ಹಸಿರು ನಿಶಾನೆ ತೋರಿದೆ.



Downloaded From:www.kpscvaani.com



**ಗಣಕೀಕೃತ ರೇಷ್ಮೆ ಗೂಡು ಹರಾಜು ಸಭಾಂಗಣದ ಜೊತೆಗೆ ಆಧುನಿಕ ಸೌಲಭ್ಯಗಳನ್ನು ಹೊಂದಿರುವಂತೆ ಈ ಹೈಟೆಕ್ ರೇಷ್ಮೆ ಮಾರುಕಟ್ಟೆಯನ್ನು ನಿರ್ಮಾಣ ಮಾಡಲಾಗುತ್ತದೆ.**

ದೇಶದಲ್ಲಿ ರೇಷ್ಮೆ ಬೆಳೆಯುವ ರಾಜ್ಯಗಳ ಪೈಕಿ ಕರ್ನಾಟಕಕ್ಕೆ ಅಗ್ರ ಸ್ಥಾನ. 1785ರಲ್ಲಿ ಮೈಸೂರು ಸಂಸ್ಥಾನದಲ್ಲಿ ಆರಂಭವಾದ ರೇಷ್ಮೆ ಕೃಷಿ ರಾಜ್ಯದ ಉದ್ದಗಲಕ್ಕೂ ವ್ಯಾಪಿಸಿದೆ. ಆದಾಗ್ಯೂ ಹಳೇ ಮೈಸೂರು ಪ್ರಾಂತ್ಯದಲ್ಲಿ ಈ ವಲಯದ ಶೇ 88ರಷ್ಟು ಚಟುವಟಿಕೆಗಳು ಕೇಂದ್ರೀಕೃತವಾಗಿವೆ.

ರೇಷ್ಮೆ ಕೃಷಿ ಉಳಿದ ಕೃಷಿಗಳಂತಲ್ಲ. ಅದಕ್ಕೆ ತನ್ನದೇ ಆದ ನಾಜೂಕು ಬೇಕು. ರೇಷ್ಮೆ ಹುಳುಗಳಿಗೆ ಬೇಕಾದ ಆಹಾರ (ಹಿಪ್ಪು ನೇರಳೆ ಸೊಪ್ಪು) ಬೆಳೆಯಬೇಕು, ಸಾಂಸ್ಕೃತಿಕವಾಗಿ ವಿಶಿಷ್ಟ ಸ್ಥಾನ ಪಡೆದಿರುವ ಸಾಂಪ್ರದಾಯಿಕ ಬೆಳೆ ರೇಷ್ಮೆ (ಹಿಪ್ಪುನೇರಳೆ) ಕೃಷಿಯಿಂದ ಅನ್ನದಾತನ ಬದುಕು ಬದಲಾಗಲಿದ್ದು, ರೈತನ ಆರ್ಥಿಕ ಸಬಲೀಕರಣಕ್ಕೆ ಈ ರೇಷ್ಮೆ ಕಸುಬು ಮುಖ್ಯ ಬೇಸಾಯವಾಗಿದೆ. ಟಿಪ್ಪು ಸುಲ್ತಾನ್ ಮತ್ತು ಮೈಸೂರು ರಾಜ ಒಡೆಯರ ರಾಜಾಶ್ರಯದಲ್ಲಿ ವೈಭವವಾಗಿ ಬೆಳೆದು ಬಂದಿರುವ ರೇಷ್ಮೆ ಕೃಷಿಯು ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಮುಖ್ಯ ಬೆಳೆಯಾಗಿ ಅಗ್ರಸ್ಥಾನ ಪಡೆದಿದೆ.

ಈ ಪ್ರದೇಶವು ರೇಷ್ಮೆ ತಯಾರಿಕೆ ಅಥವಾ ರೇಷ್ಮೆ ಬೇಸಾಯಕ್ಕೆ ಹೆಸರುವಾಸಿ. ಇಲ್ಲಿ ತಯಾರಾಗುವ ರೇಷ್ಮೆ "ಮೈಸೂರು ರೇಷ್ಮೆ" ಎಂದೇ ಹೆಸರುವಾಸಿ. ರಾಮನಗರ ಜಿಲ್ಲೆಯಲ್ಲಿ ಉತ್ಪಾದನೆಯಾಗುವ ರೇಷ್ಮೆಗೂಡು ಜಿಲ್ಲೆಯ ಮಾರುಕಟ್ಟೆಗಳಲ್ಲಿ ಮಾತ್ರವಲ್ಲದೆ ಕೋಲಾರ ಚಿಕ್ಕಬಳ್ಳಾಪುರ, ಚಿಂತಾಮಣಿ, ಶಿಡ್ಲಘಟ್ಟ, ಕೊಳ್ಳೇಗಾಲ, ಮೈಸೂರು ಹಾಗೂ ರಾಜ್ಯದ ಬೇರೆ ಜಿಲ್ಲೆಗಳಲ್ಲಿಯೂ ಸಹ ಮಾರಾಟವಾಗುತ್ತಿದೆ.

ಜಿಲ್ಲೆಯ 3 ತಾಲೂಕುಗಳಲ್ಲಿ 95 ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯ 1097 ಗ್ರಾಮಗಳಲ್ಲಿ ಒಟ್ಟು 20068.83 ಹೆಕ್ಟೇರ್ ಪ್ರದೇಶದಲ್ಲಿ ಹಿಪ್ಪುನೇರಳೆಯನ್ನು ಬೆಳೆಯಲಾಗುತ್ತಿದ್ದು, ಜಿಲ್ಲೆಯ ಪ್ರಮುಖ ಬೆಳೆಯಾಗಿ ಪರಿಗಣಿಸಲ್ಪಟ್ಟಿದೆ. ಇದರಲ್ಲಿ 27012 ರೇಷ್ಮೆ ಬೆಳೆಗಾರರಿದ್ದು, ಇವರೆಲ್ಲಾ ಇದರಲ್ಲಿಯೇ ಜೀವನೋಪಾಯವನ್ನು ಕಂಡು ಕೊಂಡಿದ್ದಾರೆ. ಇಲ್ಲಿ ಉತ್ತಮ ಗುಣಮಟ್ಟದ ರೇಷ್ಮೆಯು ಉತ್ಪಾದನೆಯಾಗುತ್ತಿದ್ದು, ಬೇಡಿಕೆಯೂ ಇದೆ. ರೈತರಿಗೆ ರೇಷ್ಮೆ ಕೃಷಿ ಉತ್ತಮ ಲಾಭ ತಂದುಕೊಡುವ ಕೃಷಿ ಚಟುವಟಿಕೆಯಾಗಿದೆ.

ಈ ಭಾಗದ ಜನರು ಉತ್ಪಾದನೆ ಮಾಡಿದ ರೇಷ್ಮೆಯನ್ನು ಏಷಿಯಾದ ಎರಡನೆ ಅತಿ ದೊಡ್ಡ ರೇಷ್ಮೆ ಗೂಡು ಮಾರುಕಟ್ಟೆ ಎಂದೇ ಖ್ಯಾತವಾದ ರಾಮನಗರದ ಮಾರುಕಟ್ಟೆಗೆ ತಮ್ಮ ಉತ್ಪನ್ನಗಳನ್ನು ಸರಬರಾಜು ಮಾಡುತ್ತಾರೆ. ಇದೀಗಾ ರಾಮನಗರದಲ್ಲಿ ಅತ್ಯಾಧುನಿಕ ಹೈಟೆಕ್ ರೇಷ್ಮೆ ಮಾರುಕಟ್ಟೆ ನಿರ್ಮಾಣಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಿ ಸರ್ಕಾರದ ಆದೇಶ ಹೊರಡಿಸಲಾಗಿದೆ. ರಾಮನಗರ-ಚನ್ನಪಟ್ಟಣ ಅವಳಿ ನಗರದ ಹೈಟೆಕ್ ರೇಷ್ಮೆ ಮಾರುಕಟ್ಟೆ ನಿರ್ಮಿಸಲು ನಿರ್ಧರಿಸಲಾಗಿದ್ದು, ಜನವರಿ 27 ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಒಪ್ಪಿಗೆ ನೀಡಲಾಗಿತ್ತು. ಇದೀಗ ಆ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶ ಹೊರಡಿಸಲಾಗಿದೆ.

ರಾಮನಗರ ರೇಷ್ಮೆ ಮಾರುಕಟ್ಟೆಯಲ್ಲಿ ಹೆಚ್ಚಿನ ಸ್ಥಳಾವಕಾಶದ ಜೊತೆಗೆ ಅತ್ಯಾಧುನಿಕ ಸೌಲಭ್ಯಗಳನ್ನು ಒದಗಿಸುವುದರಿಂದ ಮಾರುಕಟ್ಟೆ ಧಾರಣೆ ಹೆಚ್ಚಾಗುವ ಸಂಭವವಿರುತ್ತದೆ. ಜೊತೆಗೆ ಏಷ್ಯಾದಲ್ಲೇ ಇದೊಂದು ಮಹತ್ವದ ಮಾರುಕಟ್ಟೆಯಾಗಿ ಪರಿವರ್ತನೆ ಹೊಂದಲಿದೆ.

**"ರೇಷ್ಮೆ ಪ್ರವಾಸ" ಯೋಜನೆ:**

ಪ್ರವಾಸ ಮತ್ತು ಪಿಕ್ನಿಕ್ ಸ್ಪಾಟ್‌ಗಳ ವಿಷಯದಲ್ಲಿ ರಾಮನಗರ ಜಿಲ್ಲೆ ಸಮೃದ್ಧವಾಗಿದೆ. ಇಲ್ಲಿ ಎಲ್ಲವೂ ಇದೆ. ದಟ್ಟ ಅರಣ್ಯ, ಕಿರು ಅರಣ್ಯ, ಜಲಾಶಯ, ಜಲಾಶಯ ಹಿನ್ನೀರು, ಪುರಾತನ ದೇಗುಲಗಳು, ಧಾರ್ಮಿಕ ಸ್ಥಳಗಳು, ಮನೋರಂಜನಾ ಪಾರ್ಕ್‌ಗಳು, ಆಕರ್ಷಕ ರೆಸಾರ್ಟ್‌ಗಳು, ಟ್ರೆಕ್ಕಿಂಗ್ ಸ್ಪಾಟ್‌ಗಳು ಹೀಗೆ ಪ್ರತಿಯೊಂದು ರಾಮನಗರ ಜಿಲ್ಲೆಯಲ್ಲಿದೆ. ಇದೀಗಾ ಪ್ರವಾಸೋದ್ಯಮ ಇಲಾಖೆಯಿಂದ ರೇಷ್ಮೆ ಪ್ರವಾಸ ಯೋಜನೆ ಜಾರಿಗೆ ಮುಂದಾಗಿದೆ.

ಪ್ರವಾಸೋದ್ಯಮ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ (KSTDC) ಈಗಾಗಲೇ ರಾಮನಗರ ಸುತ್ತಮುತ್ತ ರೇಷ್ಮೆ ಕೃಷಿ ಪ್ರವಾಸಕ್ಕೆ ಪ್ರಯಾಣಿಕರನ್ನು ಆಕರ್ಷಿಸುವ ಹಾಗೂ ಕರೆದೊಯ್ಯುವ ನಿಟ್ಟಿನಲ್ಲಿ ಕ್ರಿಯಾ ಯೋಜನೆಯನ್ನು ಜಾರಿಗೆ ತರಲು ಸಕಲ ಸಿದ್ಧತೆಯಲ್ಲಿ ತೊಡಗಿದ್ದು, ಪ್ರವಾಸ, ಮನರಂಜನೆ ಜತೆಗೆ ಶಾಪಿಂಗ್‌ಗೂ ಅವಕಾಶ ಕಲ್ಪಿಸಲಾಗುತ್ತದೆ.

ಕ್ಷೇತ್ರ ಪ್ರವಾಸದಲ್ಲಿ ರೇಷ್ಮೆ ಬೆಳೆಯನ್ನು ಅಂತರ ಬೇಸಾಯದಲ್ಲಿ ಮಾಡುವುದು ಹೇಗೆ ಮತ್ತು ರೇಷ್ಮೆ ಕೃಷಿಯನ್ನು ವೈಜ್ಞಾನಿಕವಾಗಿ ಕಡಿಮೆ ಖರ್ಚು ಮತ್ತು ಯಾವ ಸಮಯದಲ್ಲಿ ಬೆಳೆಯನ್ನು ಬೆಳೆಯಬೇಕು, ರೇಷ್ಮೆ ಕೃಷಿಯಲ್ಲಿ ಮಣ್ಣಿನ ಫಲವತ್ತತೆ ಮತ್ತು ಗುಣಮಟ್ಟ ಅದರ ಪ್ರಮುಖ್ಯತೆ, ಅದರಿಂದ ಏನು ಲಾಭವಾಗುತ್ತದೆ. ಗೊಬ್ಬರ ಕೊಡುವುದು ಹೇಗೆ, ವೈಜ್ಞಾನಿಕವಾಗಿ ಯಂತ್ರ ಬಳಸಿ ತೋಟ ನಿರ್ವಹಣೆ ಮಾಡುವುದು ಹೇಗೆ ಎಂಬುದರ ಬಗ್ಗೆ ಪ್ರವಾಸಿಗರಿಗೆ ರೈತರು ಮಾಹಿತಿ ನೀಡುತ್ತಾರೆ. ■



Downloaded From:www.kpscvaani.com

# ಸ್ವಸ್ಥ ವಿಶ್ವಕ್ಕೆ ಯೋಗದ ಕೊಡುಗೆ

**ಯೋಗವೆಂದರೆ ಶಾರೀರಿಕ ವ್ಯಾಯಾಮವಲ್ಲ. ಅದು ಮನಸ್ಸಿನ ಸಂಭ್ರಮದ ಸಾಧನ. ಯೋಗಾಭ್ಯಾಸದಿಂದ ಬಾಹ್ಯ ಜಗತ್ತನ್ನು ನೋಡುವ ನಮ್ಮ ದೃಷ್ಟಿಕೋನ ಬದಲಾಗುವುದಿಲ್ಲ. ಬದಲಿಗೆ ನಾವೇ ಬದಲಾಗುತ್ತೇವೆ.**



ಡಾ. ಗುರುರಾಜ ಪೋಶೆಟ್ಟಿಹಳ್ಳಿ

**"ಹಿತ್ತಲ ಗಿಡ ಮದ್ದಲ್ಲ"** ಎಂಬ ನಾಣ್ಣುಡಿಯಂತೆ ಅದು ಮದ್ದಾಗುವುದು ಹೊರಗಿನವರು ಆ ಗಿಡವನ್ನು ಅರಿಸಿಕೊಂಡಾಗ. ವಿದೇಶಿಯರು ತಮ್ಮ ಆತ್ಮಶಾಂತಿ, ದೇಹಸ್ವಾಸ್ಥ್ಯಕ್ಕಾಗಿ ಭಾರತದ ಯೋಗವಿದ್ಯೆಯ ಕಡೆ ತಿರುಗಿ ನೋಡುತ್ತಿರುವಾಗ, ನಮಗೆ ನಮ್ಮಲ್ಲೊಂದು ಇಂತಹ ಮಹಾವಿದ್ಯೆ ಇದೆ ಎಂಬ ಅರಿವುಂಟಾಗಿದೆ. ಯೋಗ ಅಂತರ್ಯದ ಅರಿವನ್ನು ಹೆಚ್ಚಿಸುತ್ತದೆ. ಆಧ್ಯಾತ್ಮಯಾನದಲ್ಲಿ ಸಾರ್ಥಕತೆ ಹೊಂದುವಂತೆ ಮಾಡುತ್ತದೆ.

ನಾವೂ ಕಲಿಯಬೇಕೆಂಬ ಎಚ್ಚರ ಉಂಟಾಗಿದೆ. ಗಾಳಿ, ನೀರಿನಂತೆ, ಆಹಾರ ಪಾನೀಯಗಳಂತೆ ಯೋಗಸಾಧನೆಯೂ ಆರೋಗ್ಯ ಜೀವನಕ್ಕೆ ಅತ್ಯಾವಶ್ಯಕ. ಸತ್ವಹೀನ ಆಹಾರ, ಪರಿಸರ ಮಾಲಿನ್ಯ, ಪ್ರಕ್ಷುಬ್ಧ ವಾತಾವರಣಗಳ ಇಂದಿನ ಸನ್ನಿವೇಶದಲ್ಲಿ, ಗಂಡು-ಹೆಣ್ಣೆನ್ನದೆ ಸರ್ವರೂ ಕ್ಷಣ-ಕ್ಷಣಕ್ಕೂ ಉದ್ವಿಗ್ನತೆಯಿಂದ ಬಳಲಿ ಬೆಂಡಾಗುತ್ತಿರುವಾಗ, ಮನಶಾಂತಿ ಆತ್ಮಕಲ್ಯಾಣಕ್ಕಾಗಿ, ಯೋಗ ಮಾರ್ಗವೇ ಜೀವನ್ಮುಕ್ತಿಗೆ ದಾರಿದೀಪವಾಗಿದೆ.


Downloaded From:www.kpscvaani.com



ಯೋಗವು ಶಿಸ್ತನ್ನು ಕಲಿಸುತ್ತದೆ. ದೇಹ ಮತ್ತು ಮನಸ್ಸುಗಳನ್ನು ಹತೋಟಿಯಲ್ಲಿಡುವ ವಿಧಾನವನ್ನು ಬೋಧಿಸುತ್ತದೆ. ಎಲ್ಲ ಸಮಸ್ಯೆಗಳನ್ನು ದೂರವಿಡುತ್ತದೆ. ಇಂತಹ ಬಹುಉಪಕಾರಿಯಾದ ಯೋಗವನ್ನು ದೈನಂದಿನ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಮಾನಸಿಕ ಒತ್ತಡವನ್ನು ದೂರಮಾಡಲು ಇರುವ 'ದಿವ್ಯೌಷಧ' ಯೋಗ. ಯೋಗ ಒಂದು ವಿಶಿಷ್ಟ ಸಾಧನ. ಯೋಗ ಮತ್ತು ಆಯುರ್ವೇದ ಮೊಟ್ಟಮೊದಲು ಪ್ರಾರಂಭವಾಗಿದ್ದು ಭಾರತ ದೇಶದಲ್ಲೇ. ಇವುಗಳ ಪ್ರಯೋಜನವನ್ನು ಪಡೆದುಕೊಳ್ಳುತ್ತಿರವುದು ಮಾತ್ರ ಬೇರೆ ಬೇರೆ ದೇಶದ ಜನರು. ಆಯುರ್ವೇದದ ವಿಜ್ಞಾನವು ನ್ಯಾಯ, ವೈಶೇಷಿಕ, ಸಾಂಖ್ಯ, ಯೋಗ ಪೂರ್ವ ಮೀಮಾಂಸ ಮತ್ತು ಉತ್ತರ ಮೀಮಾಂಸ ಅಥವಾ ವೇದಾಂತಗಳೆಂಬ ದರ್ಶನಗಳನ್ನೊಳಗೊಂಡ ವಿಜ್ಞಾನ. ಯೋಗಶಾಸ್ತ್ರವು ಆಯುರ್ವೇದದ ಒಂದು ವಿಭಾಗ ಎಂದರ್ಥ. ಅಂತೆಯೇ ಯೋಗಶಾಸ್ತ್ರದಲ್ಲೇ ಚಿಕಿತ್ಸಾಶಾಸ್ತ್ರವೂ ಅಡಗಿದ್ದು, ಯೋಗಶಾಸ್ತ್ರದ ಸೂತ್ರಧಾರಿ ಪತಂಜಲಿ ಮಹರ್ಷಿಯವರು.

ಆದುದರಿಂದ ವೈದ್ಯನಾದವನಿಗೆ ಯೋಗಶಾಸ್ತ್ರದ ಪರಿಜ್ಞಾನವಿರುವುದೂ, ಯೋಗಿಯಾದವನಿಗೆ ವೈದ್ಯಶಾಸ್ತ್ರದ ಅನುಭವವಿರುವುದೂ ಅಗತ್ಯ. ಹವಾಮಾನ, ವಯೋಮಾನ ಇವುಗಳನ್ನು ಅನುಸರಿಸಿ, ಅಗತ್ಯವಿದ್ದಲ್ಲಿ ಕೆಲವು ಔಷಧಿಗಳನ್ನು ರೋಗಕ್ಕನುಸಾರವಾಗಿ ನೀಡಬೇಕು. ಆತನ ಮಾನಸಿಕ ಸ್ಥಿತಿ, ವಯಸ್ಸನ್ನು ಹಾಗೂ ಚಿಕಿತ್ಸಿಸುವ ಕಾಲವನ್ನು ಮುಂದಿಟ್ಟುಕೊಂಡು ಪ್ರಥಮವಾಗಿ ನಿಯಮಗಳ ಪರಿಜ್ಞಾನವನ್ನು ಆತನಿಗೆ ತಿಳಿಸಿ, ಯೋಗಚಿಕಿತ್ಸೆಯನ್ನು ಪ್ರಾರಂಭಿಸುವುದು ಒಳ್ಳೆಯದು.

ರೋಗಿಯ ಯಾವ ದೇಹಭಾಗಕ್ಕೆ ಚಿಕಿತ್ಸೆ ಬೇಕು ಎಂಬುದಕ್ಕೆ ಅನುಸಾರವಾಗಿ ಚಿಕಿತ್ಸಕನು ಶಾಸ್ತ್ರೋಕ್ತವಾಗಿ ಅಗತ್ಯವಿರುವ ಆಸನಗಳನ್ನು ಕಲಿಸಿಕೊಡಬೇಕು. ಅದನ್ನು ರೋಗಿಯಿಂದ ನಿತ್ಯ ಅಭ್ಯಾಸ ಮಾಡಿಸಬೇಕು. ಆಗ ಮಾಂಸ ಖಂಡಗಳು ಸ್ವಸ್ಥ ಸ್ಥಿತಿಯನ್ನು ಪಡೆದು ರೋಗಪ್ರತಿಬಂಧಕ ಹೊಂದಲು ಹಾಗೂ ರೋಗ ಗುಣವಾಗಲು ಅನುಕೂಲವಾಗುವುದು. ಮಾನವ ಜೀವನಕ್ಕೆ ಅತ್ಯಂತ ಮೂಲಭೂತ ವಸ್ತುವೆಂದರೆ ಗಾಳಿ.

ಈ ಗಾಳಿಯನ್ನು ದೇಹದ ಒಳಗೆ ಸೇವಿಸುವ, ದೇಹದಲ್ಲಿ ಧಾರಣೆ ಮಾಡುವ, ದೇಹದಿಂದ ಹೊರಗೆ ಹಾಕುವ ಕ್ಷಮಗಳಿಗೆ ಯೋಗಶಾಸ್ತ್ರದಲ್ಲಿ 'ಪೂರಕ', 'ಕುಂಭಕ', 'ರೇಚಕ'ಗಳೆಂಬ ಹೆಸರುಗಳಿವೆ. ಕ್ರಮಬದ್ಧವಾಗಿ ಆಚರಿಸುವ ಈ ಕ್ರಮಕ್ಕೆ "ಪ್ರಾಣಾಯಾಮ" ಎಂಬ ಹೆಸರನ್ನು ಯೋಗಶಾಸ್ತ್ರದಲ್ಲಿ ಹೇಳಲ್ಪಟ್ಟಿದೆ. ಪ್ರಾಣಾಯಾಮದ ಬೇರೆ ಬೇರೆ ವಿಧಗಳನ್ನು ಕ್ರಮವಾಗಿ ಅಭ್ಯಾಸ ಮಾಡುವ ವಿಧಾನಗಳನ್ನೂ ಯೋಗಶಾಸ್ತ್ರ ವಿವರಿಸಿದೆ.

ಮಾನವಕುಲದಲ್ಲಿ ಬರತಕ್ಕ ಎಲ್ಲಾ ವ್ಯಾಧಿಗಳಿಗೂ ಯೋಗದಿಂದಲೇ ಚಿಕಿತ್ಸೆ ದೊರಕುವುದು ಸಾಧ್ಯವಿಲ್ಲ. ಆದರೆ ಯೋಗಾಭ್ಯಾಸವನ್ನು ಕ್ರಮವಾಗಿ ಆಚರಿಸುವ ವ್ಯಕ್ತಿಯು ನಿರೋಗಿಯಾಗಿ ಬಾಳಬಹುದೆಂಬುದು ಅನುಭವ. ಯೋಗವನ್ನು ದಿನನಿತ್ಯ ಮಾಡುವುದರಿಂದ ನೂರಾರು ಮಾನಸಿಕ ಚಿಂತೆಗಳು/ಸಮಸ್ಯೆಗಳು ಮಾಯವಾಗಿ ಮನಸ್ಸು ಪ್ರಫುಲ್ಲವಾಗಿರುತ್ತದೆ. ಯೋಗಾಸನ, ಪ್ರಾಣಾಯಾಮಗಳ ಜೊತೆಗೆ ಧ್ಯಾನ, ಭಕ್ತಿಯೋಗ ಮತ್ತು ಜ್ಞಾನಯೋಗಗಳನ್ನು ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳುವುದರಿಂದ ಮಾನಸಿಕ ಸ್ವಾಸ್ಥ್ಯ, ದೈಹಿಕ ಆರೋಗ್ಯವನ್ನು ಪಡೆದುಕೊಳ್ಳಬಹುದಾಗಿದೆ.

## ಯೋಗ ದಿನಾಚರಣೆ

ಯೋಗವನ್ನು ಕುರಿತಂತೆ ಹಲವಾರು ವ್ಯಾಖ್ಯೆಗಳು ಬಹು ಹಿಂದಿನಿಂದಲೂ ಲಭ್ಯವಿದೆ. ನಾವಿಲ್ಲಿ ಮುಖ್ಯವಾಗಿ ನಾಲ್ಕು ವ್ಯಾಖ್ಯೆಗಳನ್ನು ಗಮನಿಸಬಹುದು. 'ಯೋಗಃ ಕರ್ಮಸು ಕೌಶಲಂ' ಇದನ್ನು ಶ್ರೀಕೃಷ್ಣನು ಅರ್ಜುನನಿಗೆ ಭಗವದ್ಗೀತೆಯಲ್ಲಿ ಹೇಳಿರುವಂತೆ ಕೆಲಸದಲ್ಲಿ ಕುಶಲತೆ ಪಡೆಯುವುದೇ ಯೋಗವೆನಿಸಿಕೊಳ್ಳುತ್ತದೆ. 'ಸಮತ್ವಂ ಯೋಗಮುಚ್ಯತೇ' ಜೀವನದಲ್ಲಿ ನೋವು–ನಲಿವು, ಸಿಹಿ–ಕಹಿ, ಉಷ್ಣ–ಶೀತ, ಕತ್ತಲೆ–ಬೆಳಕು ಇತ್ಯಾದಿ ದ್ವಂದ್ವಗಳು ವ್ಯಾಪಕ ಮತ್ತು ನಿರಂತರ. ಈ ದ್ವಂದ್ವಗಳನ್ನು ಸಮಾನವಾಗಿ ಸ್ವೀಕರಿಸುವ ಮನೋಧರ್ಮವನ್ನು ರೂಪಿಸಿಕೊಂಡು ದುಃಖ ಬಂದಾಗ ಕುಗ್ಗದೆ, ಸುಖ ಬಂದಾಗ ಮೈಮರೆಯದೆ ಎರಡನ್ನೂ ಸಮಾನವಾಗಿ ಸ್ವೀಕರಿಸುವ ಮನೋಧರ್ಮವನ್ನು ರೂಪಿಸಿಕೊಳ್ಳುವುದೇ ಯೋಗ.

'ಯೋಗ ಪಿತಾಮಹಾ' ಎಂದು ಕರೆಸಿಕೊಳ್ಳುವ ಪತಂಜಲಿ ಮಹಾಮುನಿಗಳು 'ಯೋಗಶ್ಚಿತ್ತವೃತ್ತಿನಿರೋಧಃ' ಎಂದು ವ್ಯಾಖ್ಯೆಯನ್ನು ಮುಂದಿಟ್ಟಿದ್ದಾರೆ. ಯೋಗ ಎಂದರೆ ಚಿತ್ತವೃತ್ತಿಗಳ ನಿರೋಧ. ಪ್ರಮಾಣ, ವಿಪರ್ಯಯ, ವಿಕಲ್ಪ, ನಿದ್ರಾ, ಸ್ಮೃತಿ ಎಂಬ ಚಿತ್ತವೃತ್ತಿಗಳು ಮತ್ತು ದುಃಖಕ್ಕೆ ಕಾರಣವಾದ ಅವಿದ್ಯಾ, ಅಸ್ಮಿತಾ, ರಾಗ, ದ್ವೇಷ, ಅಭನಿವೇಶ ಮುಂತಾದ ಕ್ಲೇಶಗಳ, ವ್ಯಾದಿ (ವೈಷಮ್ಯ), ಸ್ತ್ಯಾನ (ಸೋಮಾರಿತನ), ಸಂಶಯ (ಅನುಮಾನ), ಪ್ರಮಾದ (ಆತುರತೆ), ಆಲಸ್ಯ (ಜಡತ್ವ), ಅವಿರತಿ (ನಿರಾಸಕ್ತಿ), ಭ್ರಾಂತಿದರ್ಶನ (ಭ್ರಾಂತಿ), ಅಲಬ್ಧಭೂಮಿಕತ್ವ (ಮನಸ್ಸು ಏಕಾಗ್ರತೆಯಿಲ್ಲದಿರುವುದು), ಅನವಸ್ಥಿತತ್ವ (ಏಕಾಗ್ರತೆ ಬಹುಕಾಲ ಉಳಿಯದಿರುವುದು) ಮುಂತಾದ ಚಿತ್ತ ವಿಕ್ಷೇಪಗಳನ್ನು ನಿಯಂತ್ರಣಗೊಳಿಸುವುದೇ ಯೋಗ.

"ಮನಃ ಪ್ರಶಮನೋಪಾಯ: ಯೋಗಃ ಇತ್ಯಭಿಧೀಯತೇ" ಅರ್ಥಾತ್ ಮನಸ್ಸನ್ನು ಪ್ರಶಮನಗೊಳಿಸುವ, ಶಾಂತಗೊಳಿಸುವ, ಉಪಾಯವೇ ಯೋಗ ಎನ್ನುವ ವಸಿಷ್ಠರ ಸೂತ್ರ.

**ಯೋಗಫಲಗಳು:** ನಿರ್ದಿಷ್ಟವಾದ ಒಂದು ಗುರಿ ತಲುಪಲು ವಿವಿಧ ಮಾರ್ಗಗಳು ಇರುವಂತೆಯೆ ಯೋಗದಲ್ಲಿಯೂ


Downloaded From:www.kpscvaani.com



ಸಂಯೋಗ ಹೊಂದಲು ಜೀವಾತ್ಮ ಪರಮಾತ್ಮ ಎಂಬ ಹಲವಾರು ಮಾರ್ಗಗಳಿವೆ. ಅವುಗಳಲ್ಲಿ ಕರ್ಮಯೋಗ, ಭಕ್ತಿಯೋಗ, ಜ್ಞಾನಯೋಗ ಇವು ಪ್ರಮುಖವಾಗಿದೆ.

**ಕರ್ಮಯೋಗ:** ನಾವು ಮಾಡುವ ಕೆಲಸಗಳಿಗೆಲ್ಲಾ ಫಲ ಉಂಟು. ಆದರೆ ಫಲದ ಕಡೆ ಗಮನ ನೀಡಕೂಡದು. ಇದನ್ನೇ 'ನಿಷ್ಕಾಮ ಕರ್ಮ'ವೆಂತಲೂ ಕರೆಯುತ್ತಾರೆ. ಮಾಡುವ ಕೆಲಸದಲ್ಲಿ ವ್ಯಾಮೋಹವಿಲ್ಲದ ಮನೋಭಾವ ಇದ್ದಾಗ ಮನಸ್ಸು ಕರ್ಮಗಳ ಬಂಧನದಿಂದ ಮುಕ್ತವಾಗುವುದು. ಆಗ ಮನಸ್ಸು ಸ್ಥಿರತೆ ಮತ್ತು ಶಾಂತಿಯಿಂದ ಕೂಡಿರುತ್ತದೆ. ಇದೇ ಕರ್ಮಯೋಗ.

**ಭಕ್ತಿಯೋಗ:** ಅಧ್ಯಯನ, ತರ್ಕ, ಜಿಜ್ಞಾಸೆ ನಮ್ಮಿಂದ ಸಾಧ್ಯವಿಲ್ಲ ಎಂದಾದರೆ ಮತ್ತೊಂದು ಮಾರ್ಗವನ್ನು ನಾವು ಆರಿಸಿಕೊಳ್ಳಬಹುದು, ಅದು ಭಕ್ತಿಯಿಂದ. ನಾವು ಸ್ವಭಾವತಃ ಭಾವುಕರಾಗಿದ್ದಲ್ಲಿ, ದೇವರು–ಧರ್ಮ ಇತ್ಯಾದಿಗಳ ಬಗ್ಗೆ ಗಮನ ನೀಡಬಲ್ಲರಾಗಿದ್ದಲ್ಲಿ ಭಕ್ತಿಯೋಗದ ಮಾರ್ಗದಲ್ಲಿ ಮುನ್ನಡೆದು ಗುರಿ ತಲುಪಬಹುದು. ಆಸ್ತಿ, ಅಂತಸ್ತು, ಅಧಿಕಾರಗಳು ಗೌಣ, ಭಕ್ತಿ, ಭಾವನೆಗಳೇ ಇಲ್ಲಿ ಪ್ರಧಾನ. ಭಜನೆ, ಪ್ರಾರ್ಥನೆ, ಪೂಜೆ, ಹೋಮ, ಹವನ, ಜಪ, ತಪ, ಧ್ಯಾನ, ಮೌನ ಈ ಮಾರ್ಗಗಳ ಮೂಲಕ ಗುರಿ ತಲುಪುವುದೇ ಭಕ್ತಿಯೋಗ. ಶ್ರೀನಿವಾಸ ನಾಯ್ಕರಿಗೆ ಜೀವನದಲ್ಲಿ ಯಾವ ಕೊರತೆಯಿತ್ತು ಹೇಳಿ? ಹತ್ತು ತಲೆಮಾರು ಕುಳಿತು ಊಟ ಮಾಡಿದರೂ ಕರಗದಷ್ಟು ಸಂಪತ್ತು ಅವರಲ್ಲಿತ್ತು ಒಂದರ್ಥದಲ್ಲಿ ಅವರು ನವಕೋಟಿ ನಾರಾಯಣ. ಆದರೆ ಅವೆಲ್ಲವನ್ನೂ ಬಿಟ್ಟು ಪುರಂದರದಾಸರಾಗಿ ಹೊರ ಬಂದುದೇಕೆ? ರಾಜ್ಯದ ಒಡೆಯನಾಗಿದ್ದ ಕನಕದಾಸರು ದಾಸರಾಗಿ ಹೊರಬಂದುದೇಕೆ? ಅಕ್ಕಮಹಾದೇವಿ ಕೌಶಿಕನ ಪತ್ನಿಯಾಗಿ ಮೆರೆಯಬಹುದಾದವಳು, ಮೀರಾಬಾಯಿ ರಾಜಸ್ತಾನದ ರಾಜಕುಮಾರಿಯಾಗಿ ಸುಖ ಅನುಭವಿಸಬಹುದಾದವಳು. ಇವರೆಲ್ಲಾ ತಮ್ಮ ವೈಭೋಗ ಜೀವನವನ್ನು ತೊರೆದು ಭಕ್ತಿಮಾರ್ಗದಲ್ಲಿ ಮುನ್ನಡೆಯುತ್ತಾ ಜನಜಾಗೃತಿಗೊಳಿಸಿದರು.

**ಜ್ಞಾನಯೋಗ:** ವೇದ, ಉಪನಿಷತ್ತು, ಪುರಾಣ, ಇತಿಹಾಸಗಳ ಅಧ್ಯಯನದ ಮೂಲಕ, ಸಜ್ಜನರ ಸಹವಾಸ, ಸತ್ಸಂಗ, ತರ್ಕ, ಮೀಮಾಂಸೆ ಇತ್ಯಾದಿ ಮಾಧ್ಯಮಗಳ ಮೂಲಕ ನಾನು ಯಾರು? ನನ್ನ ಕೈ, ಕಾಲು, ನನ್ನ ಕಣ್ಣು ಇವುಗಳಲ್ಲದರ ಹಿಂದಿರುವ 'ನಾನು' ಯಾರು, ಈ ಸೃಷ್ಟಿಯ ಎಲ್ಲಾ ಚಟುವಟಿಕೆಗಳನ್ನು ನಿಯಂತ್ರಿಸುತ್ತಿರುವ ಶಕ್ತಿ ಯಾವುದು? ಆ ಶಕ್ತಿಗೂ ಜೀವಾತ್ಮನಿಗೂ ಇರುವ ಸಂಬಂಧವೇನು? ಎಂಬಿತ್ಯಾದಿ ವಿಷಯಗಳ ಬಗ್ಗೆ ಅಧ್ಯಯನ, ತರ್ಕ, ಜಿಜ್ಞಾಸೆಗಳ ಮಾರ್ಗದಲ್ಲಿ ಮುಂದುವರೆದು ಗುರಿ ತಲುಪುವುದೇ ಜ್ಞಾನಯೋಗ. ಶಂಕರ, ಮಧ್ವ, ರಾಮಾನುಜಾಚಾರ್ಯರೇ ಮೊದಲಾದ ತತ್ವಜ್ಞಾನಿಗಳು, ದಾರ್ಶನಿಕರು ಈ ಪಥದಲ್ಲಿ ಮುನ್ನಡೆದವರು.

**ಶಿಸ್ತಿನ ಪ್ರತಿರೂಪ:** ಯೋಗವು ಒಂದು ಜ್ಞಾನ. ಇದು ದೇಹ, ಉಸಿರು, ಮನಸ್ಸು, ಆತ್ಮ ಹಾಗೂ ಅಂತಿಮವಾಗಿ ಪೂರ್ತಿ ಬ್ರಹ್ಮಾಂಡದೊಂದಿಗೆ ವ್ಯವಹರಿಸುತ್ತದೆ. ಜನ ಯೋಗವನ್ನು ಕೇವಲ ಭೌತಿಕ ಶರೀರಕ್ಕೆ ಮಾತ್ರ ಸಂಬಂಧಿಸಿದ ಸಂಗತಿ ಎಂದು ಆಲೋಚಿಸುತ್ತಾರೆ. ಯೋಗವು ಪ್ರಯೋಗ ಮತ್ತು ಸಿದ್ಧಾಂತಗಳನ್ನು ಒಳಗೊಂಡಿರುವ ಶಿಸ್ತು. ಜ್ಞಾನದ ಇತರ ವಿಷಯಗಳಂತೆ ಇದೂ ಒಂದು ಶಿಸ್ತಿನ ಅಧ್ಯಯನ ಮತ್ತು ಸಾಧನೆ. ಪತಂಜಲಿಯ ಯೋಗ ಸೂತ್ರವು, ನಾವು ಏನು ಮಾಡಬೇಕು, ಏನು ಮಾಡಬಾರದು ಎಂಬುದಾಗಿ ಹೇಳುವುದಿಲ್ಲ. ಆದರೆ ಹೇಗೆ ಮಾಡಬೇಕು ಎಂಬುದನ್ನು ಉಪದೇಶಿಸುತ್ತದೆ. ಅದು ನೋವುಗಳು ಹಾಗೂ ಸಂಕಟಗಳಿಂದ ಮುಕ್ತರಾಗಲು ನಿಮಗೆ ನೆರವಾಗುತ್ತದೆ ಮತ್ತು ನೋವುಗಳು ಹಾಗೂ ಸಂಕಟಗಳಿಂದ ಮುಕ್ತವಾದ ಸ್ಥಿತಿಯನ್ನು ಪಡೆಯಲು ನೆರವಾಗುತ್ತದೆ.

ಕಳೆದ ವರ್ಷ ವಿಶ್ವಸಂಸ್ಥೆಯ ಮಹಾ ಅಧಿವೇಶನದಲ್ಲಿ ಮಾತನಾಡಿದ ಪ್ರಧಾನಿ ಮೋದಿ, "ಮನಸ್ಸು, ದೇಹ ಮತ್ತು ಆತ್ಮಗಳ ಆರೋಗ್ಯಕ್ಕೆ ಇಂದು ಅನಿವಾರ್ಯವಾಗಿರುವ ಭಾರತದ ಯೋಗವನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಆಚರಿಸಬೇಕು. ಜೂನ್ 21ನ್ನು ವಿಶ್ವ ಯೋಗ ದಿನವನ್ನಾಗಿ ಘೋಷಿಸಬೇಕು," ಎಂದು ಆಗ್ರಹಿಸಿದ್ದರು. ಅದರಂತೆ ಕಳೆದ ವರ್ಷದಿಂದ ಜೂ 21ನ್ನು ವಿಶ್ವ ಯೋಗ ದಿನವನ್ನಾಗಿ ಆಚರಿಸಲಾಗುತ್ತಿದೆ. ವಿಶ್ವಮನ್ನಣೆಗೆ ಪಾತ್ರವಾದ ಯೋಗದ ಮೂಲ ಭಾರತವೆಂದು ಹೇಳಿಕೊಳ್ಳಲು ನಾವು ನಿಜವಾಗಿಯೂ ಹೆಮ್ಮೆ ಪಡಲೇಬೇಕು. ಏಕೆಂದರೆ ಈ ಯೋಗಕ್ಕೆ ಅಷ್ಟೊಂದು ಶಕ್ತಿಯಿದೆ. ನಮ್ಮ ಪಾಲಿಗೆ ಅದೊಂದು ಬರಿ ವ್ಯಾಯಾಮವಲ್ಲ ಅದೊಂದು ತಪಸ್ಸು. ಸಾವಿರಾರು ವರ್ಷಗಳ ಹಿಂದೆಯೇ ಭಾರತದಲ್ಲಿ ಯೋಗದ ಜನನವಾಗಿತ್ತು. ಭಾರತದ ಪ್ರಾಚೀನ ವಿದ್ಯೆಯಾದ ಯೋಗವು ಇಂದು ಬಹುರೂಪಿಯಾಗಿ ವಿಶ್ವಾದ್ಯಂತ ಹರಡಿರುವುದು ಮೇಲ್ನೋಟಕ್ಕೆ ಕಾಣಿಸುತ್ತಿದೆ. ವಿಜ್ಞಾನ, ಗಣಿತ, ತತ್ವಶಾಸ್ತ್ರ, ಕಲೆ ಇವೇ ಮುಂತಾದ ಕ್ಷೇತ್ರಗಳಿಗೆ ಪ್ರಾಚೀನ ಭಾರತದ ಕೊಡುಗೆಗಳೆಲ್ಲ ನಗಣ್ಯವಾಗಿ ಯೋಗಶಾಸ್ತ್ರವೇ ಮನುಕುಲಕ್ಕೆ ಭಾರತದ ಅತಿ ಶ್ರೇಷ್ಠವಾದ ಕೊಡುಗೆಯೆಂದು ಹೇಳಲಾಗುತ್ತಿದೆ. ■


Downloaded From:www.kpscvaani.com



# ಅಂಧರು ಕೆತ್ತಿದ ಸುಂದರ ರಥ

ಕಿಶನರಾವ್ ಕುಲಕರ್ಣಿ

**ಕೊಪ್ಪಳ ಜಿಲ್ಲೆಯ ಮಾಲಗಿತ್ತಿ ಗ್ರಾಮದಲ್ಲಿ ಇತ್ತೀಚೆಗೆ ಜರುಗಿದ ಮಾರುತೇಶ್ವರ ರಥೋತ್ಸದಲ್ಲಿ ಅಂಧ ಸಹೋದರರು ಕೆತ್ತನೆ ಮಾಡಿರುವ ರಥದ ಕುರಿತೇ ಎಲ್ಲರೂ ಮಾತನಾಡುತ್ತಿದ್ದರು.**



ಈಚೆಗೆ ಕೊಪ್ಪಳ ಜಿಲ್ಲೆ ಕುಷ್ಟಗಿ ತಾಲೂಕಿನ ಮಾಲಗಿತ್ತಿ ಗ್ರಾಮದ ಮಾರುತೇಶ್ವರ ರಥೋತ್ಸವಕ್ಕೆ ಸುತ್ತಲಿನ ಹತ್ತಾರು ಹಳ್ಳಿಗರು ಸೇರಿದಂತೆ ವಿವಿಧ ಜಿಲ್ಲೆಗಳಿಂದ ಜನ ತಂಡೋಪತಂಡವಾಗಿ ಹೋಗುತ್ತಿದ್ದರು. ಊರು ಅಂದ ಮೇಲೆ ಜಾತ್ರೆ, ರಥೋತ್ಸವ ಜರುಗುವುದು ಸಾಮಾನ್ಯ. ಆದರೆ ಮಾಲಗಿತ್ತಿ ಗ್ರಾಮದಲ್ಲಿ ನಡೆದ ರಥೋತ್ಸವಕ್ಕೆ ಯಾಕಿಷ್ಟು ಮೆರಗು ಎಂದು ಆಶ್ಚರ್ಯಪಟ್ಟವರೂ ಇದ್ದರು.

ಅಂದ ಹಾಗೆ ಬಹುತೇಕರಲ್ಲಿ ಈ ರಥೋತ್ಸವ ನೋಡುವ ಕಾತುರಕ್ಕೆ ಮುಖ್ಯ ಕಾರಣವೆಂದರೆ ಅಂಧ ಕಲಾವಿದ ಸಹೋದರರಾದ ಸುರೇಶ ಬಡಿಗೇರ ಹಾಗೂ ಮಹೇಶ ಬಡಿಗೇರ ಅವರು 29 ಅಡಿ ಎತ್ತರದ ಸುಂದರವಾದ ರಥವನ್ನು ತಮ್ಮ ಸಹಾಯಕರೊಡಗೂಡಿ ನಿರ್ಮಾಣ ಮಾಡಿದ್ದರು.

ಸುಲಭವಾಗಿ ನಡೆದಾಡಲು ಕಷ್ಟಪಡುವ ಅಂಧರು ಅದು ಹೇಗೆ ತಾನೆ ಇಂತಹ ಸುಂದರ ಕೆತ್ತನೆಯ ರಥ ತಯಾರಿಸಿದ್ದಾರೆ ಎಂದು ನೋಡುವ ಕುತೂಹಲವೂ ಜನರಲ್ಲಿತ್ತು. ಅಲ್ಲದೆ ಸುಮಾರು ದಿನಗಳಿಂದ ಈ ಭಾಗದಲ್ಲಿ ಅಂಧ ಸಹೋದರರಿಬ್ಬರು ರಥ ಕೆತ್ತನೆ ಮಾಡುತ್ತಿದ್ದಾರೆ ಎಂಬ ಮಾಹಿತಿ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ್ದು ಈ ಪ್ರಮಾಣದಲ್ಲಿ ಜನ ಸೇರಲು ಕಾರಣವೂ ಆಗಿತ್ತು. ರಥೋತ್ಸವದ ಬಳಿಕ ಪ್ರತಿಯೊಬ್ಬರ ಬಾಯಿಯಲ್ಲೂ ರಥ ಕೆತ್ತನೆ ಮಾಡಿದ ಬಾಗಲಕೋಟೆ ಜಿಲ್ಲೆಯ ಬದಾಮಿ ತಾಲೂಕಿನ ಬೇಲೂರ ಗ್ರಾಮದ ಈ ಅಂಧ ಸಹೋದರರದ್ದೇ ಮಾತಾಗಿತ್ತು.

**ಕಣ್ಣಿಲ್ಲದವರು ಕೆತ್ತಿದ ರಥವ ಕಣ್ಣಿದ್ದವರು ನೋಡಿದರು:**

ಸುಮಾರು ಐದು ವರ್ಷಗಳ ಕಾಲ ಹಗಲು ರಾತ್ರಿ ಎನ್ನದೆ ಈ ಸಹೋದರರು ರೂಪಿಸಿದ ಅಂದವಾದ ರಥವನ್ನು ಕಣ್ಣಿದ್ದವರು ನೋಡಿ ಖುಷಿಪಟ್ಟರು. ಕೊಪ್ಪಳದ ಗವಿಮಠದ ಶ್ರೀ ಅಭಿನವ ಗವಿಸಿದ್ದೇಶ್ವರಶ್ರೀಗಳು, ಮೈಸೂರು ಸಂಸ್ಥಾನ ಕುದರಿಮೋತಿ ಮಠದ ಶ್ರೀ ವಿಜಯಮಹಾಂತಶ್ರೀಗಳು ರಥೋತ್ಸವಕ್ಕೆ ಚಾಲನೆ ನೀಡಿ ಅಂಧರ ಈ ರಥೋತ್ಸವಕ್ಕೆ ಹೊಸ ಭಾಷ್ಯೆ ಬರೆದರು. ಸಾವಿರಾರು ಜನರ ಸಮ್ಮುಖದಲ್ಲಿ ಈ ಇಬ್ಬರು ಸಹೋದರರನ್ನು ಸನ್ಮಾನಿಸಿ ಪ್ರೋತ್ಸಾಹಿಸಿದರು.

ಅಂಧತ್ವ ಅಥವಾ ದೇಹದಲ್ಲಿ ಊನವಾದರೆ ಅದು ಶಾಪ ಎಂದು ತಿಳಿದುಕೊಳ್ಳುವವರೆ ಹೆಚ್ಚು. ಆದರೆ ಈ ಇಬ್ಬರು ಸಹೋದರರು ತಮ್ಮ ಅಂಗವೈಕಲ್ಯವನ್ನೇ ಮೆಟ್ಟಿ ನಿಂತು ಸುಂದರವಾದ ರಥವನ್ನು ತಯಾರಿಸಿ ಈ ಭಾಗದ ಜನರ ಗೌರವ ಸಂಪಾದನೆ ಮಾಡಿದ್ದಾರೆ. ಯಾವಾಗ ಅಂಧರು


Downloaded From:www.kpscvaani.com





ತಯಾರಿಸಿದ ಸುಂದರ ರಥ ಎಳೆಯಿತೊ ಅಲ್ಲಿಂದ ನಾಡಿನ ವಿವಿಧ ಭಾಗಗಳಿಂದ ರಥ ತಯಾರಿಸುವುದಕ್ಕಾಗಿ ಈ ಅಂಧ ಕಲಾವಿದರಿಗೆ ಬೇಡಿಕೆಯ ಸುರಿಮಳೆಯಾಗುತ್ತಿದೆ. ಕಾಷ್ಠಕಲೆಯಲ್ಲಿ ರಾಜ್ಯ ಪ್ರಶಸ್ತಿ ಪಡೆದ ಮಲ್ಲಪ್ಪ ಬಡಿಗೇರರವರು ಶ್ರೀಶೈಲ, ಯಡೆಯೂರು, ಬೇಲೂರು ಸೇರಿದಂತೆ ರಾಜ್ಯದಲ್ಲಿ 35 ಕ್ಕೂ ಹೆಚ್ಚು, ಹಾಗೂ ಆಂಧ್ರಪ್ರದೇಶದಲ್ಲಿ ಒಂದು ರಥ ತಯಾರಿಸಿದ್ದಾರೆ. ಮಲ್ಲಪ್ಪ ತೇರು(ರಥ) ತಯಾರಿಸುವ ಕಲೆಯನ್ನು ತಮ್ಮ ವಂಶಪಾರಂಪರ್ಯವಾಗಿ ರೂಢಿಸಿಕೊಂಡು ಬಂದಿದ್ದಾರೆ. ಅವರ ತಂದೆಯೂ ರಥ ತಯಾರಿಸುವುದರಲ್ಲಿ ಸಿದ್ಧಹಸ್ತರಾಗಿದ್ದರು. ಮಲ್ಲಪ್ಪ ತಯಾರಿಸಿದ ರಥಗಳಲ್ಲಿ ಮಕ್ಕಳಾದ ಸುರೇಶ ಮತ್ತು ಮಹೇಶ ಅವರ ಪರಿಶ್ರಮವೂ ಅಡಗಿತ್ತು.

ತಮ್ಮ ಮಕ್ಕಳು ಅಂಧರಾಗಿರುವ ಕಾರಣದಿಂದ ಅನಾದಿ ಕಾಲದಿಂದಲೂ ಬಂದ ತಮ್ಮ ಕುಟುಂಬದ ಪರಂಪರೆ ಮುಂದೆ ನಿಂತು ಹೋಗುತ್ತದೆಯೇನೋ? ಎಂಬ ಕೊರಗಿನಲ್ಲಿಯೇ ಅವರು ತೀರಿ ಹೋದರು. ಆದರೆ ಈ ಸಹೋದರರು ಶ್ರದ್ಧೆಯಿಂದ ಕಾರ್ಯನಿರ್ವಹಿಸಿ ರಥ ತಯಾರಿಸಿ ತಂದೆಯ ಕೊರಗನ್ನು ನಿವಾರಿಸಿ ಅವರ ಆತ್ಮಕ್ಕೆ ಶಾಂತಿ ನೀಡಿದ್ದಾರೆ. ಅಷ್ಟೇ ಅಲ್ಲ, ಕುಟುಂಬದ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗವ ಜೊತೆಗೆ ತಮ್ಮ ಮಕ್ಕಳಿಗೂ ರಥ ತಯಾರಿಸುವ ಪಾಠ ಮಾಡುತ್ತಿದ್ದಾರೆ.

**ಬೆರಳು ಸ್ಪರ್ಶದಿಂದಲೇ ಕುಸುರಿ ಕೆತ್ತನೆ:**

ಈ ಸಹೋದರರು ಕೇವಲ ರಥ ಕೆತ್ತನೆ ಅಲ್ಲದೆ ಪಲ್ಲಕ್ಕಿ, ದೇವರ ಮೂರ್ತಿಗಳು, ತೊಟ್ಟಿಲು, ದೇವರ ಚೌಕಿಗಳನ್ನು ತಯಾರಿಸುತ್ತಾರೆ. ಸಂಪೂರ್ಣವಾಗಿ ಎರಡೂ ಕಣ್ಣು ಕಾಣದಿದ್ದರೂ ಈ ಸಹೋದರರು ಕೇವಲ ಬೆರಳುಗಳ ಸ್ಪರ್ಶದಿಂದಲೇ ಕೆತ್ತನೆ ಮಾಡುತ್ತಾರೆ. ರಥದ ಒಂದೊಂದೆ ಭಾಗಗಳನ್ನು ಸಿದ್ಧಮಾಡಿಕೊಂಡ ಬಳಿಕ ಒಂದಕ್ಕೊಂದು ಜೋಡಿಸಿ ರಥ ಸಿದ್ಧಪಡಿಸುವುದರಿಂದ ಕೆಲಸ ಕೊಂಚ ನಿಧಾನವಾಗುತ್ತದೆ. ಈ ಕಾರಣವಾಗಿ ಹಗಲು ರಾತ್ರಿ ಎನ್ನದೆ ತಾವು ವಾಸ್ತವ್ಯ ಹೂಡಿರುವ ಸ್ಥಳದಲ್ಲಿಯೇ ಕಾರ್ಯ ನಿರ್ವಹಿಸುತ್ತಾರೆ. ರಥದ ಯಾವ ಭಾಗದ ಕಲಾಕೃತಿ ತಯಾರಾಗಿದೆ, ಅದರ ಅಳತೆ ಎಷ್ಟಿದೆ, ಇನ್ನು ಯಾವ ಯಾವ ವಸ್ತುಗಳನ್ನು ತಯಾರಿಸುವ ಕೆಲಸ ಬಾಕಿ ಇದೆ, ಎಲ್ಲೆಲ್ಲಿ ಕುಸುರಿ ಕೆಲಸ ಮಾಡಬೇಕಾಗಿದೆ, ಉಳಿದ ಕಟ್ಟಿಗೆ, ಬೇಕಾಗುವ ಕಟ್ಟಿಗೆ ಹಾಗೂ ಇತರೆ ವಸ್ತುಗಳ ಮಾಹಿತಿ ಹೀಗೆ ಪ್ರತಿಯೊಂದನ್ನು ಕೇವಲ ತಮ್ಮ ಸ್ಮೃತಿಪಟಲದಲ್ಲಿಯೇ ತುಂಬಿಕೊಂಡಿರುತ್ತಾರೆ.

"ನಮಗೆ ಕಣ್ಣುಗಳಿಲ್ಲ, ರಾತ್ರಿಯಾವುದು ಹಗಲು ಯಾವುದು ಎಂಬುದು ಗೊತ್ತಿಲ್ಲ, ಕಣ್ಣಿಗೆ ಮಂಪರು ಆವರಿಸಿದಾಗ ಮಲಗುತ್ತೇವೆ, ಎಚ್ಚರವಾದಾಗ ಉಳಿ, ಕೊಡತಿ ಹಿಡಿದು ಕೆಲಸ ಮಾಡುತ್ತೇವೆ. ವಿದ್ಯುತ್ ಇಲ್ಲ, ಬೆಳಕಿಲ್ಲ ಎಂಬ ಕಣ್ಣಿರುವವರಿಗೆ ಇರುವ ಚಿಂತೆ ನಮಗಿಲ್ಲ. ನಮ್ಮನ್ನೇ ನಂಬಿದ ಕುಟುಂಬದ ಸದಸ್ಯರ ಹೊಟ್ಟೆ ಹೊರೆಯಲು ದುಡಿಯಬೇಕು, ಹಾಗೂ ನಮ್ಮ ತಂದೆ ಕೊರಗು ನಿವಾರಿಸಬೇಕು ಎಂಬ ಉದ್ದೇಶ ನಮ್ಮಲ್ಲಿ ಅಚಲವಾಗಿದೆ" ಎಂದು ಮಹೇಶ ಬಡಿಗೇರ ಹೇಳುತ್ತಾರೆ. ಕಣ್ಣು ಕಾಣದ ಪರಿಣಾಮವಾಗಿ ಹಲವಾರು ಬಾರಿ ಇವರ ಬೆರಳುಗಳು, ಹಸ್ತ, ಮುಂಗೈ, ಉಳಿ ಮತ್ತು ಕೊಡತಿಯ ಪೆಟ್ಟು ತಿಂದು ತಿಂದು ವಜ್ರದಷ್ಟು ಗಟ್ಟಿಯಾಗಿವೆ. "ನೋಡ್ರಿ ನಮ್ಮ ಬೆರಳುಗಳು, ಕೈಗಳು ಹೇಗಾಗಿವೆ, ಪೆಟ್ಟು ನೀಡಿದ ಉಳಿ, ಕೊಡತಿಗೆ ಬೇಸರವಾಗಿದೆಯೇ ವಿನಃ ರಥ ತಯಾರಿಸುವ ಹಂಬಲದ ಮುಂದೆ ನಮ್ಮ ಕೈಗಳಿಗೆ ಮಾತ್ರ ನೋವಾಗಿಲ್ಲ' ಎಂದು ಸುರೇಶ ಹೇಳುತ್ತಾರೆ.

ಆದಾಗ್ಯೂ ರಥ ನಿರ್ಮಾಣದ ಕಾರ್ಯ ಸಂಪೂರ್ಣ ಸಾಧ್ಯವಾಗುವುದರಲ್ಲಿ ಕಣ್ಣಿರುವ ಮಕ್ಕಳು ಹಾಗೂ ಸಹಕಲಾವಿದರ ಸಹಕಾರ ಇವರಿಗೆ ಅಗತ್ಯವಾಗುತ್ತದೆ. ಎಷ್ಟೆಲ್ಲಾ ನಿಪುಣತನದಿಂದ ಕೆಲಸ ನಿರ್ವಹಿಸಿದರೂ ತಾವು ಮಾಡಿದ ಕೆಲಸವನ್ನು ಪರಿಶೀಲಿಸುವುದಕ್ಕಾಗಿ ಕಣ್ಣಿರುವ ಕಲಾವಿದರ ನೆರವು ಪಡೆಯುತ್ತಾರೆ. ಹೀಗಾಗಿ ತಾವು ಕೆಲಸ ನಿರ್ವಹಿಸುವುದರ ಜೊತೆಗೆ ಬಹುತೇಕವಾಗಿ ರಥ ನಿರ್ಮಾಣದಲ್ಲಿ ನಿರ್ದೇಶಕ ಸ್ಥಾನದಲ್ಲಿ ನಿಂತು ತಮ್ಮ ಕೆಲಸಗಾರರ ಮೂಲಕ ಹೆಚ್ಚಿನ ಕಾರ್ಯ ಮಾಡಿಸುತ್ತಾರೆ. ವಿಕಲಚೇತನರು ಮನಸ್ಸು ಮಾಡಿದರೆ ಏನಾದರೂ ಸಾಧಿಸಬಹುದು ಎಂಬುವುದಕ್ಕೆ ಇವರು ಸಾಕ್ಷಿಯಾಗಿದ್ದಾರೆ.

ರಥದಲ್ಲಿ ಆಂಜನೇಯನ ವಿವಿಧ ಭಂಗಿಗಳು, ಅಷ್ಟದಿಕ್ಪಾಲಕರು, ಆದಿಶಕ್ತಿ, ಶಿವಪಾರ್ವತಿ, ನಟರಾಜ, ಸರಸ್ವತಿ, ಲಕ್ಷ್ಮೀ, ಗಣೇಶ, ಷಣ್ಮುಖ, ನಂದಿ ಬಸವೇಶ್ವರ, ಕುಮಾರೇಶ್ವರ ಶ್ರೀಗಳು, ಪಂಚಾಕ್ಷರ ಗವಾಯಿಗಳು, ಪುಟ್ಟರಾಜ ಗವಾಯಿಗಳು, ಸದಾಶಿವ ಶ್ರೀಗಳು, ಆನೆಗಳ ಸಾಲು, ಸಿಂಹ, ಜಾಲರಿ ಮತ್ತು ಬಳ್ಳಿಯನ್ನು ಸೂಕ್ಷ್ಮವಾಗಿ ಕೆತ್ತನೆ ಮಾಡಿರುವುದು ಆಕರ್ಷವಾಗಿದೆ.

**ರಥ ಕೆತ್ತನೆ ಮಾಡಿ ತಂದೆಯ ಋಣ ತೀರಿಸಿದರು:**

ರಥ ಕೆತ್ತನೆಯಲ್ಲಿ ಪಳಗಿದ್ದ ಇವರ ತಂದೆ ಮಲ್ಲಪ್ಪ ಮಳಿಯಪ್ಪ ಬಡಿಗೇರ ಅವರು ಸಾಮಾನ್ಯವಾಗಿ ರಥ ನಿರ್ಮಾಣ ಮಾಡುವ ಸಂಬಂಧ ಗ್ರಾಮಸ್ಥರೊಂದಿಗೆ ಮಾತುಕತೆಯಾದರೆ 3 ವರ್ಷಗಳಿಂದ 5 ವರ್ಷಗಳವರೆಗೆ ಅದೇ ಗ್ರಾಮದಲ್ಲಿ ಕುಟುಂಬ ಸಮೇತ ವಾಸ್ತವ್ಯ ಹೂಡಿ ಕಾರ್ಯನಿರ್ವಹಿಸುತ್ತಿದ್ದರು. ರಥೋತ್ಸವ ನಡೆಸಿದ ಬಳಿಕವೇ ಗ್ರಾಮಸ್ಥರಿಂದ ಉಡುಗೊರೆ ಪಡೆದು ಬೀಳ್ಕೊಡುಗೆ ಪಡೆದು ಮರಳುವುದು ಈ ಕುಟುಂಬದ ವಾಡಿಕೆಯಾಗಿತ್ತು.

ಹೀಗಾಗಿ ಹಿಡಿದ ಕೆಲಸ ಶ್ರದ್ಧೆಯಿಂದ ಅಚ್ಚುಕಟ್ಟಾಗಿ ಮಾಡುತ್ತಾರೆ ಎಂಬ ಕಾರಣದಿಂದಲೇ ಹಲವಾರು ಮಠಗಳಿಂದ ಹಾಗೂ ಗ್ರಾಮದ ಸಮುದಾಯಗಳಿಂದ ಹೊಸ ರಥ ನಿರ್ಮಾಣಕ್ಕೆ ಈ ಕುಟುಂಬಕ್ಕೆ ಬೇಡಿಕೆ ಬರುತ್ತಿತ್ತು. ಅದೇ ರೀತಿ ಗ್ರಾಮದ ಮುಖಂಡರು ಮಲ್ಲಪ್ಪ ಅವರಿಗೆ ರಥ ನಿರ್ಮಾಣಕ್ಕೆ ಮುಂಗಡ ಹಣ ನೀಡಿ ಒಪ್ಪಿಗೆ ಪಡೆದುಕೊಂಡಿದ್ದರು. ಅಲ್ಲದೆ ರಥಕ್ಕೆ ಬೇಕಾಗುವ ಮಾದರಿಯಲ್ಲಿ ಗ್ರಾಮಸ್ಥರಿಂದ ಮರಗಳನ್ನೂ ಕತ್ತರಿಸಿದ್ದರು. ಆದರೆ ದುರ್ದೈವ ಇನ್ನೇನೂ ರಥ ನಿರ್ಮಾಣಕ್ಕೆ ಮುಂದಾಗಬೇಕು ಎಂಬಷ್ಟರಲ್ಲಿಯೇ 2018ರಲ್ಲಿ ಮಲ್ಲಪ್ಪ ಅವರು ಮರಣ ಹೊಂದಿದರು.

ಗ್ರಾಮಸ್ಥರಿಗೆ ಚಿಂತೆ ಆವರಿಸಿತು. ಆಗ ಗ್ರಾಮಸ್ಥರಿಗೆ ಈ ಸಹೋದರರು "ನೀವು



Downloaded From:www.kpscvaani.com

ಸಹಕಾರ ನೀಡಿದರೆ ನಾವು ರಥ ನಿರ್ಮಾಣ ಮಾಡಿ ನಮ್ಮ ತಂದೆಯ ಋಣ ತೀರಿಸುತ್ತೇವೆ" ಎಂದು ಆತ್ಮವಿಶ್ವಾಸದಿಂದ ತಿಳಿಸಿದರು. ಇದನ್ನು ಕೇಳಿದ ಗ್ರಾಮಸ್ಥರಿಗೆ ಆಶ್ಚರ್ಯವಾಯಿತು. ಕಟ್ಟಿಗೆಯ ಮೇಲೆ ಹಾಕುವ ಸೀಸದ ಗೆರೆಯೂ ಇವರ ಕಣ್ಣಿಗೆ ಗೋಚರಿಸುವುದಿಲ್ಲ. ಅದ್ಹೇಗೆ ತಾನೆ ಇವರಿಂದ ರಥ ನಿರ್ಮಾಣ ಮಾಡಲು ಸಾಧ್ಯ ಎಂದು ಸಂದೇಹ ವ್ಯಕ್ತಪಡಿಸಿದರು. ಆದರೆ ಗ್ರಾಮದ ಹಿರಿಯರು ನಮ್ಮೂರಿನ ತೇರನ್ನು ಇವರೇ ಮಾಡಲಿ ಎಂದು ಒಪ್ಪಿಗೆ ಸೂಚಿಸಿದರು. ಹಾಗಾಗಿ ಈ ಅಂಧ ಸಹೋದರರು ತಮ್ಮ ಸಂಗಡಿಗರು ಹಾಗೂ ಮಕ್ಕಳ ಸಹಕಾರದಿಂದ ಸತತ ನಾಲ್ಕು ವರ್ಷಗಳ ಪ್ರಯತ್ನದ ಫಲವಾಗಿ 29 ಅಡಿ ಎತ್ತರದ ರಥವನ್ನು ನಿರ್ಮಾಣ ಮಾಡಿದರು.

ಆದರೆ ಆತ್ಮವಿಶ್ವಾಸದ ಮುಂದೆ ಎಲ್ಲವೂ ಶೂನ್ಯ ಎಂಬಂತೆ ಈ ಅಂಧ ಸಹೋದರರ ಮೇಲೆ ವಿಶ್ವಾಸವಿಟ್ಟ ಗ್ರಾಮಸ್ಥರು "ಅದೇನು ಮಾಡ್ತಿರೋ ಮಾಡ್ರಿ, ಒಂದು ವೇಳೆ ರಥ ನಿಮ್ಮಿಂದ ನಿರ್ಮಾಣವೇ ಆದರೆ ನಿಮ್ಮ ಹೆಸರಿನೊಂದಿಗೆ ನಮ್ಮ ಊರಿನ ಹೆಸರೂ ಇತಿಹಾಸದ ಪುಟಗಳಲ್ಲಿ ಸೇರುವುದರಲ್ಲಿ ಸಂದೇಹವಿಲ್ಲ" ಎಂದು ರಥ ನಿರ್ಮಾಣಕ್ಕೆ ಅಂದು ಹಸಿರು ನಿಶಾನೆ ತೋರಿದ್ದು ಇಂದು ಆ ಮಾತು ಇತಿಹಾಸ ನಿರ್ಮಾಣಕ್ಕೆ ಸಾಕ್ಷಿಯಾಗಿದೆ. ಈ ರಥವು ಅಂಧರು ತಯಾರಿಸಿದ ನಾಡಿನ ಮೊಟ್ಟ ಮೊದಲ ರಥ ಎಂಬ ಕೀರ್ತಿಗೂ ಪಾತ್ರವಾಯಿತು.

**ತಂದೆಯಿಂದ ಕಲಿತ ವಿದ್ಯೆ ಕೈ ಹಿಡಿಯಿತು:**

ಮಲ್ಲಪ್ಪ ಬಡಿಗೇರ ತಮ್ಮ ಬದುಕಿನುದ್ದಕ್ಕೂ ರಥಗಳನ್ನೇ ನಿರ್ಮಿಸಿದ್ದಾರೆ. ರಥ ನಿರ್ಮಾಣ ಕಾರ್ಯದಲ್ಲಿ ಕುಟುಂಬ ಸಮೇತವಾಗಿಯೇ ತೊಡಗುತ್ತಿರುವ ಕಾರಣದಿಂದಾಗಿ ಕುಟುಂಬದ ಸದಸ್ಯರೆಲ್ಲರೂ ಕಾಷ್ಠಕಲಾವಿದರಾಗಿದ್ದಾರೆ. ಸುರೇಶ ಹಾಗೂ ಮಹೇಶ ಅವರಿಗೆ ಈ ಹಿಂದೆ ಸಹಜವಾಗಿ ಕಣ್ಣುಗಳು ಕಾಣುತ್ತಿದ್ದವು. ಆ ಸಮಯದಲ್ಲಿ ತಂದೆಯ ಜೊತೆಗೂಡಿ ರಥ ತಯಾರಿಸಿದ ಸಾಕಷ್ಟು ಅನುಭವ ಈ ಸಹೋದರರಿಗೆ ಇತ್ತು. ರಥಕ್ಕೆ ಬೇಕಾಗುವ ಕಟ್ಟಿಗೆಯ ಅಳತೆ, ಕುಸುರಿ ಕಲೆಯ ವಿಧಾನ, ಗಾಲಿಗಳ ಅಳತೆ, ರಥದ ಸಮತೋಲನ ಕಾಪಾಡುವುದಕ್ಕೆ ಮಾಡಲೇಬೇಕಾದ ತಾಂತ್ರಿಕ ವಿಧಾನ, ದೇವರ ವಿವಿಧ ಅವತಾರಗಳ ಚಿತ್ರ ಕೆತ್ತನೆ, ತಳಿರು ತೋರಣ, ಪಕ್ಷಿಗಳು... ಹೀಗೆ ರಥ ನಿರ್ಮಾಣಕ್ಕೆ ಅವಶ್ಯವಿರುವ ಎಲ್ಲ ಬಗೆಯ ತರಬೇತಿಯನ್ನು ತಂದೆಯಿಂದ ಬಳುವಳಿಯಾಗಿ ಪಡೆದುಕೊಂಡಿದ್ದರು.

ಇವರ ತಾಯಿ ಪ್ರಮೀಳಾ ಮಲ್ಲಪ್ಪ ಬಡಿಗೇರ ಕೂಡಾ ಕಾಷ್ಠ ಕಲಾವಿದರಾಗಿದ್ದಾರೆ. ತಂದೆ ಮಲ್ಲಪ್ಪ ರಥ ತಯಾರಿಸುವಾಗ ಪ್ರತಿ ಹಂತದಲ್ಲೂ ಪ್ರಮೀಳಾ ಅವರಿಗೆ ತೋರಿಸುವುದು, ಅವರ ಮಾರ್ಗದರ್ಶನದಂತೆ ಸಣ್ಣಪುಟ್ಟ ಬದಲಾವಣೆ ಮಾಡುವುದು ನಡೆಯುತ್ತಿತ್ತು. ಕೆಲ ಬಾರಿ ರಥ ತಯಾರಿಸುವ ಪೂರ್ಣ ಜವಾಬ್ದಾರಿಯನ್ನು ಈ ಈರ್ವರು ಸಹೋದರರಿಗೆ ತಂದೆ ನೀಡುತ್ತಿದ್ದರು. ಆ ಎಲ್ಲಾ ಅನುಭವವೇ ಇಂದು ಸುರೇಶ ಮತ್ತು ಮಹೇಶ ಅಂಧರಾದರೂ ರಥ ಕೆತ್ತನೆ ಮಾಡುವಷ್ಟರ ಮಟ್ಟಿಗೆ ಬೆಳೆಯಲು ಕಾರಣವಾಗಿದೆ. ತಂದೆ ಇರುವಾಗ ಅವರ ಕೈಯಲ್ಲಿ ಕೆಲಸ ಮಾಡಿದ ಕೆಲಸಗಾರರನ್ನೇ ನೇಮಿಸಿಕೊಂಡು ಅವರಿಗೆ ನಿರ್ದೇಶನ ನೀಡುವುದರ ಮೂಲಕ ಅಭಿಯಂತರರ ರೀತಿಯಲ್ಲಿ ರಥ ಕೆತ್ತನೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

**ಕ್ರಮೇಣ ದೃಷ್ಟಿ ಕಳೆದುಕೊಂಡ ಸಹೋದರರು:**

ಹತ್ತನೆ ತರಗತಿವರೆಗೆ ಓದಿರುವ ಸುರೇಶ ಹಾಗೂ ಡಿಪ್ಲೊಮಾ ಶಿಕ್ಷಣ ಮುಗಿಸಿದ ಮಹೇಶ ತಮ್ಮ 20–22ನೇ ವಯಸ್ಸಿನ ಆಸುಪಾಸಿನಲ್ಲಿ ರೇಟಿನಾ ಸಮಸ್ಯೆ ಮತ್ತು ನರಗಳ ದೌರ್ಬಲ್ಯದಿಂದ ಕ್ರಮೇಣ ತಮ್ಮ ಎರಡೂ ಕಣ್ಣಿನ ದೃಷ್ಟಿಯನ್ನು ಕಳೆದುಕೊಂಡರು. ದುಡಿಯುವ ವಯಸ್ಸಿಗೆ ಬಂದ ಮಕ್ಕಳು ಕುರುಡರಾಗಿದ್ದು ಮಲ್ಲಪ್ಪ ಅವರ ಚಿಂತೆಗೆ ಕಾರಣವಾಗಿತ್ತು. ಆದಾಗ್ಯೂ ಎದೆಗುಂದದೇ ತಂದೆಗೆ ಸಣ್ಣಪುಟ್ಟ ಸಹಾಯ ಮಾಡುತ್ತಾ ರಥದ ಕೆಲಸದಲ್ಲಿ ಆತ್ಮವಿಶ್ವಾಸದಿಂದ ತೊಡಗುತ್ತಿದ್ದರು.

"ವೃದ್ಧಾಪ್ಯದಲ್ಲಿ ತಂದೆಯ ಕೈ ಹಿಡಿದುಕೊಂಡು ಮಕ್ಕಳು ಬರುವುದನ್ನು ನೋಡುತ್ತೇವೆ, ಆದರೆ ಮಲ್ಲಪ್ಪ ಅವರು ವೃದ್ಧಾಪ್ಯದಲ್ಲಿ ತಮ್ಮ ಎರಡೂ ಮಕ್ಕಳ ಕೈಹಿಡಿದುಕೊಂಡು ಬರುತ್ತಿರುವುದನ್ನು ನಾವು ನೋಡಿದಾಗ ಕರುಳು ಹಿಂಡಿದಂತಾಗುತ್ತಿತ್ತು, ಮಲ್ಲಪ್ಪ ಅವರಿಗೆ ತಮ್ಮ ಮಕ್ಕಳ ಭವಿಷ್ಯದ ಬಗ್ಗೆ ದೂರದೃಷ್ಟಿ ಇತ್ತು. ಹಾಗಾಗಿ ಅವರು ಮಕ್ಕಳಿಗೆ ಕಾಷ್ಠ ಕಲೆಯ ಕೆಲಸ ಮಾಡುವ ತರಬೇತಿ ನೀಡುತ್ತಿದ್ದರು. ಬೇರೆಯವರು ಈ ದೃಶ್ಯ ನೋಡಿದರೆ ಅಂಧ ಮಕ್ಕಳಿಂದ ಇಂತಹ ಕಷ್ಟದ ಕೆಲಸ ಮಾಡಿಸಲು ಇವರಿಗೆ ಮನಸ್ಸು ಹೇಗೆ ಬರುತ್ತದೆ ಎಂದು ತಮ್ಮಲ್ಲೇ ಪ್ರಶ್ನೆ ಮಾಡಿಕೊಳ್ಳುತ್ತಿದ್ದರು. ಆದರೆ ಇದ್ಯಾವುದರ ಗೊಡವೆಗೆ ಹೋಗದ ಮಲ್ಲಪ್ಪ ಅವರು ತಮ್ಮ ಕಲೆಯ ಅನುಭವವನ್ನು ತಮ್ಮ ಮಕ್ಕಳಿಗೆ ಕಣ್ಣು ಇದ್ದಾಗ ಮತ್ತು ಕಣ್ಣು ಕಳೆದುಕೊಂಡ ನಂತರವೂ ತರಬೇತಿ ನೀಡಿದ ಪರಿಣಾಮವಾಗಿ ಇಂದು ಅವರು ಸ್ವಾವಲಂಬಿಯಾಗಿ ಬದುಕು ನಡೆಸಲು ಕಾರಣವಾಗಿದೆ" ಎಂದು ಸ್ಥಳೀಯರಾದ ಗುರುನಾಥ ಪತ್ತಾರ ಹಾಗೂ ಮುತ್ತಯ್ಯ ಘಂಟಿಮಠ ಅಭಿಮಾನದಿಂದ ಹೇಳುತ್ತಾರೆ.

ಈ ಸಹೋದರರು ಅಂಧರಾದರೂ ಯಂತ್ರಗಳ ನೆರವಿನಿಂದ ಕಟ್ಟಿಗೆ ಕತ್ತರಿಸುತ್ತಾರೆ, ರಥದ ಮೇಲೆ ಏರಿನಿಂತು ಅಳತೆಯನ್ನು ಪರೀಕ್ಷಿಸುತ್ತಾರೆ, ಕಟ್ಟಿಗೆಗಳನ್ನು ಕತ್ತರಿಸುವಾಗ ಕೈಯಿಂದ ಮೊಳ ಅಳೆದು ತಾವೇ ಕೊರೆಯಲು ಕೆಲಸಗಾರರಿಗೆ ಆದೇಶ ನೀಡುತ್ತಾರೆ, ಕುಸುರಿ ಕೆಲಸ ಮಾಡುವಾಗ ಯಾವ ಯಾವ ಭಾಗದಲ್ಲಿ ಎಂತಹ ಚಿತ್ರಗಳು ಕೆತ್ತನೆಯಾಗಬೇಕು ಎಂದು ತಿಳಿಸುತ್ತಾರೆ. ಕೆಲಸದ ಹಂತ ಹಂತದಲ್ಲೂ ಸ್ಪರ್ಶ ಜ್ಞಾನದ ಮೂಲಕ ಪರೀಕ್ಷೆ ಮಾಡುತ್ತಾರೆ. ತಮ್ಮ ಭುಜ, ಕೈ, ಕಾಲು, ಬೆರಳುಗಳೇ ಅವರಿಗೆ ಅಳತೆಯಪಟ್ಟಿಗಳಾಗಿವೆ.

"ನಮಗೆ ಬಾಹ್ಯ ಕಣ್ಣುಗಳು ಇಲ್ಲ, ಆದರೆ ಆಂತರಿಕ ಕಣ್ಣುಗಳಿವೆ, ಆ ಕಣ್ಣುಗಳಿಂದಲೇ ನಾವು ತಯಾರಿಸುವ ಹಾಗೂ ನಮ್ಮ ಕೆಲಸಗಾರರು ತಯಾರಿಸುವ ಕೆಲಸವನ್ನು ನೋಡುತ್ತೇವೆ, ಎಷ್ಟೋ ಬಾರಿ ನಮಗೆ ಸರಿಯಾಗಿ ಕಾಣದ ಕುಸುರಿ ಕೆಲಸವನ್ನು ಬದಲಾಯಿಸಿದ್ದೇವೆ, ನಮಗೆ ಕಣ್ಣುಗಳಿದ್ದಾಗ ಕೈಗಳು ಹೇಗೆ ಕೆಲಸ ಮಾಡುತ್ತಿದ್ದವೋ ಹಾಗೆನೇ ಈಗ ಕಣ್ಣುಗಳಿಲ್ಲದಿದ್ದರೂ ಅನುಭವದ ಆಧಾರದ ಮೇಲೆ ಕೈಗಳು ಚಕಚಕನೇ ಕೆಲಸ ಮಾಡುತ್ತವೆ" ಎಂದು ಹೇಳುವ ಮಹೇಶ್, ಆದಾಗ್ಯೂ ನಮಗೆ ಒಬ್ಬ ಸಹಾಯಕನ ನೆರವು ಅಗತ್ಯವಾಗಿರುತ್ತದೆ ಎನ್ನುತ್ತಾರೆ. ಈ ರಥ ತಯಾರು ಮಾಡಿದವರಿಗೆ ಬಾಹ್ಯ ಕಣ್ಣುಗಳಿಲ್ಲದ ಕಾರಣ ರಥ ಮಾಡಿದವರಿಗಿಂತ ನೋಡಿದವರೆ ಹೆಚ್ಚು ಖುಷಿಪಟ್ಟರು. ■



Downloaded From:www.kpscvaani.com

# ಪದಬಂಧ–31

| | | | | | | | | |
|---|---|---|---|---|---|---|---|---|
| 1 | | 2 | ■ | 3 | | 4 | | 5 |
| | ■ | 6 | | | ■ | | ■ | |
| 7 | | | ■ | | ■ | 8 | 9 | ■ |
| | ■ | ■ | 10 | | 11 | ■ | | ■ |
| 12 | 13 | | | ■ | 14 | | | 15 |
| ■ | | ■ | 16 | 17 | | ■ | ■ | |
| ■ | 18 | 19 | ■ | | ■ | 20 | | |
| 21 | ■ | | ■ | 22 | | | ■ | |
| 23 | | | | | ■ | 24 | | |

ವಿದ್ಯಾ ವಿ. ಹಾಲಭಾವಿ

## ಎಡದಿಂದ ಬಲಕ್ಕೆ

1. ಆಕಾಶದಲ್ಲಿ ಸಂಚರಿಸುವವನು (3)
3. ಮುಪ್ಪು ಸಾವು ಇಲ್ಲದಿರುವಿಕೆ (5)
6. ಸರಸದ ಮಾತುಕತೆ (3)
7. ಧನ ನೀಡಿ ಖರೀದಿಸಿದ ಉರುವಲು! (3)
8. ಸರಕ್ಕನೇ ಧರಿಸಿರುವ ಮಾಲೆ! (2)
10. ಅಶಕ್ತನ ಹತ್ತಿರವಿರುವ ಆಹಾರ! (3)
12. ಜೀವನಪರ್ಯಂತ ಎಂದು ಹೀಗೆನ್ನಿ (4)
14. ದಮಯಂತಿ ಪತಿ ತಯಾರಿಸಿದ ರುಚಿಕಟ್ಟಾದ ಅಡುಗೆ (4)
16. ಯಮನಿದ್ದಾಗಿನ ಸೂತ್ರ (3)
18. ಕನಸಲ್ಲಿ ಕಾಣಿಸಿದ ಕೊಳೆ (2)
20. ಪಣವಿಟ್ಟು ಮಾಡಿದ ಸಂಚಾರ! (3)
22. ನಾದಿನಿಗೆ ಕೇಳಿದ ಧ್ವನಿ! (3)
23. ರಾಮನ ಮಗನಿದ್ದರೆ ಈ ಹುರುಪು! (5)
24. ಕೊನೆಗೆ ಚಿತ್ರವಿದ್ದಾಗಲೇ ಇದು ಬೆರಗು! (3)

## ಮೇಲಿಂದ ಕೆಳಕ್ಕೆ

1. ಕರ್ನಾಟಕದಲ್ಲಿ ಜರುಗಿದ ದೇಶೀ ಕ್ರೀಡಾಕೂಟವಿದು (5)
2. ರಸ ಒಸರುವ ಜಿಹ್ವೆ (3)
3. ಸಂಸ್ಕೃತದಿಂದ ಹುಟ್ಟಿರುವ ಭಾಷೆ ಅಥವಾ ಪದ(4)
4. ರಾಯರಿಂದ ಬಂದಿರುವ ನಿರೂಪ! (3)
5. ಬೆಲೆಬಾಳುವ ಮಣಿ (2)
9. ತಿಳುವಳಿಕೆ ಇಲ್ಲದವನು ತಿರುಗಿದ್ದಾನಲ್ಲಾ! (3)
10. ಅವನಿರುವ ಭೂಮಿ! (3)
11. ಮನದಲ್ಲೇ ವಿಚಾರ ಮಾಡುವಿಕೆಯು ತಿರುವು ಮುರುವಾಗಿದೆ (3)
13. ತರ್ಕ ಮಾಡುತ್ತಿರುವ ವ್ಯಾಪಾರಿ! (3)
15. ಪರಿಶಿಷ್ಟಜಾತಿ ಪರಿಶಿಷ್ಟ ಪಂಗಡದ ಜನರ ಕುಂದುಕೊರತೆಗಳ ಪರಿಹಾರದ ಸಹಾಯವಾಣಿ (5)
17. ವನಿತೆ ತೆರೆದಿಟ್ಟ ಪರದೆ! (4)
19. ನೀರಿಗೊಂದು ಪರ್ಯಾಯ ಪದ (3)
20. ಪದ ಹೇಳಿ ಪಡೆದುಕೊಂಡಿರುವ ಡಿಗ್ರಿ! (3)
21. 2017 ನೇಸಾಲಿನ ಡಾ.ರಾಜ್‌ಕುಮಾರ್ ಪ್ರಶಸ್ತಿ ವಿಜೇತರಹೆಸರಿಲ್ಲಿ ಉಲ್ಟಾ ಕಾಣುತ್ತಿದೆ (2)

## ಉತ್ತರ

**ಮೇಲಿಂದ ಕೆಳಕ್ಕೆ**

1. ಖೇಲೋ‌ಇಂಡಿಯಾ 2. ರಸನ 3. ಅಪಭ್ರಂಶ 4. ರಾಯಸ 5. ರತ್ನ 9. ರಮಪಾ 10. ಅವನಿ 11. ನನಮ 13. ವರ್ತಕ 15. ಕಲ್ಯಾಣಮಿತ್ರ 17. ಯವನಿಕೆ 19.ಸಲಿಲ 20.ಪದವಿ 21.ಕ್ಷ್ಮೀಲ

**ಎಡದಿಂದ ಬಲಕ್ಕೆ**

1. ಖೇಚರ 3. ಅಜರಾಮರ 6. ಸಲ್ಲಾಪ 7. ಇಂಧನ 8. ಸರ 10.ಅಶನ 12.ಯಾವಜ್ಜೀವ 14. ನಳಪಾಕ 16. ನಿಯಮ 18. ಕಸ 20. ಪಯಣ 22.ನಿನಾದ 23.ಲವಲವಿಕೆ 24.ವಿಚಿತ್ರ

**–: ಸೂಚನೆ :–**

ಲೇಖನಗಳನ್ನು ಬರೆಯುವ ಆಸಕ್ತರು ವಾರ್ತಾ ಜನಪದಕ್ಕೆ ಲೇಖನಗಳನ್ನು ಕಳುಹಿಸಬಹುದು. ಸರ್ಕಾರದ ಯೋಜನೆಗಳು, ಅಭಿವೃದ್ಧಿಗಳು, ಪ್ರಗತಿಪರ ರೈತರ ಯಶೋಗಾಥೆ, ಜನಜಾಗೃತಿ ಮೂಡಿಸುವ ವಿಚಾರಗಳು, ಕರ್ನಾಟಕದ ಪ್ರೇಕ್ಷಣೀಯ ಸ್ಥಳಗಳು, ಕರ್ನಾಟಕದ ಇತಿಹಾಸ ಸಾರುವ ಗತ ವೈಭವಗಳು, ವಿವಿಧ ವಲಯದಲ್ಲಿ ಸಾಧನೆ ಮಾಡಿರುವ ರಾಜ್ಯದ ಸಾಧಕರ ಪರಿಚಯ ಇಂತಹ ವಿಷಯಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು.

ನುಡಿ ತಂತ್ರಾಂಶದಲ್ಲಿ ಟೈಪ್ ಮಾಡಿದ ಕನಿಷ್ಠ 500 ಪದಗಳಿಂದ 750 ಪದಗಳಿಗೆ ಮೀರದಂತೆ ಲೇಖನವನ್ನು ಪೂರಕವಾದ ಛಾಯಾಚಿತ್ರದೊಂದಿಗೆ ನಮ್ಮ ಇ–ಮೇಲ್ ವಿಳಾಸ janapada2008@gmail.comಗೆ ಕಳುಹಿಸಬಹುದು. ಲೇಖನಗಳ ಆಯ್ಕೆ ತೀರ್ಮಾನ ಅಂತಿಮವಾಗಿ ಸಂಪಾದಕ ಮಂಡಳಿಯದಾಗಿರುತ್ತದೆ. ಲೇಖನದ ಜೊತೆಗೆ ತಮ್ಮ ಹೆಸರು ವಿಳಾಸ ಮತ್ತು ದೂರವಾಣಿಯನ್ನು ನಮೂದಿಸತಕ್ಕದ್ದು.

Published by : Dr P S Harsha, IPS, Commissioner, Department of Information & Public Relation, 17, Varthasoudha, Bhagwan Mahaveer Road, Bangalore - 560 001
Printed at :M/s Lavanya Mudrana, #19, Vidyapeeta Circle, Banashankari 1st Stage, Bangalore-560050

Downloaded From:www.kpscvaani.com



ಮೇ 18 ರಂದು ಚಿಕ್ಕಮಗಳೂರಿನಲ್ಲಿ ಮುಖ್ಯಮಂತ್ರಿ ಬಸವರಾಜ ಎಸ್ ಬೊಮ್ಮಾಯಿ ಅವರು ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶೀಲಾನ್ಯಾಸ ನೆರವೇರಿಸಿದರು. ಈ ಸಂದರ್ಭದಲ್ಲಿ ಸಚಿವರಾದ ಕೋಟ ಶ್ರೀನಿವಾಸ ಪೂಜಾರಿ, ಶಾಸಕರುಗಳಾದ ಸಿ.ಟಿ. ರವಿ, ಬೆಳ್ಳಿ ಪ್ರಕಾಶ್, ಕುಮಾರಸ್ವಾಮಿ, ಎಂ.ಕೆ.ಪ್ರಾಣೇಶ್, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಡಿ.ಎನ್.ಜೀವರಾಜ್ ಸೇರಿದಂತೆ ಮತ್ತಿತರ ಗಣ್ಯರು ಉಪಸ್ಥಿತರಿದ್ದರು.



ಮೇ 16 ರಂದು ತುಮಕೂರಿನಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ ಎಂಪ್ರೆಸ್ ಶಾಲೆಯ ಆವರಣದಲ್ಲಿ ಆಯೋಜಿಸಲಾಗಿದ್ದ 2022–23 ನೇ ಸಾಲಿನ ಶೈಕ್ಷಣಿಕ ವರ್ಷದ ಶಾಲಾ ಪ್ರಾರಂಭೋತ್ಸವ, ಉಚಿತ ಪಠ್ಯಪುಸ್ತಕ ವಿತರಣೆ ಹಾಗೂ ಕಲಿಕಾ ಚೇತರಿಕೆ ವರ್ಷದ ಪ್ರಾರಂಭೋತ್ಸವ ಕಾರ್ಯಕ್ರಮವನ್ನು ಮುಖ್ಯಮಂತರಿಯವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಶಿಕ್ಷಣ ಸಚಿವರಾದ ಬಿ.ಸಿ.ನಾಗೇಶ್, ಗೃಹ ಸಚಿವರಾದ ಅರಗ ಜ್ಞಾನೇಂದ್ರ, ಸಂಸದ ಜಿ.ಎಸ್.ಬಸವರಾಜು, ಶಾಸಕರಾದ ಜ್ಯೋತಿ ಗಣೇಶ್, ನಾರಾಯಣಸ್ವಾಮಿ ಮತ್ತಿತರ ಗಣ್ಯರು ಉಪಸ್ಥಿತರಿದ್ದರು.

Downloaded From:www.kpscvaani.com

RNI No. KAR/KAN/2017/75029

Regd No.KA/BGGPO/2583/2021-23 Licensed to post without prepayment Licence No. PMG/BG/ WPP-365/2021-23
Published on 27th, Dt. 29th & 30th Posted at (Every month), Bangalore PSO, Mysore Road, Bangalore - 26



Downloaded From:www.kpscvaani.com